ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

21 ಮೇ 2014 ಪುಟ 20 ರೂ. 15/-

ಪುರುಷೋತ್ತಮ ಪೂಜಾರಿ

ವಿದಾಯ



ವಿಶೇಷ ಲೇಖನ

ಕನ್ನಡಕ್ಕೆ ಆಘಾತಕಾರಿ ತೀರ್ಪು

ರಾಜ್ ಮಗನ ಬಣ್ಣದ ಮಣ



ರಾಬಿನ್ ಉತ್ತಪ್ಪ

ತಂದೆ ಗುದ್ದಪ್ಪ ತಾಯಿ ಅತ್ತಪ್ಪ

ಫೈನಲ್ ಕಾದಾಟ ಸಂಭವ



ಕೋರ್ಟ್‌ನಲ್ಲಿ ನ್ಯಾಯ ಸಿಗುತ್ತದೆಯೇ

ಭಾಷೆ-ಬದುಕು

ಈ ರಾಜ್ಯದ ಯಾವುದೇ ಭಾಗದಲ್ಲಿ, "ಯಾವುದಾದರೂ ಒಂದು ಸಾರ್ವಜನಿಕ ಸಮಸ್ಯೆ ಕುರಿತು ಪತ್ರಿಕಾಗೋಷ್ಠಿಯನ್ನು ಮಾಡಿದರೆ ಪತ್ರಕರ್ತರ ಕಡೆಯಿಂದ ಕಡ್ಡಾಯವಾಗಿ ಒಂದು ಪ್ರಶ್ನೆ ಬಂದೇ ಬರುತ್ತದೆ. 'ಸರಿ, ನೀವು ಮುಂದೇನು ಮಾಡುತ್ತೀರಿ?'. ಅದಕ್ಕೆ ನೀವು ಏನು ಹೇಳಿದರೂ ಪತ್ರಕರ್ತರಿಗೆ ತೃಪ್ತಿಯಾಗುವುದಿಲ್ಲ. ಬದಲಿಗೆ 'ನೀವ್ಯಾಕೆ ಕೋರ್ಟಿಗೆ ಹೋಗಬಾರದು?' ಎಂಬ ಪ್ರಶ್ನೆ ತೂರಿಬರುತ್ತದೆ. ಇದಕ್ಕೆ ವ್ಯತಿರಿಕ್ತವಾದ ಉತ್ತರ ಕೊಡುವ ಹಾಗೇ ಇಲ್ಲ. ಏಕೆಂದರೆ ನ್ಯಾಯಾಲಯದಲ್ಲಿ ನ್ಯಾಯ ಸಿಗುವ ಭರವಸೆ ಇಲ್ಲ ಎಂಬ ಮಾತನ್ನು ನೀವು ಆಡುವಂತೆಯೇ ಇಲ್ಲ. ಈ ದೇಶದ ನ್ಯಾಯಾಂಗ ವ್ಯವಸ್ಥೆಯು ಕೆಲಸ ಮಾಡುತ್ತಿರುವ ರೀತಿಯ ಕುರಿತಂತೆ ಏನೇ ಅಭಿಪ್ರಾಯವಿದ್ದರೂ, ನೀವಂತೂ 'ಖಂಡಿತಾ, ಈ ಕುರಿತು ನ್ಯಾಯಾಲಯದಲ್ಲಿ ನಾವು ಮೊಕದ್ದಮೆ ಹೂಡುತ್ತೇವೆ' ಎಂದು ಹೇಳುವವರೆಗೂ ಅವರು ಬಿಡುವುದಿಲ್ಲ. ನೀವೊಂದು ವೇಳೆ ನ್ಯಾಯಾಲಯದಲ್ಲಿ ಈ ಕುರಿತು ಮೊಕದ್ದಮೆಯೊಂದನ್ನು ದಾಖಲಿಸದಿದ್ದರೆ, ಸಂಬಂಧಿಸಿದ ಸಾರ್ವಜನಿಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವ ಕುರಿತು ನಿಮಗೆ ಬದ್ಧತೆ ಇಲ್ಲ ಎಂದು ತೀರ್ಮಾನಿಸುವ ಮಟ್ಟಿಗೆ ಪತ್ರಕರ್ತರು ಮೇಲೆ ಬೀಳುತ್ತಿರುತ್ತಾರೆ.

ಈಗ ಮಾತೃಭಾಷಾ ಮಾಧ್ಯಮದ ವಿಚಾರದಲ್ಲಿ ಸುಪ್ರೀಂಕೋರ್ಟ್ ವ್ಯತಿರಿಕ್ತ ತೀರ್ಮಾನ ನೀಡಿದೆ. ಈ ಮೊಕದ್ದಮೆಯನ್ನು ಸುಪ್ರೀಂಕೋರ್ಟ್‌ನ ಸಂವಿಧಾನಪೀಠಕ್ಕೆ ವಹಿಸಿದಾಗಲೇ ಇದು ನಿರೀಕ್ಷಿತವಾಗಿತ್ತು, ತುಂಬಾ ವಿಳಂಬವನ್ನೂ ಮಾಡದೇ ಸಂವಿಧಾನಪೀಠವು ತನಗೆ ವಹಿಸಿ ಕೊಟ್ಟ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದೆ. ಯಾವುದನ್ನು ಪೋಷಕರು ಮಾತೃಭಾಷೆ ಎಂದು ನಿರ್ಧರಿಸುತ್ತಾರೋ ಅದೇ ಮಾತೃಭಾಷೆ ಎಂದು ಹೇಳಿದೆ. ಜೊತೆಗೆ ಪೋಷಕರು ತಮ್ಮ ಮಕ್ಕಳು ಯಾವ ಮಾಧ್ಯಮದಲ್ಲಿ ಕಲಿಯಬೇಕೆಂದು ನಿರ್ಧರಿಸುವ ಹಕ್ಕುಳ್ಳವರಾಗಿದ್ದಾರೆ ಎಂಬುದು ಕೋರ್ಟ್‌ನ ಅನಿಸಿಕೆಯಾಗಿದೆ. ಎತ್ತಿದೆತ್ತ ನೋಡಿದರೂ, ಸುಪ್ರೀಂಕೋರ್ಟ್ ಅತ್ಯಂತ ಆರ್ತಿಕವಾಗಿ ಮಾತನಾಡಿದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ನೂರಾರು ವರ್ಷಗಳ ಕಾಲ ಈ ವಿಚಾರದಲ್ಲಿ ನಡೆದಿರುವ ಸಂಶೋಧನೆ, ಜಗತ್ತಿನ ಬಹುತೇಕ ದೇಶಗಳಲ್ಲಿ ಇಂದು ಹಾಲಿ ಜಾರಿಯಲ್ಲಿರುವ ಭಾಷಾ ನೀತಿ, ಅದರಲ್ಲೂ ಅಭಿವೃದ್ಧಿ ಹೊಂದಿರುವ ದೇಶಗಳ ಭಾಷಾನೀತಿ, ಮಕ್ಕಳ ಮನಸ್ಸು-ಕಲಿಕೆ ಇತ್ಯಾದಿಗಳ ಕುರಿತು ನಡೆದಿರುವ ಅಧ್ಯಯನಗಳು, ಶಿಕ್ಷಣ ಶಾಸ್ತ್ರ (ಪೆಡಗಾಗಿ)ದ ಅಧ್ಯಯನಗಳು ಇವ್ಯಾವುದನ್ನೂ ಕೋರ್ಟು ಗಣನೆಗೆ ತೆಗೆದುಕೊಂಡಿಲ್ಲ.

ಕರ್ನಾಟಕ ಸರ್ಕಾರವು ಮಾತೃಭಾಷೆಯನ್ನು ಕಡ್ಡಾಯ ಮಾಡಿ ಹೊರಡಿಸಿದ ಆದೇಶವನ್ನು ಇದೇ ಸುಪ್ರೀಂಕೋರ್ಟ್ ಎತ್ತಿಹಿಡಿದಿತ್ತು ಎಂಬುದನ್ನು ಮರೆಯಬಾರದು. ಆ ನಂತರ ಅತ್ಯಂತ ಆಶ್ಚರ್ಯಕರವಾಗಿ, ಸುಪ್ರೀಂಕೋರ್ಟ್‌ಗಿಂತ ಕೆಳಗಿನ ಹೈಕೋರ್ಟ್‌ನಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಲಾಬಿ ಮೊಕದ್ದಮೆ ಹೂಡುತ್ತದೆ ಮತ್ತು ಅಲ್ಲಿ ಖಾಸಗಿ ಲಾಬಿಯ ಪರವಾಗಿ ಬಂದ ತೀರ್ಪಿನ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಕೆಯಾಗುತ್ತದೆ. ಅದು ಮತ್ತೊಮ್ಮೆ ಈ ವಿಷಯವನ್ನು ಕೈಗೆತ್ತಿಕೊಳ್ಳುತ್ತದೆ. ಆದರ ಪರಿಣಾಮವೇ ಈಗ ಬಂದಿರುವ ತೀರ್ಪು.

ಎರಡು ವರ್ಷಗಳ ಕೆಳಗೆ ತಮಿಳುನಾಡಿನಲ್ಲೂ ಶಿಕ್ಷಣಕ್ಕೆ ಸಂಬಂಧಿಸಿದ ಒಂದು ಸಂಗತಿ ಸುಪ್ರೀಂಕೋರ್ಟ್‌ನ ಮೆಟ್ಟಿಲೇರಿತ್ತು. ಆದರೆ ಆ ಮೊಕದ್ದಮೆಯಲ್ಲಿ ತೀರ್ಪು ಖಾಸಗಿ ಲಾಬಿಯ ವಿರುದ್ಧವಿತ್ತು. ಆ ಮೊಕದ್ದಮೆಯಲ್ಲಿ ತೀರ್ಮಾನವಾಗಬೇಕಿದ್ದ ವಿಷಯದ ಸುತ್ತ ನಡೆದಿದ್ದ ಭಾರೀ ಹೋರಾಟದ ಮುಂಚೂಣಿಯಲ್ಲಿದ್ದ ವ್ಯಕ್ತಿಗಳಲ್ಲಿ ಪಿಸ್ಸ್ ಗಜೇಂದ್ರಬಾಬು ಒಬ್ಬರು. ತಾವು ಬೀದಿಯಲ್ಲಿ ಹೋರಾಡುತ್ತಿದ್ದ ವಿಷಯದ ಪರವಾಗಿ ಸರ್ವೋಚ್ಚ ನ್ಯಾಯಾಲಯವು ತೀರ್ಪನ್ನು ನೀಡಿದ್ದರೂ, ಗಜೇಂದ್ರಬಾಬು ಹೇಳುವುದು 'ಯಾವ ಕಾರಣಕ್ಕೂ ನ್ಯಾಯಾಲಯಕ್ಕೆ ಇಂತಹ ವಿಷಯವನ್ನು ತೆಗೆದುಕೊಂಡು ಹೋಗಬೇಡಿ. ಒಂದು ವೇಳೆ ಅದು ಅನಿವಾರ್ಯವಾಗಿ ನ್ಯಾಯಾಲಯದ ಮೆಟ್ಟಿಲೇರಿದರೆ, ನ್ಯಾಯಾಧೀಶರು ನಿರಾಕರಿಸಲು ಸಾಧ್ಯವಾದ ಪ್ರಮಾಣದಲ್ಲಿ ಬೀದಿ ಚಳವಳಿಯ ಮುಖಾಂತರ ಜನಾಭಿಪ್ರಾಯವನ್ನು ರೂಪಿಸಿ' ಎಂದು.

ಕರ್ನಾಟಕದಲ್ಲಿ ರಾಜ್ಯ ಪಠ್ಯಕ್ರಮ (ಸ್ಟೇಟ್ ಸಿಲಬಸ್) ಮತ್ತು ಕೇಂದ್ರ ಪಠ್ಯಕ್ರಮ (ಸಿಬಿಎಸ್‌ಇ ಮತ್ತು ಐಸಿಎಸ್‌ಇ) ಎಂಬ ಶ್ರೇಣಿಗಳಿದ್ದರೆ, ತಮಿಳುನಾಡಿನಲ್ಲಿ ರಾಜ್ಯ ಪಠ್ಯಕ್ರಮ ದಲ್ಲೇ ನಾಲ್ಕು ಭಿನ್ನ ಬಗೆಯ ಪದ್ಧತಿಗಳಿದ್ದು, ಅವುಗಳ ನಡುವೆ ಬಹಳ ತಾರತಮ್ಯವಿತ್ತು. ಇದರ ವಿರುದ್ಧ ನಡೆದ ಹೋರಾಟದ ಪರಿಣಾಮವಾಗಿ, ಕರುಣಾನಿಧಿ ಸರ್ಕಾರವು ಅವನ್ನು ರದ್ದುಪಡಿಸಿ ಒಂದೇ ಸಿಲಬಸ್‌ಅನ್ನು ತಂದಿತ್ತು. ಆದರೆ, ಜಯಲಲಿತಾ ಅಧಿಕಾರಕ್ಕೆ ಬಂದಕೂಡಲೇ ಅದನ್ನು ರದ್ದು ಮಾಡಿ, ಮೊದಲಿದ್ದಂತೆ ನಾಲ್ಕು ಸಿಲಬಸ್‌ಅನ್ನು ಜಾರಿಗೆ ತರುವ ಆದೇಶ ಹೊರಡಿಸಿದ್ದರು. ಈ ಸಂಬಂಧ ಸುಪ್ರೀಂಕೋರ್ಟ್ ನೀಡಿದ ತೀರ್ಪು ಒಂದೇ ಸಿಲಬಸ್‌ನ ಪರವಿತ್ತು. ಆದರೆ ಈ ತೀರ್ಪು ಬರುವ ಮುನ್ನ ಜನಾಭಿಪ್ರಾಯದ ಒತ್ತಡವು ಬಹಳ ಜೋರಾಗಿ ಕೆಲಸ ಮಾಡಿತ್ತು.

ಇಂತಹ ಅಪರೂಪದ ಪ್ರಕರಣಗಳನ್ನು (ಮತ್ತು ಅವು ಜನಾಭಿಪ್ರಾಯದ ಕಾರಣಕ್ಕೆ ಜನರ ಪರವಾಗಿ ಬಂದಿದ್ದವು) ಹೊರತುಪಡಿಸಿದರೆ, ಸಾಮಾನ್ಯವಾಗಿ ನ್ಯಾಯಾಲಯವೆನ್ನುವುದು ನಮ್ಮ ಮುಂದಿನ ದಾರಿಗಳನ್ನು ಇಲ್ಲವಾಗಿಸುವ ಕೊನೆಗಳೇ (ಡೆಡ್ ಎಂಡ್ಸ್) ಆಗಿವೆ. ನರ್ಮದಾ ಬಚಾವೋ ಆಂದೋಲನ ಹೂಡಿದ್ದ ಮೊಕದ್ದಮೆಗಿಂತ ಅತ್ಯುತ್ತಮ ಉದಾಹರಣೆ ಇನ್ನೊಂದಿಲ್ಲ. ಭಾರೀ ದಮನಕಾರಿ ಪ್ರವೃತ್ತಿ ಬೆಳೆಸಿಕೊಂಡಿದ್ದ ಸರ್ಕಾರಗಳೆದುರು ಎನ್‌ಬಿಎಯ ನೇತೃತ್ವದಲ್ಲಿ ನಡೆದ ಜನಚಳವಳಿಯು ದಿಟ್ಟ ಪ್ರತಿರೋಧ ತೋರಿತ್ತು. ಅದನ್ನು ಪಕ್ಕಕ್ಕೆ ತಳ್ಳಿ ಜೀವವಿರೋಧಿ ಆಣೆಕಟ್ಟುಗಳನ್ನು ಕಟ್ಟುವುದು ಸರ್ಕಾರಕ್ಕೂ ಅಷ್ಟು ಸುಲಭವಿರಲಿಲ್ಲ.

ಈ ಹಂತದಲ್ಲಿ ಉಂಟಾದ ಜಡಸ್ಥಿತಿಯನ್ನು ದಾಟಲು ಎನ್‌ಬಿಎ ಸಹ ನ್ಯಾಯಾಲಯದ ಮೆಟ್ಟಿಲೇರಿತ್ತು. ಅದರ ಪರವಾಗಿ ಶಾಂತಿ ಭೂಷಣ್ ಮತ್ತು ಪ್ರಶಾಂತ್ ಭೂಷಣ್‌ರಂತಹ ನ್ಯಾಯವಾದಿಗಳು ವಾದಿಸಿದ್ದರು. ಈ ಪ್ರಪಂಚದ ಮೂಲೆಮೂಲೆಗಳಿಂದ ಮಾಹಿತಿಯನ್ನು ಸಂಗ್ರಹಿಸಿ, ಬಲವಾದ ವಾದವನ್ನು ಅವರು ಮಂಡಿಸಿದ್ದರು. ನೂರೆಂಟು ಆಯಾಮಗಳಿಂದ ವಿಷಯ ಪ್ರವೇಶ ಮಾಡಿ, ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುವ ಕೆಲಸವನ್ನು ಎನ್‌ಬಿಎ ಮತ್ತು ಅವರ ತಂಡವು ಮಾಡಿತ್ತು. ವಾದಸರಣಿ ಮತ್ತು ನ್ಯಾಯಾಧೀಶರುಗಳ ಮನಸ್ಥಾಪಗಳು ಎಷ್ಟು ಸಶಕ್ತವಾಗಿತ್ತೆಂದರೆ, ಇಲ್ಲಿ ನ್ಯಾಯ ಸಿಗುವ ಕುರಿತು ಹಲವರು ಗಾಢ ವಿಶ್ವಾಸದಲ್ಲಿದ್ದರು. ಇಡೀ ಚಳವಳಿಯು ನ್ಯಾಯಾಲಯದ ಕಡೆಗೆ ಸಕಾರಾತ್ಮಕ ತೀರ್ಪಿಗಾಗಿ ಎದುರು ನೋಡುತ್ತಿತ್ತು, ಆದರೆ ಅಂತಿಮವಾಗಿ ಕೋರ್ಟಿನ ತೀರ್ಮಾನ ಜನರ ವಿರುದ್ಧವಾಗಿ ಬಂದಿತು. ಇದು ಅವರೆಲ್ಲರಿಗೆ ಒಂದು ಆಘಾತವನ್ನೇ ತಂದಿತು. ನರ್ಮದಾ ಚಳವಳಿಯು ಅಲ್ಲಿಂದ ಮುಂದಕ್ಕೆ ಹಿಂದಿನ ಬರುಸನ್ನು ಕಳೆದುಕೊಂಡಿತು.


ಮಂದ್ಸದಲ್ಲಿ ಸಮಾನ ಶಿಕ್ಷಣಕ್ಕಾಗಿ ಜನಶಕ್ತಿ ಸಂಘಟನೆಯಿಂದ ಪ್ರತಿಭಟನೆ

ಇಂತಹ ಹಲವಾರು ಉದಾಹರಣೆಗಳನ್ನು ನಾವು ನೋಡಬಹುದು.

ಕೋರ್ಟಿನಲ್ಲಿ ಗೆಲ್ಲಬೇಕೆಂದರೂ, ಬೀದಿ ಚಳವಳಿಯ ಬರುಸೇ ನಿರ್ಣಾಯಕ ಎಂಬುದಕ್ಕೂ ಹಲವಾರು ಉದಾಹರಣೆಗಳನ್ನು ನೋಡಬಹುದು. ತುಂಗಭದ್ರ ಉಳಿಸಿ ಹೋರಾಟ ಒಕ್ಕೂಟದ ನೇತೃತ್ವದಲ್ಲಿ ನಡೆದ ಚಳವಳಿಯ ಉದಾಹರಣೆಯೇ ನಮ್ಮ ಕಣ್ಣ ಮುಂದಿದೆ. ಇವೆರಡೂ ನದೀ ಮೂಲಗಳಲ್ಲಿ ಗಣಿಗಾರಿಕೆಗೆ ಅವಕಾಶ ನೀಡಲು ಸರ್ಕಾರ ತೀರ್ಮಾನಿಸುತ್ತಿದ್ದಂತೆ ಚಳವಳಿಯೂ ಹೆಚ್ಚಾಗುತ್ತಾ ಹೋಯಿತು. ಈ ಕುರಿತು ಬೇರೊಂದು ಸಂಸ್ಥೆ ಸುಪ್ರೀಂಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿತ್ತು, ಆ ಮೊಕದ್ದಮೆಯಲ್ಲಿ ರಾಜ್ಯ ಸರ್ಕಾರ 'ತಾನು ಗಣಿಗಾರಿಕೆಗೆ ಅವಕಾಶ ನೀಡುವುದಿಲ್ಲ' ಎಂಬ ಅಫಿಡವಿಟ್ ಹಾಕುವ ತನಕ ಚಳವಳಿಯು ತೀವ್ರಗೊಳ್ಳುತ್ತಾ ಸಾಗಿತ್ತು, ಕೋರ್ಟ್ ತೀರ್ಪು ಗಣಿಗಾರಿಕೆಯ ವಿರುದ್ಧ ಬಂದಿತು.

ಆದೇರೀತಿ ಈರ್ನಾಟಕ ಸರ್ಕಾರೀ ದಿನಗೂಲಿ ನೌಕರರ ಮಹಾಮಂಡಲದ ನೇತೃತ್ವದಲ್ಲಿ ನಡೆದ ಕಾಯಮಾತಿ ಹೋರಾಟ. ಇದೂ ಸಹ ಕೋರ್ಟ್‌ನ ಮೆಟ್ಟಿಲೇರಿತ್ತು. ಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿದ ದಿನಗೂಲಿ ನೌಕರರು ವಿಧಾನಸೌಧಕ್ಕೆ ಅಕ್ಷರಶಃ ಮುತ್ತಿಗೆ ಹಾಕಿ ಸರ್ಕಾರವು ತಮ್ಮ ಪರವಾಗಿ ಕೋರ್ಟ್‌ನಲ್ಲಿ ಅಫಿಡವಿಟ್ ಹಾಕುವಂತೆ ನೋಡಿಕೊಂಡರು.

ಮೇಲಿನ ಉದಾಹರಣೆಗಳಿಗೆ ಭಿನ್ನವಾಗಿ ಹಲವು ಸಾರಿ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ಗಳು ಜನಪರವಾದ ತೀರ್ಪುಗಳನ್ನು ನೀಡಿಯೇ ಇಲ್ಲ ಎಂದೇನೂ ಅಲ್ಲ. ಆದರೆ ಅಂತಹವು ಕಡಿಮೆಯಿವೆ ಮಾತ್ರವಲ್ಲ, ಜನಚಳವಳಿಯ ಒತ್ತಾಸೆ ಇಲ್ಲದಿದ್ದರೆ, ಅಂತಹ ಜನಪರ ಆದೇಶಗಳು ಜಾರಿಯಾಗುವ ಹೊತ್ತಿಗೆ ತೀರ್ಪಿನ ಆಶಯವನ್ನೇ ಉಲ್ಟಾ ಮಾಡಿರಲಾಗುತ್ತದೆ. ಇದನ್ನು ನಮಗೆ ತೋರಿಸುವ ಅತ್ಯುತ್ತಮ ಉದಾಹರಣೆ ಎಂದರೆ ಶಿಕ್ಷಣವನ್ನು ಮೂಲಭೂತ ಹಕ್ಕೆಂದು ಘೋಷಿಸಿದ 1993ರ ಉನ್ನಿಕೃಷ್ಣನ್ ವರ್ಸಸ್ ಆಂಧ್ರಪ್ರದೇಶ ಸರ್ಕಾರ ಮೊಕದ್ದಮೆಯದ್ದು.

ಸಂವಿಧಾನದ ರಾಜ್ಯ ನಿರ್ದೇಶನ ತತ್ವಗಳಲ್ಲಿ 'ಸಂವಿಧಾನ ಜಾರಿಗೆ ಬಂದ 10 ವರ್ಷಗಳ ಒಳಗೆ 14 ವರ್ಷಗಳೊಳಗಿನ ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ನೀಡಬೇಕೆಂದು ಹೇಳಲಾಗಿದೆ. ಈ ರೀತಿ ಕಾಲ ನಿಗದಿ ಇರುವ ಇನ್ನಾವುದೇ ಕಲಮು ಸಂವಿಧಾನದಲ್ಲಿ ಇಲ್ಲ. ಹಾಗಾಗಿ ಇದಕ್ಕೆ ಮೂಲಭೂತ ಹಕ್ಕಿನ ತೂಕವಿದೆ. ಇದನ್ನು ಸರ್ಕಾರವು ಮೂಲಭೂತ ಹಕ್ಕೆಂದು ಪರಿಗಣಿಸಬೇಕು' ಎಂದು ಈ ಮೊಕದ್ದಮೆಯಲ್ಲಿ ಸುಪ್ರೀಂಕೋರ್ಟ್ ಹೇಳಿತು. ಅದರನ್ವಯ ಸಂವಿಧಾನಕ್ಕೆ 86ನೇ ತಿದ್ದುಪಡಿಯಾಗಿ, ಶಿಕ್ಷಣದ ಹಕ್ಕು ಕಾಯ್ದೆ ಜಾರಿಗೆ ಬರುವಷ್ಟರಲ್ಲಿ 16 ವರ್ಷಗಳು (2009) ಆಗಿದ್ದವು. ಮೊದಲು ಸೊನ್ನೆಯಿಂದ 6 ವರ್ಷದ ಒಳಗಿನ ಮಕ್ಕಳನ್ನು ಆದರಿಂದ ಹೊರಗಿಡಲಾಯಿತು. ನಂತರ ಮೂಲಭೂತ ಹಕ್ಕಾಗಲು ಅಗತ್ಯವಿದ್ದ ಸಮಾನ ಶಿಕ್ಷಣದ ಅಂಶವನ್ನು ಮರೆಮಾಚಲಾಯಿತು. ಖಾಸಗಿ ಶಿಕ್ಷಣ ಸಂಸ್ಥೆಗಳು ಇರಲು ಅವಕಾಶ ಕಲ್ಪಿಸಲಾಯಿತು. ಸರ್ಕಾರೀ ಶಾಲೆಗಳಿಂದ ಖಾಸಗಿಯವರಿಗೆ ಹಣ ಪರಿಸುವ 25% ಮೀಸಲಾತಿಯನ್ನು ಸೇರಿಸಲಾಯಿತು. ಖಾಸಗಿಯವರು ಎಷ್ಟು ಬೇಕಾದರೂ ಶುಲ್ಕ ಸಂಗ್ರಹಿಸಲು ಅನುವು ಮಾಡಿಕೊಡಲಾಯಿತು. ಇಂತಹ ಹಲವು ಅಂಶಗಳ ಮೂಲಕ 'ಶಿಕ್ಷಣ ಹಕ್ಕು ಕಾಯ್ದೆ'ಯನ್ನು ವಾಸ್ತವದಲ್ಲಿ 'ಖಾಸಗೀಕರಣ ಕಾಯ್ದೆ'ಯನ್ನಾಗಿ ಪರಿವರ್ತಿಸಲಾಯಿತು. ಇದರ ಬಗ್ಗೆ ಸುಪ್ರೀಂಕೋರ್ಟ್ ಚಕಾರವೆತ್ತಲಿಲ್ಲ! ಬದಲಿಗೆ ಆ ನಂತರ ಇದರ ಸಂಬಂಧ ಹೂಡಲಾದ ಮೊಕದ್ದಮೆಗಳಲ್ಲಿ ಸರ್ಕಾರೀ ಲೌಕಟ್ಟಿನಲ್ಲೇ ತೀರ್ಪು ನೀಡುವ ತನ್ನ ಪರಿಪಾಠವನ್ನು ಮುಂದುವರಿಸಿಕೊಂಡು ಹೋಯಿತು.

2002ರಲ್ಲಿ ಇನ್ನೂ ಮುಂದಕ್ಕೆ ಹೋಗಿ ಶಿಕ್ಷಣದ ವ್ಯಾಪಾರೀಕರಣವನ್ನು ಮತ್ತಷ್ಟು ಅಧಿಕೃತಗೊಳಿಸಿತು. ಅಲ್ಲಿಯವರೆಗೆ ಈ ದೇಶದ ಶಿಕ್ಷಣ ಕ್ಷೇತ್ರದಲ್ಲಿ ಇದ್ದ ಲಿಖಿತ, ಅಲಿಖಿತ, ನೈತಿಕ, ಸಾಂವಿಧಾನಿಕ, ಪ್ರಜಾತಾಂತ್ರಿಕ ಮೌಲ್ಯಗಳೆಲ್ಲವನ್ನೂ ಗಾಳಿಗೆ ತೂರುವಂತಹ ತೀರ್ಪನ್ನು ಟಿ.ಎಂ.ಎ. ಪೈ ಕೇಸಿನಲ್ಲಿ ಇದೇ ಸುಪ್ರೀಂಕೋರ್ಟ್ ನೀಡಿತು.

ಇದಕ್ಕಿಂತ ಗಾಬರಿಯಾಗುವಂತಹ ತೀರ್ಪುಗಳನ್ನು ಕಾರ್ಮಿಕರ ಹಕ್ಕುಗಳ ವಿಚಾರದಲ್ಲಿ ಕೋರ್ಟುಗಳು ನೀಡುತ್ತಾ ಬಂದಿವೆ. ಸಂವಿಧಾನದ ರಾಜ್ಯ ನಿರ್ದೇಶನ ತತ್ವಗಳಲ್ಲಿ ಅಡಕವಾಗಿರುವ ಯಾವ ಸೂತ್ರವನ್ನೂ ಜಾರಿಗೆ ತರದಂತಹ ರೀತಿ ಸರ್ಕಾರವನ್ನು (ಅವರೂ ಅದೇ ಬಯಸುತ್ತಿರುತ್ತಾರೆ) ಕಟ್ಟಿ ಹಾಕುವ ತೀರ್ಪುಗಳು ಕೋರ್ಟ್‌ಗಳಿಂದ ಬಂದಿವೆ.

ಇದರಲ್ಲಿ ಆಶ್ಚರ್ಯಪಡುವಂಥದ್ದೇನೂ ನ್ಯಾಯಾಲಯಗಳನ್ನು ನ್ಯಾಯ ಪಕ್ಷಪಾತಿಗಳೆಂದೋ ಜನಪರವಾಗಿರುತ್ತವೆಂದೋ ನಂಬಿರುವುದರಲ್ಲೇ ಇದೆ. ಮೊಟ್ಟ ಮೊದಲನೆಯದಾಗಿ ಅವು ವಿಷ್ಣು ಸಂಸ್ಥೆಗಳೇ ಅಲ್ಲ, ಅವು ಆ ಕಾಲದ ರಾಜಕೀಯ ವಿದ್ಯಮಾನದ ಪ್ರತಿಬಿಂಬಗಳಷ್ಟೇ. ಇಲ್ಲದಿದ್ದರೆ ಬಿ ಕಾರ್ಮಿಕರ ಕೇಸಿನಲ್ಲಿ, 'ಈ ಕಾರ್ಮಿಕರನ್ನು ಕಲಿ ಶಿಕ್ಷಿಸದಿದ್ದರೆ, ಹೂಡಿಕೆದಾರರಿಗೆ ತಪ್ಪು ಸಂದೇಶ ಹೋ ಎಂಬರ್ಥದ ಮಾತುಗಳನ್ನು ಕೋರ್ಟ್ ತೀ ಬರೆಯುತ್ತಿರಲಿಲ್ಲ, 'ಕೆಳ ಜಾತಿಗೆ ಸೇರಿದ ಭಂವರಿ ದ ಮೇಲೆ ಅತ್ಯಾಚಾರ ನಡೆದಿರಲು ಸಾಧ್ಯವಿಲ್ಲ; ಏ ಮೇಲ್ಜಾತಿಯವರು ಕೆಳ ಜಾತಿಯವರನ್ನು ಮುಟ್ಟು ಎಂದು ಬರೆಯುತ್ತಿರಲಿಲ್ಲ, ಮತ್ತು ಈಚೆಗೆ ಇ ಸ್ವಾರಸ್ಯಕರವಾದ ವಿದ್ಯಮಾನವು ನಡೆಯಿತು. ಆದಿತ್ಯ

ಸೇರಿದಂತೆ ಹಲವು ದೊಡ್ಡ ಬಂಡವಾಳಿಗರ ಮೊಕದ್ದಮೆ ಹೂಡಬೇಕೆಂಬ ಚರ್ಚೆ, ಮೊಕದ್ದಮೆಯ ಸಂಬಂಧ ನ್ಯಾಯಾಲಯದಲ್ಲಿ ನಡೆಯುತ್ತಿತ್ತು. ಆಗ ಸಚಿವರೊಬ್ಬರು 'ನ್ಯಾಯಾಲಯವು ಬಂಡವಾಳಿಗರನ್ನು ಕಳಿಸಲು ಹೊರಟರೆ ಅದರಿಂದ ತಪ್ಪು ಸ ರವಾನೆಯಾಗುತ್ತದೆ; ಇಲ್ಲಿ ಯಾರೂ ಹೂಡಿಕೆ ಮ ಬರುವುದಿಲ್ಲ ದೇಶದ ಆರ್ಥಿಕತೆ ಮೇಲೆ ಕೆಟ್ಟ ಪ ಬೀರುತ್ತದೆ' ಎಂದು ಹೇಳಿಕೆ ಕೊಟ್ಟರು. ಮಾರನೆ ಸಚಿವರ ಈ ಹೇಳಿಕೆ ಕುರಿತು ನ್ಯಾಯಾಧೀಶರು ಕ ಪ್ರಸ್ತಾಪಿಸಿ ಕೆಂಡಾಮಂಡಲವಾಗಿಬಿಟ್ಟರು. 'ದೇಶದ ಎಲ್ಲರಿಗೂ ಒಂದೇ, ಅದನ್ನು ಸಚಿವರು ಅರ್ಥಮ ಬೇಕು' ಎಂದು ಅವರು ಗುಡುಗಿದರು ಎಂದ ಭಾವಿಸಿದರೆ ಮೋಸ ಹೋಗುವಿರಿ. ಅವರು 'ನಮಗೂ ದೇಶದ ಆರ್ಥಿಕ ನೀತಿಯ ನ್ಯಾಯಾಲಯವೇನೂ ಬಂಡವಾಳ ಹೂಡಿಕೆಯ ವಿ ಸಚಿವರ ಅದನ್ನು ಅರ್ಥಮಾಡಿಕೊಂಡು ಮಾತನಾ ಎಂದು.

ನ್ಯಾಯಾಲಯಗಳು ಆ ಕಾಲದ ಬಲಾಢ್ಯ ಆರ್ಥಿಕ ನೀತಿಗಳ ಪ್ರಭಾವದಿಂದ ಹೊರತಾಗಿರ ಹಾಗಾಗಿಯೇ 1990ರ ನಂತರ ನ್ಯಾಯ ತೀರ್ಪುಗಳಲ್ಲಿ ಬೆರಳೆಣಿಕೆಯಷ್ಟು ಮಾತ್ರ ಬ ಹೂಡಿಕೆಯ ವಿರುದ್ಧ ಬಂದಿವೆ. ಉಳಿದೆಲ್ಲವೂ ಹೂಡಿಕೆದಾರರ ಪರವಾಗಿಯೇ ಇವೆ. ಶಿಕ್ಷಣದ ವಾ ಈಗ ಬಲಿಯನ್ ಡಾಲರ್‌ಗಳ ವ್ಯವಹಾರವಾ ಅದನ್ನು ವಿರೋಧಿಸುವ ಅಥವಾ ತಡೆಗಟ್ಟುವ ಸುಪ್ರೀಂಕೋರ್ಟ್‌ನಿಂದ ನಿರೀಕ್ಷಿಸಲು ಹೇಗೆ ಸ

ಮಾತೃಭಾಷಾ ಶಿಕ್ಷಣ ಮಾಧ್ಯಮದ ವಿಚಾ ದೇಶೀ ಭಾಷೆಗಳ ಉಳಿವಿನ ಪ್ರಶ್ನೆ ಮಾತ್ರವ ಮಕ್ಕಳ ಹಕ್ಕಿನ ಪ್ರಶ್ನೆ, ಅವರ ಮನೋವಿಕಾ ಈ ದೇಶದ ಪ್ರಜಾತಂತ್ರದ ಪ್ರಶ್ನೆ ಮತ್ತು ಶಿಕ್ಷಣ ಕ್ರಮದ ಪ್ರಶ್ನೆ. ಹಾಗಾಗಿ ಅದನ್ನು ಜಾರಿ ಹೋರಾಟವು ಬೀದಿಯಲ್ಲಿ ನಡೆಯಬೇಕಿದೆ. ತೀ ಸಂಸತ್‌ನಲ್ಲಿ ಆಗಬೇಕಿದೆ. ಒಂದು ವೇಳೆ ಕೋ ನಿಲುವನ್ನು ಬದಲಿಸಿಕೊಳ್ಳಬೇಕೆಂದರೂ, ಅದು ನ ನಡೆಯುವ ಹೋರಾಟದ ತಾಕತ್ತಿನ ಅವಲಂಬಿಸಿರುತ್ತದೆ.

ಮಾಯಕ ಬಾಲಕಿಯರನ್ನು ಅಪಹರಿಸಿರುವ ಬೊಕೊ ಹರಾಮ್ ಎಂಬ ಹರಾಮಿಗಳು



• ಗೌರಿ ಲಂಕೇಶ್

editorlankesh@gmail.com

ಮೂರು ಪಾರಿಗಳ ಹಿಂದೆ ನೈಜೀರಿಯಾ ದೇಶದಲ್ಲಿ ಕೊ ಹರಾಮ್ ಎಂಬ ಮೂಲಭೂತವಾದಿ ಸಲ್ಮಾನರ ಸಂಘಟನೆಯೊಂದು ಬಾಲಕಿಯರ ಶಾಲೆಯಿಂದ 276 ಹುಡುಗಿಯರನ್ನು ಅಪಹರಿಸಿದ್ದು ಮಾಧ್ಯಮಗಳಲ್ಲಿ ಆಮ್ಲ ಸುದ್ದಿಯಾಗದಿದ್ದನ್ನು ಆಚ್ಚರಿ ಪಡಿಸುತ್ತದೆ. ಯಾಕೆಂದರೆ ಪಾಕಿಸ್ತಾನದ ಮೂಲಭೂತವಾದಿಗಳು ಹುಡುಗಿಯರಿಗೆ ಶಿಕ್ಷಣ ನೀಡಬಾರದೆಂದು ಮಲಾಲಾ ಎಂಬ ಬಾಲಕಿಯ ಮೇಲೆ ದಾಳಿ ನಡೆಸಿದ್ದು ನಮ್ಮ ದೇಶದಲ್ಲಿ ಮಾತ್ರವಲ್ಲ ಅಂತರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿತ್ತು. ಆದರೆ ಎಂಬ ಫ್ರೆಂಚ್ ಸುದ್ದಿ ಸಂಸ್ಥೆಯ ಕೈಸೇರಿದಾಗ. ಆ ಭಾಷಣದಲ್ಲಿ ಅಬೂಬಕ್ಕರ್ ಹೀಗೆ ಹೇಳಿದ್ದಾನೆ: "ನಾವು ಈ ಯುವತಿಯರನ್ನು ಲೈಂಗಿಕದಾಸಿಯರನ್ನಾಗಿ ಮಾರುತ್ತೇವೆ. ಅಲ್ಲಾಹು ಅವರನ್ನೆಲ್ಲ ಮಾರುಕಟ್ಟೆಯಲ್ಲಿ ಮಾರು ಎಂದು ನನಗೆ ನಿರ್ದೇಶನ ನೀಡಿದ್ದಾನೆ."

"ಅಲ್ಲಯ್ಯ ನಮ್ಮ ಪವಿತ್ರ ಗ್ರಂಥವಾದ ಕುರಾನ್‌ನಲ್ಲಿ ಎಲ್ಲಿ ಅಮಾಯಕ ಹುಡುಗಿಯರನ್ನು ಲೈಂಗಿಕ ದಾಸಿಯರನ್ನಾಗಿ ಮಾರುಕಟ್ಟೆಯಲ್ಲಿ ಮಾರಾಟಕ್ಕಿಡು ಎಂದು ಹೇಳಿದೆ?" ಎಂದು ಇವತ್ತು ಜಗತ್ತಿನ ಎಲ್ಲಾ ಮುಸ್ಲಾನರೂ ಈ ಅಬೂಬಕ್ಕರ್‌ನನ್ನು ಪ್ರಶ್ನಿಸಬೇಕಿದೆ ಮಾತ್ರವಲ್ಲ ಇಸ್ಲಾಮ್ ಖಂಡಿಸಬೇಕಿದೆ. ಯಾಕೆಂದರೆ ಇತರೆ ಧರ್ಮಗಳಿಗೆ ಹೋಲಿಸಿದರೆ ಇಸ್ಲಾಮ್ ಹೆಣ್ಣುಮಕ್ಕಳ ಮತ್ತು ಮಹಿಳೆಯರ ಪರವಾಗಿರುವ ಧರ್ಮ. ಆದರಲ್ಲೂ ಪೈಗಂಬರರು 'ಎಂತಹದ್ದೇ ಸನ್ನಿವೇಶದಲ್ಲೂ ಮಹಿಳೆಯರಿಗೆ ಮತ್ತು ಮಕ್ಕಳಿಗೆ ತೊಂದರೆ, ಹಿಂಸೆ ಇತ್ಯಾದಿ ಕೊಡಕೂಡದು' ಎಂದಿದ್ದಾರೆ.

ಆದರೆ ಬೊಕೊ ಹರಾಮ್ ಎಂತಹ ಉಗ್ರಗಾಮಿ ಸಂಘಟನೆ ಎಂದರೆ ಇದಕ್ಕೆ ಅತ್ತ ಧರ್ಮವೂ ಮುಖ್ಯವಲ್ಲ, ಪ್ರಗತಿಪರ ಯೋಚನೆಯೂ ಬೇಕಿಲ್ಲ. 'ಬೊಕೊ ಹರಾಮ್' ಎಂಬ ಪದಗಳ ಅರ್ಥವೇ 'ಪಾಶ್ಚಿಮಾತ್ಯೀಕರಣ ಒಂದು ಪಾಪ' ಎಂಬುದಾಗಿದೆ. ಅಂದರೆ ಈ ಸಂಘಟನೆ ಎಲ್ಲ ತರಹದ ಅಭಿವೃದ್ಧಿಯನ್ನು ಖಂಡಿಸುತ್ತದೆ. ಯಾವ ಮಟ್ಟಕ್ಕೆ ಎಂದರೆ ಈಗ ಸಾಬೀತಾಗಿರುವಂತೆ ಭೂಮಿ ಗುಂಡಗಿಲ್ಲ ಬದಲಾಗಿ ಚಪ್ಪಟೆಯಾಗಿದೆ ಎಂದೂ, ಡಾರ್ವಿನ್ ಹೇಳಿದಂತೆ ಮಾನವ ಮಂಗನಿಂದ ವಿಕಾಸಗೊಂಡಿಲ್ಲ ಎಂದೂ, ಭೂಮಿಯ ಮೇಲಿರುವ ನೀರು ಆವಿಯಾಗಿ ಆನಂತರ ಮಳೆಯಾಗಿ ಸುರಿಯುವುದಿಲ್ಲ ಎಂದೂ ಈ ಸಂಘಟನೆಯ ನಾಯಕರು ಮತ್ತು ಸದಸ್ಯರು ವಾದಿಸುತ್ತಾರೆ. ಇಂತಹ ಪೆದ್ದ ಶಿಖಾಮಣಿಗಳು ಅಲ್ಲಾಹುವಿನ ಹೆಸರಲ್ಲಿ ಅಮಾಯಕ

ಜೇರಿಯಾದ ನೂರಾರು ಬಾಲಕಿಯರು ಪಹರಣವಾಗಿದ್ದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯನ್ನು ಮಾತ್ರ ಕಂಡಿತು. ಈ ಮೌನಕ್ಕೆ ಕಾರಣ ಜೇರಿಯಾದ ಹೆಣ್ಣುಮಕ್ಕಳು ಕರಿಯರು ಎಂಬುದಾಗಿದ್ದರೆ ಕ್ಕಿಂತ ದೊಡ್ಡ ದುರಂತ ಇನ್ನೊಂದಿರಲಾರದು.

ಅಂದು ಅಪಹರಣಗೊಂಡ ಹುಡುಗಿಯರ ವಯಸ್ಸು ಂದ 16 ವರ್ಷ ಮಾತ್ರ. ಅಂದರೆ ಅವರೆಲ್ಲ ಆಪ್ರಾಪ್ತ ಸಿಸ್ಸಮು. ಅವರಲ್ಲಿ ಕ್ರಿಶ್ಚಿಯನ್ ಮತ್ತು ಇಸ್ಲಾ-ಎರಡೂ ರ್ಮಗಳಿಗೆ ಸೇರಿದವರಿದ್ದಾರೆ. ಇವರನ್ನೆಲ್ಲ ಪಹರಣಕಾರರು ಸಾಗಿಸುತ್ತಿದ್ದಾಗ ಅದು ಹೇಗೋ 53 ುಗಿಯರು ತಪ್ಪಿಸಿಕೊಂಡು ಪರಾರಿಯಾದರು. ಆದರೂ ಕೊ ಹರಾಮ್ ಭಂಡಕೋರರು 230 ಹುಡುಗಿಯರನ್ನು ಧನದಲ್ಲಿಟ್ಟುಕೊಂಡಿದ್ದು ಹೆಚ್ಚು ಸುದ್ದಿಯಾಗಲಿಲ್ಲ.

ಕೊನೆಗೂ ಅಪಹರಣಗೊಂಡ ಈ ಯುವತಿಯರು

ಧರ್ಮಕ್ಕೆ ಅವಮಾನ ಮಾಡುತ್ತಿರುವ ಅಬೂಬಕ್ಕರ್ ಮತ್ತು ಅವನ ಸಂಘಟನೆಯನ್ನು ಖಡಾಖಂಡಿತವಾಗಿ

ಹುಡುಗಿಯರನ್ನು ಲೈಂಗಿಕ ದಾಸಿಯರನ್ನಾಗಿ ಮಾರಾಟ ಮಾಡುತ್ತೇವೆ ಎಂದರೆ ಅವರಿಗೆ ಯಾವುದರಿಂದ

ಬಿಡಿಯಬೇಕೆಂದು ನೀವೇ ಯೋಚಿಸಿ.

ಈಗ ನೈಜೀರಿಯಾದಿಂದ ಬರುತ್ತಿರುವ ಸುದ್ದಿಯ ಪ್ರಕಾರ ಆ ಅಮಾಯಕ ಯುವತಿಯರಲ್ಲಿ ಹಲವರನ್ನು ಆಗಲೇ ಬೊಕೊ ಹರಾಮ್ ಸದಸ್ಯರು ಮಾರಿದ್ದಾರೆ ಅಥವಾ ತಮ್ಮ ಲೈಂಗಿಕ ತೃಪ್ತಿಗೆ ಬಳಸಿಕೊಂಡಿದ್ದಾರೆ. ಇದನ್ನು ಕೇಳಿ ಗಾಬರಿಗೊಂಡ ಹಲವಾರು ಮಹಿಳಾ ಸಂಘಟನೆಗಳು ಇತ್ತೀಚೆಗೆ 'ಬ್ರಿಂಗ್ ಬ್ಯಾಕ್ ಅವರ್ ಗರ್ಲ್ಸ್' (ನಮ್ಮ ಹುಡುಗಿಯರನ್ನು ವಾಪಸ್ ಕರೆದುಕೊಂಡು ಬನ್ನಿ) ಎಂಬ ಆಂದೋಲನವನ್ನು ಜಗತ್ತಿನಾದ್ಯಂತ ಪ್ರಾರಂಭಿಸಿವೆ. ಅದಕ್ಕೆ ಅಪಾರ ಬೆಂಬಲವೂ ವ್ಯಕ್ತವಾಗುತ್ತಿದೆ. ಸ್ವತಃ ಅಮೆರಿಕ ಅಧ್ಯಕ್ಷ ಬರಾಕ್ ಒಬಾಮಾ ಅವರ ಪತ್ನಿ ಮಿಶೆಲ್ ಕೂಡ ಈ ಆಂದೋಲನದೊಂದಿಗೆ ಕೈ ಜೋಡಿದ್ದಾರೆ. ಜೊತೆಗೆ ಒಬಾಮಾ ಕೂಡ ಆ ಯುವತಿಯರನ್ನು ಬೊಕೊ ಹರಾಮ್ ಸಂಘಟನೆಯಿಂದ ಬಿಡಿಸಿಕೊಳ್ಳಲು ಮಾರ್ಗಗಳನ್ನು ಹುಡುಕುತ್ತಿದ್ದಾರೆ. ಆ ನಿಟ್ಟಿನಲ್ಲಿ ಒಂದು ಸಂಧಾನಕಾರರ ತಂಡವನ್ನಾಗಲೇ ನೈಜೀರಿಯಾಗೆ ಕಳುಹಿಸಿದ್ದಾರೆ.

ಬೊಕೊ ಹರಾಮ್ ಎಂಬ ಸಂಘಟನೆಯ ಹರಾಮಿಗಳಿಂದ ಅಮಾಯಕ ಯುವತಿಯರು ಆದಷ್ಟು ಬೇಗ ಬಿಡುಗಡೆ ಪಡೆಯಲಿ, ಇಂತಹ ಉಗ್ರರನ್ನು ಎಲ್ಲಾ ಪ್ರಜ್ಞಾವಂತರು ಖಂಡಿಸಲಿ ಎಂಬ ಆಶಯ ನಮ್ಮದು...

ಹೆಜಮಾಡಿ: ವಿಎಚ್‌ಪಿ ಅಧ್ಯಕ್ಷನ 'ವಿಕೃತಿ'

ಆತ ವಿಶ್ವ ಹಿಂದೂ ಪರಿಷತ್‌ನ ಅಧ್ಯಕ್ಷ. ಅಂದರೆ ಶಪ್ರೇಮ, ಹಿಂದೂ ಸಂಸ್ಕೃತಿ, ಮಹಿಳಾ ರಕ್ಷಣೆಯ ನ್ಟ್ಯಾಕ್ತು ಹಿಡಿದ ಸ್ವಯಂಘೋಷಿತ ತಂಡವೊಂದರ ಮುಖ ಸೇನಾನಿ. ಆದರೆ ಮಾಡಿದ್ದು ಮಾತ್ರ ಮಾನಗೇಡಿ ಸ. ಆದೂ ಆಂತಿಂಥ ಪ್ರಮಾದವಲ್ಲ, ಆರೇಳು ವರ್ಷದ ುಡುಗಿಯರಿಗೆ ಲೈಂಗಿಕ ಕಿರುಕುಳ ನೀಡಲು ಹೋಗಿ ರ್ವಜನಿಕರಿಂದಲೇ ಧರ್ಮದೇಟು ತಿನ್ನುವಂತ ಕಾರ್ಯ.

ಇದೆಲ್ಲಾ ನಡೆದದ್ದು ಪಡುಬಿದ್ರೆಯ ಹೆಜಮಾಡಿಯಲ್ಲಿ. ವಿಕೃತ ಶಿಶುಕಾಮಿಷ್ಣನ ಹೆಸರು ಕೇಶವ ಸುವರ್ಣ. ೋಬ್ಬರಿ ಐವತ್ತು ವರ್ಷದ ಮುದಿ ಆಸಾಮಿ. ಹೆಜಮಾಡಿ ಪ್‌ಸ್ಟಾಂಡ್ ಪಕ್ಕದಲ್ಲೇ ಒಂದು ಫ್ಯಾನ್ಸಿ ಸ್ಟೋರ್ ೆಸಿಕೊಂಡಿದ್ದಾನೆ. ಜೊತೆಗೆ ಪಾರ್ಟ್‌ಟೈಮ್ ಸಮಾಜಕಾರ್ಯ, ಹಿಂದೂ ರಕ್ಷಣೆಯ ಕಸುಬನ್ನೂ ಂಡಿಕೊಂಡಿದ್ದಾನೆ. ಹಿಂದೂ ರಕ್ಷಣಾ ವೇದಿಕೆ(ವಿಎಚ್‌ಪಿ)ಯ ಜಮಾಡಿ ಘಟಕದ ಅಧ್ಯಕ್ಷ. ಅಷ್ಟೇ ಅಲ್ಲ, ಹೆಜಮಾಡಿ ಪಾಲಿಂಗೇಶ್ವರ ದೇವಸ್ಥಾನದ ಆಡಳಿತ ಮಂಡಳಿಯ ಸ್ಯನೂ ಹೌದು. ಒಟ್ಟಿನಲ್ಲಿ ನೋಡುವವರ ಕಣ್ಣಿಗೆ ಸ್ಯ. ಇದೆಲ್ಲಾ ಕೇಶವ ಸುವರ್ಣನ ಹೊರಗಿನ ಗೆಟಪ್ಪು. ತರಾಳದಲ್ಲಿ ಅವನೊಬ್ಬ ಪರಮ ಕೊಳಕು ಕಾಮಿಷ್ಟ. ಸ ಮೊಬೈಲ್ ತುಂಬಾ ಅಸಭ್ಯ ಹೊಲಸು ಸೆಕ್ಸ್ ಂಗ್‌ಗಳದ್ದೇ ಸಾಮ್ರಾಜ್ಯ. ಹೆಂಗಸರಿಗೆ ಲೈಂಗಿಕ ಕಿರುಕುಳ ುವುದೇ ಇವನ ಆಸಲಿಯತ್ತು. ಕಳೆದ ಮೂವತ್ತು ರ್ಷಗಳಿಂದ ಸಭ್ಯತೆಯ ಮರೆಯಲ್ಲಿ ಈತ ಮಾಡಿಕೊಂಡು ದಿರೋದು ಇದೇ ಕಾಯಕವನ್ನು.

ಆದರೆ ಮೇ 6ರಂದು ಮಾತ್ರ ಅವನ ನಸೀಬು ಟ್ಟಿತು. ಯಾಕೆಂದರೆ ಅವನು ಅವತ್ತು ಗೋಳುಹೊಯ್ದು ಂದದ್ದು ತನ್ನ ಮೊಮ್ಮಕ್ಕಳ ವಯಸ್ಸಿನ ಎರಡು ಎಳೇ ಕ್ಕಳನ್ನು. ಗಿಫ್ಟ್ ಐಟಮ್ ಖರೀದಿಸಲೆಂದು ಏಳು ರ್ಷದ ಹುಡುಗಿಯೊಬ್ಬಳು ತನ್ನ ಆರು ವರ್ಷದ ಗೆಳತಿ ತೆಗೆ ಅವನ ಸುವರ್ಣ ಫ್ಯಾನ್ಸಿ ಸ್ಟೋರ್‌ಗೆ ಬಂದಿದ್ದಳು.

ಆ ಸಮಯದಲ್ಲಿ ಕೇಶವನನ್ನು ಬಿಟ್ಟರೆ ಅಂಗಡಿಯಲ್ಲಿ ಮತ್ತಾರೂ ಇರಲಿಲ್ಲ. ಆ ವಯಸ್ಸಿನ ಮಕ್ಕಳನ್ನು ನೋಡಿದರೆ ಎಂತವರಿಗೂ ಎತ್ತಿ ನಿಷ್ಕಲ್ಮಷವಾಗಿ ಮುದ್ದಾಡಬೇಕೆಂದು ಮನಸ್ಸಾಗುತ್ತದೆ. ಆದರೆ ಸುವರ್ಣ ಕೇಶವ್‌ಗೆ ವಿಕೃತ ಕಾಮ ತಲೆಎತ್ತಿತ್ತು. ಅದಕ್ಕೋಸ್ಕರವೇ ಖರೀದಿಗೆಂದು ಬಂದ ಹುಡುಗಿಯರಿಗೆ ಗಿಫ್ಟ್ ಐಟಮ್ ತೋರಿಸುವ ಬದಲು ತನ್ನ ಮೊಬೈಲ್‌ನಲ್ಲಿ ಡೌನ್‌ಲೋಡ್ ಮಾಡಿಟ್ಟುಕೊಂಡಿದ್ದ ಅಶ್ಲೀಲ ವೀಡಿಯೋ ದೃಶ್ಯಗಳ ಹಾಟ್ ಐಟಮ್‌ಗಳನ್ನು ತೋರಿಸಿ ಹಲ್ಲುಕಿರಿದಿದ್ದ. ಪಾಪ, ಆ ಹುಡುಗಿಯರಿಗೆ ಅದೊಂದೂ ಗೊತ್ತಾಗದು; ಆದರೆ ಕೇಶವ ಅಂಕಲ್ ಅದೇನೊ ತಮ್ಮೊಂದಿಗೆ 'ಕೆಟ್ಟದ್ದು' ಮಾಡಲಿದ್ದಾನೆ ಎಂಬುದು ಮಾತ್ರ ಅವರಿಗೆ ಅರ್ಥವಾಗಿತ್ತು. ತಡಮಾಡದೆ ಕೂಡಲೇ ಅಲ್ಲಿಂದ ಗಾಬರಿಯಿಂದ ಓಡಿಹೋದ ಹುಡುಗಿ ಯರು ತಮ್ಮ ತಮ್ಮ ಮನೆಯಲ್ಲಿ ವಿಷಯ ತಿಳಿಸಿ ವಿದುಸಿರು ಬಿಟ್ಟರು.

ಕೇಶವನ ಕರ್ಮಕಾಂಡಗಳ ಬಗ್ಗೆ ಅಲ್ಪಸ್ವಲ್ಪ ಅರಿವಿದ್ದ ಹುಡುಗಿಯರ ಪೋಷಕರಿಗೆ ತಮ್ಮ ಮಕ್ಕಳು ಹೇಳುತ್ತಿದ್ದಂತೆಯೇ ಕೋಪ ನೆತ್ತಿಗೇರಿತು. ಸಣ್ಣ ಮಕ್ಕಳ ಬಳಿಯೂ ಅಸಭ್ಯವಾಗಿ ವರ್ತಿಸಿದ ಅವನಿಗೆ ಪಾಠ ಕಲಿಸಬೇಕೆಂದು ಫ್ಯಾನ್ಸಿಸ್ಟೋರ್ ಬಳಿ ಬಂದ ಪೋಷಕರು ಕೇಶವನ ಜೊತೆ ಕಾದಾಟಕ್ಕಿಳಿದರು. ಜಗಳವನ್ನು ನೋಡಿ ಜಮಾಯಿಸತೊಡಗಿದ ಜನರಿಗೂ ನಿಧಾನಕ್ಕೆ ಕೃತ್ಯ ತಿಳಿಯುತ್ತಿದ್ದಂತೆ ಪೋಷಕರ ಬೆಂಬಲಕ್ಕೆ ನಿಂತರು. ಹೀಗೆ ತನ್ನ ಮೇಲಿನ ಆಕ್ರೋಶ ಸಾರ್ವಜನಿಕವಾಗುತ್ತಿರುವುದು ಗಮನಕ್ಕೆ ಬರುತ್ತಿದ್ದಂತೆಯೇ 'ಇನ್ನು ತನಗೆ ಧರ್ಮದೇಟು ಬೀಳುವುದು ಗ್ಯಾರಂಟಿ' ಅಂತ ಗಾಬರಿಬಿದ್ದ ಕೇಶವ ಅಲ್ಲಿಂದ ಪೇರಿಕಿತ್ತ. ಅವತ್ತು ಜನರ ಸಿಟ್ಟು ಎಂತದ್ದಿತ್ತೆಂದರೆ ಓಡಿಹೋಗುತ್ತಿದ್ದ ಕೇಶವನ ಬೆನ್ನು ಬಿದ್ದು ಒದ್ದು ವಾಪಸ್ ಎಳೆತಂದರು. ಅಷ್ಟಾದರೂ ಕೇಶವ ತನ್ನ ತಪ್ಪು ಒಪ್ಪಿಕೊಳ್ಳುವ ಅಥವಾ ತಪ್ಪಾಯಿತೆಂದು ಕ್ಷಮೆ ಕೇಳುವ ಬದಲು ಉದ್ಧಟತನದಲ್ಲೇ ಮಾತನಾಡಿದ್ದು ನೆರೆದಿದ್ದವರಿಗೆ ರೇಗು ಹುತ್ತಿಸಿತ್ತು. ಇಂತಹ ಸ್ಯಾಡಿಸ್ಟ್‌ನಿಗೆ ಪೊಲೀಸರೆ ಸರಿಯೆಂಬ ನಿರ್ಧಾರಕ್ಕೆ ಬಂದ ಸಾರ್ವಜನಿಕರು ತಾವೇ ಕರೆದೊಯ್ದು ಪಡುಬಿದ್ರೆ ಠಾಣೆಗೆ ಒಪ್ಪಿಸಿದರು. ಪೊಲೀಸರು ಕೇಸು ದಾಖಲಿಸಿಕೊಂಡು ಕೇಶವನನ್ನು ಕಂಬಿ ಹಿಂದಕ್ಕೆ ಗದುಮಿದ್ದಾರೆ.

ಅಷ್ಟಕ್ಕೂ ಕೇಶವ ಸುವರ್ಣನ ಇಂತಹ ಅಪರಾ-ತಪರಾ ಇದೇ ಮೊದಲಿನದ್ದಲ್ಲ. 25 ವರ್ಷಗಳ ಹಿಂದೆ ದಲಿತ ಮಹಿಳೆಯೊಬ್ಬಳ ಮೇಲೆ ತನ್ನ 'ಪೌರುಷ' ಪ್ರದರ್ಶಿಸಲು ಹೋಗಿ ಜನರಿಂದ ಒದೆ ತಿಂದದ್ದುಲ್ಲದೆ ದಲಿತ ದೌರ್ಜನ್ಯ ಕಾಯ್ದೆಯಡಿ ಕೇಸನ್ನೂ ಜಡಿಸಿಕೊಂಡಿದ್ದ. ತನ್ನ ಕಾಮತೃಷೆ ಇಂಗಿಸಿಕೊಳ್ಳಲೆಂದೇ ಮಹಿಳಾ ಗ್ರಾಹಕರು ಹೆಚ್ಚಾಗಿ ಬರುವ 'ಫ್ಯಾನ್ಸಿ ಸ್ಟೋರ್' ತೆರೆದು ಕೂತಿದ್ದ. ತನ್ನ ಅಂಗಡಿಗೆ ಬರುತ್ತಿದ್ದ ಹೆಂಗಸರೊಂದಿಗೆ ಅಶ್ಲೀಲವಾಗಿ, ಅಸಭ್ಯವಾಗಿ ಮಾತನಾಡುತ್ತಿದ್ದನಾದರು 'ಏನೊ, ಪಾಪ ವಯಸ್ಸಾದ ವ್ಯಕ್ತಿ, ಸೀನಿಯರ್ ಸಿಟಿಜನ್. ತಮಾಷೆ ಮಾಡುತ್ತಿರಬಹುದು' ಅಂದುಕೊಂಡು ಸುಮ್ಮನಾಗುತ್ತಿದ್ದರು. ಈ ಪ್ರಕರಣ ನಡೆದ ನಂತರ ಅವನ ಬಣ್ಣ ಒಂದೊಂದಾಗಿ ಬಯಲಾಗುತ್ತಿದೆ.

2012ರಲ್ಲೊಮ್ಮೆ ಈತ ಕೊಟ್ಟ ಕಾಟಕ್ಕೆ ಅಮಾಯಕ ಗೃಹಸ್ಥ ಮಹಿಳೆಯೊಬ್ಬಲೂ ಆತ್ಮಹತ್ಯೆ ಮಾಡಿಕೊಳ್ಳಲೂ ಯತ್ನಿಸಿದ್ದಳು. ಹೆಜಮಾಡಿಯಲ್ಲಿ ಬ್ಯೂಟಿಪಾರ್ಲರ್ ನಡೆಸಿಕೊಂಡಿದ್ದ ವಿವಾಹಿತ ಮಹಿಳೆಯೊಂದಿಗೆ ತಾನು ಎಲ್‌ಐಸಿ ಏಜೆಂಟ್ ಅಂತ ಪರಿಚಯ ಮಾಡಿಕೊಂಡಿದ್ದ ಕೇಶವ ನಿಧಾನಕ್ಕೆ ವಿಶ್ವಾಸ ಸಂಪಾದಿಸಿಕೊಂಡು ಅವಳ ಮೊಬೈಲ್ ನಂಬರ್ ಪಡೆದಿದ್ದ. ಆನಂತರವೇ ಅವನ ಕುಚೇಷ್ಟೆ ಆರಂಭವಾದದ್ದು. ಪ್ರತಿದಿನ ಹೊತ್ತಲ್ಲದ ಹೊತ್ತಿನಲ್ಲಿ ಆ ಹೆಂಗಸಿಗೆ ಕರೆ ಮಾಡಿ ಅಶ್ಲೀಲವಾಗಿ ಮಾತನಾಡಿ ಮಾನಸಿಕ ಕಿರುಕುಳ ನೀಡಲು ಶುರುಮಾಡಿದ್ದ. ಅವನ ಕಾಟ ಯಾವ ಮಟ್ಟಕ್ಕೆ ತಲುಪಿತ್ತೆಂದರೆ ತನ್ನ ವೈವಾಹಿಕ ಖಾಸಗಿ ಬದುಕೇ ಮುರಿದುಬೀಳಬಹುದೆಂದು ಮನನೊಂದ ಆಕೆ ನಿದ್ರೆ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಮುಂದಾಗಿದ್ದಳು. ಆಗ ಆಕೆಯ ಮನೆಯವರು ವಿಕೃತ ಕೇಶವನ ಮೇಲೆ ಇದೇ ಪಡುಬಿದ್ರೆ ಠಾಣೆಯಲ್ಲಿ ಕಂಪ್ಲೆಂಟ್ ಕೊಟ್ಟಿದ್ದರು. ಆದರೂ ವಿಹಿಂಪದ ಟ್ರಂಪ್‌ಕಾರ್ಡ್ ಬಳಸಿಕೊಂಡು ನೇಪಾಗಿ ಬಚಾವಾಗಿದ್ದನೆ ಹೊರತು ಪಾಠ ಕಲಿತಿರಲಿಲ್ಲ. ಆ ಘಟನೆಯಾದ ಬಳಿಕ ನೆಪ ಮಾತ್ರಕ್ಕೆ ಪತ್ರಿಕಾ ಪ್ರಕಟಣೆ ಹೊರಡಿಸಿದ್ದ ವಿಹಿಂಪ ಜಿಲ್ಲಾ ಸಮಿತಿ 'ಕೇಶವನಿಗೂ, ವಿಹಿಂಪಗೂ ಯಾವುದೇ ಸಂಬಂಧವಿಲ್ಲ' ಎಂದು ಹೇಳಿತ್ತಾದರು ಈಗಲೂ ಅವನನ್ನೇ ಹೆಜಮಾಡಿ ಘಟಕದ ಅಧ್ಯಕ್ಷನನ್ನಾಗಿ ಮುಂದುವರೆಸಿಕೊಂಡು ಬಂದಿದೆ.

ಪಡುಬಿದ್ರೆ ಪೊಲೀಸರೇ ಹುಷಾರ್, ಅವನ ವಿಎಚ್‌ಪಿ ಬ್ಯಾಗ್ರೌಂಡ್ ನೋಡಿ ನೀವು ಸುಮ್ಮನಾದರೆ ಆತ ಮತ್ತಷ್ಟೂ ವಿಕಾರವಾಗಿ ವಿಜೃಂಭಿಸುವ ಅಪಾಯವನ್ನು ತಳ್ಳಿಹಾಕುವಂತಿಲ್ಲ, ಅದಕ್ಕೆ ನೀವೇ ಹೊಣೆ ಹೊರಬೇಕಾಗುತ್ತೆ...

ರಾಜ್ ಮೊಮ್ಮಗನ ಆರಂಗೇಟ್ರಂ

ಸಿದ್ಧಾರ್ಥ ಮುಹೂರ್ತದಲ್ಲಿ


ವಿನಯ್ ರಾಜ್‌ಕುಮಾರ್


ಸಿದ್ಧಾರ್ಥ ಮುಹೂರ್ತದಲ್ಲಿ

ಒಂದಲ್ಲ ಎರಡಲ್ಲ; ಹದಿನೈದು ಕೋಟಿ ಸುರಿದು ಅಮೆರಿಕದಲ್ಲಿ ನಲವತ್ತು ದಿನಗಳ ಕಾಲ ಶೂಟಿಂಗ್ ಮಾಡಿ, ಅದಕ್ಕೆಂದು ಡಜನ್ನುಗಟ್ಟಲೆ ತಂತ್ರಜ್ಞರು, ಕಲಾವಿದರನ್ನು ಅಮೆರಿಕಕ್ಕೆ ಕರೆದೊಯ್ದು 'ಇನ್ನಿಲ್ಲದಂತೆ ನಿರ್ಮಿಸಿದ 'ನಿನ್ನಿಂದಲೇ.....' ಬಿಡುಗಡೆಯ ಎರಡನೇ ಪ್ರದರ್ಶನಕ್ಕೇ ಪ್ರೇಕ್ಷಕರಿಲ್ಲದೆ ಚಿತ್ರಮಂದಿರ ಖಾಲಿ ಹೊಡೆಯುತ್ತಿತ್ತು-

ಹಾಕಿದ 15 ಕೋಟಿ, ಪುನೀತ್ ಇಮೇಜ್, ರಾಜ್‌ಕುಮಾರ್ ಬ್ಯಾನರ್ ಯಾವುದೂ ಪ್ರೇಕ್ಷಕನ ಪಾಲಿಗೆ ಮುಖ್ಯವಾಗಲಿಲ್ಲ.

ಆಂಥಾದ್ದರಲ್ಲಿ ತಾನು ರಾಜ್ ಮೊಮ್ಮಗನೆಂದು ಬಣ್ಣಹಚ್ಚಿದ ಮಾತ್ರಕ್ಕೆ ಜನ ಮುಗಿಬಿದ್ದು ಸಿನಿಮಾ ನೋಡುವುದಾಗಲಿ, ಚಿತ್ರ ಹೇಗಿದ್ದರೂ ಕೇವಲ ರಾಜ್ ನಾಮಬಲದಿಂದಾಗಿಯೇ ಹಿಟ್ಟಾಗುತ್ತೆ ಎಂಬ ಭ್ರಮೆಯಾಗಲಿ ಪ್ರಯೋಜನಕ್ಕೆ ಬರುತ್ತಾ?

ಇದಕ್ಕೆ ಉತ್ತರ ಸಿಕ್ಕಿದ್ದು ಮೇ 2 ಕ್ಕೆ ಕಂಠೀರವ ಸ್ಟುಡಿಯೋದ ತುಂಬ ಕಿಕ್ಕಿರಿದಿದ್ದ ಅಭಿಮಾನಿಗಳು, ಕಲಾವಿದರ ನಡುವೆ ಉತ್ಸವಮೂರ್ತಿಯಂತಿದ್ದದ್ದು ರಾಜ್ ಮೊಮ್ಮಗ ವಿನಯ್ ರಾಜ್‌ಕುಮಾರ್!

ಥೇಟು ಅಪ್ಪ ರಾಘಣ್ಣನದ್ದೇ ರೂಪ. ಅದೇ ಹುಬ್ಬು ಅದೇ ಕಣ್ಣು ಗುಂಗುರು ಕೂದಲು. ದಿಗಂತ್‌ನಂತೆ ಸುಂದರನಲ್ಲ, ಚೇತನ್‌ನ ಹಾಗೆ ಗೌರವರ್ಣವಿಲ್ಲ, ಧ್ರುವ ಸರ್ಜಾನ ಆರೋಗ್ಯ ಆತನಲಿಲ್ಲ, ಆದರೆ ದಿಗಂತ್ ಮತ್ತು ಧ್ರುವಗಿಂತ ಎತ್ತರ, ಚೇತನ್‌ಗಿಂತ ಬೆಟರ್ ಮೈಕಟ್ಟು ಹೊಂದಿದ್ದಾನೆ ವಿನಯ್. ಇನ್ನು ಗೌರವರ್ಣನೇ ಹಿಟ್ ಸಿನಿಮಾ ಕೊಡಲು ಮುಖ್ಯವಲ್ಲ.

ಎಲ್ಲಕ್ಕಿಂತ ಮಿಗಿಲಾಗಿ ವಿನಯ್‌ಗೆ ಇರುವುದು ಅಭಿಮಾನಿ ದೇವರುಗಳ ಪ್ರೀತಿ, ವಜ್ರೇಶ್ವರಿ ಕಂಬೈನ್ಸ್‌ನ ಬೆಂಬಲ ಮತ್ತು ರಾಜ್ ಕುಟುಂಬದ ಪ್ರೋತ್ಸಾಹ. ಹೊಸ ನಟನೊಬ್ಬನಿಗೆ ಇದಕ್ಕಿಂತ ಇನ್ನೇನು ಬೇಕು?

ಪಾರ್ವತಮ್ಮ ಆಶೀರ್ವಾದ

'ಪುನೀತ್ ಕೂಡ ತನ್ನ ಪರಿಶ್ರಮದಿಂದಲೇ ಗೆದ್ದಿಲ್ಲವೆ? ಹಾಗೇ ವಿನಯ್‌ನಲ್ಲೂ ರಾಜ್ ರಕ್ತ ತಾನೇ ಹರಿಯುತ್ತಿರುವುದು. ಇವತ್ತಲ್ಲ ನಾಳೆ ರಾಜ್ ಮಟ್ಟಕ್ಕಲ್ಲದೆ ಹೋದರೂ ಪುನೀತ್ ಉತ್ತರಾಧಿಕಾರಿಯಾಗುವ ಎಲ್ಲಾ ಲಕ್ಷಣಗಳೂ ವಿನಯ್‌ನಲ್ಲಿದೆ' ಎಂದದ್ದು ರಾಜ್ ಕುಟುಂಬದ ಓರ್ವ ಹಳೇ ಹಿತಚಿಂತಕ.

ಅಂದು ವಿನಯ್‌ನ ಅಜ್ಜಿ ಪಾರ್ವತಮ್ಮ ಸ್ವಿಚ್ ಆನ್ ನೆರವೇರಿಸಿದರು. ಬೆನ್ನಲ್ಲೇ ಪುನೀತ್ ಕ್ಲಾಪ್ ಮಾಡಿದ್ದೂ ಆಯಿತು. ಝಗಮಗದ ಹೊಳಪು ಕ್ಯಾಮೆರಾ ಝಲಕು.

'ಸಿದ್ಧಾರ್ಥ' ಎಂಬ ಹೊಸ ಚಿತ್ರದ ಕತೆ, ತಯಾರಿ, ತಾರಾಗಣ ಮತ್ತು ನಿರೀಕ್ಷೆಯಲ್ಲೇ ಇದೆಲ್ಲಕ್ಕೂ ಉತ್ತರವಿತ್ತು. ಸಿನಿಮಾ ಒಂದನ್ನು ನಂಬ ಅದನ್ನೇ ಉಸಿರಾಡುವ ಗಾಂಧಿನಗರದ ಏಕೈಕ ಮನೆತನ ಅಂತಿದ್ದರೆ ಅದು ರಾಜ್ ಕುಟುಂಬವೆ. ರಾಜ್ ಬದುಕಿದ್ದಾಗಲೇ ಶಿವಣ್ಣನ ಚಿತ್ರಗಳೂ ತೆರೆಕಂಡವು. ರಾಘಣ್ಣ ತಿರಸ್ಕೃತ ಸರಕಾಗಿ ವಾಪಸ್ಸಾಗಬೇಕಾಯಿತು. ಇವರಿಬ್ಬರನ್ನೂ ಮೀರಿಸಿದಂತೆ ಪುನೀತ್ ಚಿತ್ರಗಳು ಹಿಟ್ಟಾದವು.

ಚಿತ್ರದ ಹೆಸರೇ 'ಸಿದ್ಧಾರ್ಥ'. ಜೊತೆಗೆ give me a break ಎಂಬ ಉಪ ಶೀರ್ಷಿಕೆಯನ್ನೂ ನೀಡಲಾಗಿದೆ. 'ಇದರರ್ಥ 'ನನಗೊಂದು ಅವಕಾಶ ಕೊಡಿ' ಎಂದು ಖುದ್ದು ವಿನಯ್ ಹೇಳಿಕೊಂಡ ಹಾಗೆ!

ಹೇಗೆ ಪುನೀತ್ ಬಾಲನಟನಾಗಿ ರಾಜ್ ಜೊತೆ ಬೇಕಾಬಿಟ್ಟಿ ಚಿತ್ರಗಳಲ್ಲಿ ಅಭಿನಯಿಸಿದ್ದರೋ ಆ ಮಟ್ಟಕ್ಕಲ್ಲದಿದ್ದರೂ ವಿನಯ್ ರಾಜ್ ಜೊತೆ ಅಪರೂಪಕ್ಕೊಂತೆ ಕಾಣಿಸಿದ್ದೂ ಇದೆ. 'ಒಡ ಹುಟ್ಟಿದವರು' ಚಿತ್ರದಲ್ಲಿ ವಿನಯ್ ಪುಟ್ಟ ಬಾಲಕನೊಬ್ಬನ ಪಾತ್ರದಲ್ಲಿ ರಾಜ್ ಪಕ್ಕ ಕಾಣಿಸಿಕೊಂಡಿದ್ದ. ತಾತ ರಾಜ್ ಜೊತೆ ವಿನಯ್ ನಟಿಸಿದ ಮತ್ತೊಂದು ಚಿತ್ರವೆಂದರೆ 'ಆಕಸ್ಮಿಕ'. 'ಹುಟ್ಟಿದರೆ ಕನ್ನಡ ನಾಡಲ್ ಹುಟ್ಟಬೇಕು' ಎಂಬ ಹಾಡಿನಲ್ಲಿ ವಿನಯ್ ಬಾಲನಟನಾಗಿ ಕ್ಯಾಮೆರಾ ಎದುರಿಸಿದ್ದಕ್ಕೂ ತಾತ ರಾಜ್‌ರೇ ಕಾರಣರಾದರು.

ರಾಜ್ ಜೊತೆ ನಟಿಸಿದ ಈ ಎರಡು ಚಿತ್ರಗಳನ್ನೇ ತನ್ನ ಪೂರ್ವಜನ್ಮದ ಪುಣ್ಯ ಎಂದು ಇವತ್ತಿಗೂ ಸ್ಮರಿಸುವ ವಿನಯ್‌ಗೆ ಸಿನಿಮಾ ಗೀಳಿದೆ. ಎಲ್ಲಕ್ಕೂ ಮಿಗಿಲಾಗಿ ಫಿಟ್‌ನೆಸ್ ಫ್ರೀಕ್. ಅಂದರೆ ಪ್ರತಿನಿತ್ಯ ಜಿಮ್ಮಿಗೆ ಹೋಗಲೇಬೇಕು. ಆರೋಗ್ಯ ಮತ್ತು ದೇಹದಾರ್ಢ್ಯ ಆತನಿಗೆ ಮುಖ್ಯ. ವಿನಯ್ ಮಾತುಗಾರನಲ್ಲ. ತಂದೆ ಕಂಡರೆ ವಿಪರೀತ ಭಯವಂತೆ. ಆದರೆ ಚಿಕ್ಕಪ್ಪ ಪುನೀತ್ ಕಂಡರೆ ಎಲ್ಲಿಲ್ಲದ ಆಕ್ಕರೆ. ಏಕೆಂದರೆ 'ಪುನೀತ್ ನನ್ನ ಪಾಲಿಗೆ ಕೇವಲ ಅಂಕಲ್ ಮಾತ್ರವಲ್ಲ, ಫ್ರೆಂಡ್ ಇದ್ದಂತೆ. ಯಾವುದೇ ಬೇಕುಬೇಡಗಳ ಕುರಿತಂತೆ ನಾನು ತಂದೆ ಜೊತೆ ಚರ್ಚಿಸುವಷ್ಟು ಸಲುಗೆಯಿಲ್ಲ. ನನಗೆ ಬೇಕಾದ್ದನ್ನೆಲ್ಲ ಅಮ್ಮನಿಗೆ ಹೇಳುತ್ತೇನೆ. ಅಮ್ಮ ಅಪ್ಪನಿಗೆ ಹೇಳಿ ಕೊಡಿಸುತ್ತಾರೆ.

ಆದರೆ ಚಿಕ್ಕಪ್ಪ ಪುನೀತ್ ಹಾಗಲ್ಲ. ಅವರ ಜೊತೆ ದೂರದೂರದ ಸ್ಥಳಗಳಿಗೆ ಪ್ರಯಾಣ ಮಾಡುವುದೇ ರೋಚಕ ಅನುಭವ. 'ನಿನ್ನಿಂದಲೇ' ಶೂಟಿಂಗ್ ವೇಳೆ ಅಮೆರಿಕದಲ್ಲಿ ಸ್ಕೈ ಡೈವಿಂಗ್ ಅನ್ನು ಅವರೇ ನಿಂತು ಹೇಳಿಕೊಟ್ಟಿದ್ದಾರೆ. ರಾಜ್ ಕುಟುಂಬದಲ್ಲಿ ನನಗೆ ಅದೇ ಹೆಚ್ಚು ಸಲುಗೆ ಮತ್ತು ಪ್ರೀತಿ ಅಂತಿದ್ದರೆ ಅದು ಪುನೀತ್ ಜೊತೆಗಷ್ಟೇ. ಹೀಗಾಗಿ ನನ್ನ ಪಾಲಿಗೆ ಪುನೀತ್ ಅಂಕಲೇ ಗುರು!'

ಇದು ವಿನಯ್‌ನ ಮನದಾಳದ ಮಾತು.

ಅದೇನು ಲೀಲೆಯೋ ಗೊತ್ತಿಲ್ಲ, ಶಿವಣ್ಣನಿಗೆ ಗಂಡು ಮಕ್ಕಳಿಲ್ಲ, ಹಾಗೇ ಪುನೀತ್-ಅಶ್ವಿನಿ ದಂಪತಿಗಳ ಪಾಲಿಗೆ ಬಂದದ್ದೂ ಹೆಣ್ಣುಮಕ್ಕಳೆ. ರಾಜ್ ಕುಟುಂಬದ ಅಲಿಖಿತ ಕಟ್ಟಳೆಯಂತೆ ಹೆಣ್ಣು ಮಕ್ಕಳ್ಯಾರೂ ನಟಿಸುವಂತಿಲ್ಲ, ಬಣ್ಣ ಹಚ್ಚುವಂತಿಲ್ಲ. ಎಲ್ಲೋ ಕಳಕೊಂಡಿದ್ದು ಇನ್ನೆಲ್ಲೋ ಸಿಕ್ಕಿತು ಎಂಬಂತೆ ನಟನಾಗಿ ವಿಫಲನಾದ ರಾಘಣ್ಣನಿಗೆ ಇಬ್ಬರೂ ಗಂಡುಮಕ್ಕಳೆ. ಒಬ್ಬ ವಿನಯ್ ಮತ್ತೊಬ್ಬ ಗುರುರಾಜ್.

ಬಹುಶಃ ಇಂಥದೊಂದು ಲೆಕ್ಕ ಹಾಕಿಯೇ ರಾಘಣ್ಣ ತನ್ನ ಚಿಕ್ಕಪ್ಪ ವರದಪ್ಪನವರ ಹೊಕೆ ಹೊತ್ತು ವಜ್ರೇಶ್ವರಿ ಕಂಬೈನ್ಸ್‌ನ ಹೊರೆ ಹೊತ್ತರು. ಹಿಂದೆ ರಾಜ್ ನಟಿಸುತ್ತಿದ್ದ ಪ್ರತಿ ಚಿತ್ರದ ಕತೆಯನ್ನು ಓಕೆ ಮಾಡುತ್ತಿದ್ದದ್ದೇ ವರದಪ್ಪ. ಈಗ ಪುನೀತ್ ಪಾಲಿಗೆ ರಾಘಣ್ಣನೇ ವರದಪ್ಪ ಆಗಿ ಕತೆ, ನಿರ್ಮಾಣ, ನಿರ್ದೇಶನ, ಪ್ರಚಾರ ಎಲ್ಲದರ ಹೊಣೆ ಹೊತ್ತದ್ದು ಪುನೀತ್ ರಾಜ್‌ಕುಮಾರ್ ಯಶಸ್ಸಿಗೆ ನೆರವಾಯಿತು ಎಂಬುದರ ಬಗ್ಗೆ ಎರಡು ಮಾತಿಲ್ಲ.

ಶಿವಣ್ಣ ರಾಜ್ ಬದುಕಿದ್ದಾಗಲೇ ಸದಾಶಿವನಗರದ ಬಂಗಲೆಯಿಂ
ಪ್ರತ್ಯೇಕಗೊಂಡ ನಂತರ ರಾಜ್ ಬ್ಯಾನರ್‌ಗೆ ಚಾಲ್ತಿ ಸಿಕ್ಕಿದ್ದೇ ಪುನೀತ್ ಮೂಲ
ಈಗದು ವಿನಯ್ ಮೂಲಕ ಮೂರನೇ ಹಂತಕ್ಕೆ ಕಾಲಿಡುತ್ತಿದೆ. ಶಿವ
ಹೆಚ್ಚಿಂದರೆ ಇನ್ನು ಐದೋ ಆರೋ ವರ್ಷ ಹೀರೋ ಆಗಿರಬಹುದು. ಪುನೀ
ಯಾವತ್ತಿದ್ದರೂ ಆಷ್ಟು ಚನ್ನವೆ. ಹಾಗಂತ ಪುನೀತ್ ಮಟ್ಟಗಳ್ಳೇ ರಾ
ಹೆಸರು ಕೊನೆಯಾಗಬಾರದು. ಅದು ತಲೆಮಾರಿನಿಂದ ತಲೆಮಾರಿ
ಮುಂದುವರಿಯಲೇಬೇಕು. ಪಕ್ಕದ ಆಂಧ್ರದಲ್ಲಿ ಹೇಗೆ ಆನುವಂಶಿಕ ಗ್ಲಾಮ
ಪ್ರವೃತ್ತಿಯಿದೆಯೋ ಹಾಗೆ ಕನ್ನಡದಲ್ಲೂ ರಾಜ್ ಕೀರ್ತಿ ಪತಾಕೆ ಹಾರಲೇಬೇ

ಪುನೀತ್ ಮಟ್ಟಕ್ಕಲ್ಲದೆ ಹೋದರೂ ರಾಜ್ ಕುಟುಂಬದ ಹೆಸ
ಉಳಿಸುವುದಕ್ಕಾದರೂ ವಿನಯ್ ಬಣ್ಣ ಹಚ್ಚಲೇಬೇಕಿತ್ತು. ಎಲ್ಲಕ್ಕೂ ಮಿಗಿಲ
ಪಾರ್ವತಮ್ಮನವರಲ್ಲೇ ಆಂಥದೊಂದು ಒತ್ತಾಸೆಯಿತ್ತು. ಜೊತೆಗೆ ರಾಘ
ಕೂಡ ತನ್ನೆಲ್ಲಾ ಭಗ್ನಕನಸುಗಳನ್ನು ಮಗ ವಿನಯ್ ಮೂಲಕ ಈಡೇರಿಸಿಕೊಳ್ಳ
ಕನಸು ಕಂಡಿದ್ದರು. ಪಾರ್ವತಮ್ಮ, ರಾಘಣ್ಣ, ತಾಯಿ ಮಂಗಳಾರ ಈ ಕನ
ದೇವ ಕೊಟ್ಟದ್ದು ಕನ್ನಡದ ಪ್ರತಿಭಾವಂತ ನಿರ್ದೇಶಕ ಮಿಲನ ಪ್ರಕಾಶ!

ರಾಜ್ ಕುಟುಂಬದ ಸಮೀಪದ ಸಂಬಂಧಿಯೂ ಆದ ಪ್ರಕಾಶ್ ಸ್ವ
ನಿರ್ದೇಶಕನಲ್ಲದೇ ಹೋದರೂ ಪ್ರತಿಭಾವಂತ ಎಂಬುದರಲ್ಲಿ ಎರಡು ಮಾತಿ

'ಜೋಗಿ ಪ್ರೇಮ್' ಮತ್ತು ಉಪ್ಪಿಗೆ ಹೋಲಿಸಿದರೆ ಗಿಮ್ಮಿಕ್ ಇ
ವೈಟ್‌ಕಾಲರ್ ಡೈರೆಕ್ಟರ್ ಎಂದೇ ಚಾಲ್ತಿಯಲ್ಲಿರುವ ಪ್ರಕಾಶ್‌ರ ಸಾಮರ್ಥ್ಯವೆಂ
ಮೇಕಿಂಗ್. ತಾಂತ್ರಿಕತೆ ಗೊತ್ತು, ಆದನ್ನೇ ನಂಬಿಕೊಂಡು ಮಗ ವಿನಯ್‌ನ

ರಾಘಣ್ಣ ಪ್ರಕಾಶ್‌ರ ಮಡಿಲಿಗೆ ಹಾಕಿದ್ದಾರೆ. ಒಂದೂವರೆ ವರ್ಷದ ಹಿಂದೆಂ
ವಿನಯ್‌ನ ಆರಂಗೇಟ್ರಂಗಾಗಿ ಇನ್ನಿಲ್ಲದ ತಯಾರಿ ನಡೆದೇ ಇತ್ತು. ಆ ಹೊತ್ತಿಗಾಗ
ಸೆಂಟ್ ಜೋಸೆಫ್ ಹೈಸ್ಕೂಲು ಮುಗಿಸಿ ಕಾಲೇಜು ಮೆಟ್ಟಿಲೇರಿದ್ದ ವಿನಯ

ಕತೆಗಾಗಿ ಒಂದು ವರ್ಷ

ಆ ವಯಸ್ಸಿನ ಹೆಚ್ಚಿನ ಯುವಕರಂತೆ ವಿನಯ್ ಕೂಡ ಕ್ಲಾಸಿಗೆ ಚಕ
ಹಾಕುವುದು, ಸಿನಿಮಾ ನೋಡುವುದು, ರೆಸ್ಟೋರೆಂಟ್ ಎಂದೆಲ್ಲ ಸುತ್ತಾಡಿದ್ದರಿ
ಹಾಜರಾತಿ ಕೊರತೆಗೆ ಬಿದ್ದು ಪರೀಕ್ಷೆಗೆ ತಾಪತ್ರಯವಾಯಿತು. ಮಗನ ಕ್ಲಾ
ಚಕ್ರ ಕುರಿತಂತೆ ತಂದೆಯೇ ಪಿನ್ಸಿಪಾಲರೆದುರು ಕೈಕಟ್ಟಿ ನಿಲ್ಲಬೇಕಾದ
ರಾಘ ನಿರ್ಧರಿಸಿದ್ದು ಮಗ ಇನ್ನು ಓದಲಾರ ಮತ್ತು ಓದುವ ಆಸಕ್ತಿಯ
ಆತನಲ್ಲಿಲ್ಲ!

ಆಗ ವಿನಯ್‌ನನ್ನು ಪುಣೆಯ ಫಿಲ್ಮ್ ಇನ್ಸ್‌ಟ್ಯೂಟಿಗೆ ತರಬೇತಿಗೆ
ಸೇರಿಸುವ ಯತ್ನಗಳಾದವು. ಕರಾಟೆ, ಡ್ಯಾನ್ಸ್, ಹಾರ್ಸ್‌ರೈಡಿಂಗ್ ಎ
ಕಲಿತದ್ದಾಯ್ತು, ಅಭಿನಯದ ತರಬೇತಿಯೂ ಆಗಿತ್ತು. ನಿರ್ದೇಶಕ ಪ್ರಕ
ಜಯಂತ್ ಎಂಬ ಕತೆಗಾರರನ್ನು ಹಿಡಿದು ಉತ್ತಮ ಕತೆಯನ್ನೇ ಬರೆಸಿದ
ಸ್ಕ್ರಿಪ್ಟ್‌ಗೆಂದೇ ಬರೋಬ್ಬರಿ ಒಂದು ವರ್ಷ ಪ್ರಕಾಶ್ ಹೆಣಗಾಡಿದ್ದರು. ಮೊದ
ರಾಘ ಕತೆಯನ್ನು ಓಕೆ ಮಾಡಿ ಆನಂತರ ಪುನೀತ್ ಅದನ್ನು ಒ
ಹೊತ್ತಿಗೆ ಇನ್ನೊಂದು ವರ್ಷ ಮುಗಿದುಹೋಗಿತ್ತು. ಕತೆ ನ
ಜನರೇಷನ್ನಿನದ್ದಾಗಿರಬೇಕು, ಹರಿಕೃಷ್ಣರ ಸಂಗೀತವೇ ಇರಬೇಕು, ಕೃಷ್ಣಕುಮ
ಕ್ಯಾಮೆರಾ ಇದ್ದರೇನೇ ಚಂದ ಎಂದೆಲ್ಲಾ ರಾಘಣ್ಣನನ್ನು ಒಪ್ಪಿಸಿದ ಪ್ರ
ಅಂತಿಮವಾಗಿ ಮುಹೂರ್ತ ನಿಗದಿ ಮಾಡಿದ್ದು ಮೇ 2 ಕ್ಕೆ.

ಏಕೆಂದರೆ ಮೇ 7 ವಿನಯ್‌ನ ಹುಟ್ಟುಹಬ್ಬ. ಇಷ್ಟೆಲ್ಲಾ ಪೂರ್ವ ತಯಾರಿ
ನಂತರವೂ ರಾಜ್ ಕುಟುಂಬ ಸೂಕ್ಷ್ಮವಾಗಿ ಪರಿಗಣಿಸಿದ್ದು ಹೀರೋಯ
ಆಯ್ಕೆಯನ್ನು. ಹುಡುಗಿ ಟೀನೇಜ್ ಆಗಿರಬೇಕು. ಪುನೀತ್ ಅಪ್ಪು ಮ
ಎಂಟ್ರು ಕೊಟ್ಟಾಗ ರಕ್ಷಿತಾ ಹೇಗೆ ಬಾಲೆಯಂತಿದ್ದಳೋ ಅಂಥ
ದಂತದಗೊಂಬೆಯಂಥ ಹೀರೋಯಿನ್ನನ್ನು ಹೆಕ್ಕಿ ತರುವುದು ಸುಲ
ಕೆಲಸವಾಗಿರಲಿಲ್ಲ. ಚೆನ್ನೈ, ಹೈದ್ರಾಬಾದ್, ದೆಹಲಿ ಎಲ್ಲಾ ಸುತ್ತಿ ಅಂತಿಮ
ಮುಂಬಯಿಯ ಅಪೂರ್ವ ಅರೋರಾ ಎಂಬ ಬೆಡಗಿಯನ್ನು ರಾಘ
ಮಾಡಿದ್ದೇ ದೊಡ್ಡ ಕತೆಯಾಗಿತ್ತು.

ಇಷ್ಟೆಲ್ಲಾ ಪೂರ್ವ ತಯಾರಿ ಮುಗಿಸಿಕೊಂಡೇ ಮೇ 2 ರ ಮುಹೂ
ರಾಜ್ ಕುಟುಂಬ ಸಜ್ಜಾಗಿತ್ತು. ನಿರೀಕ್ಷೆಯಂತೆಯೇ ಎಲ್ಲವೂ ಮುಗಿ
ಬಜೆಟ್ ಹೆಚ್ಚೂಕಮ್ಮಿ ಮೂರು ಕೋಟಿಯಾಗಬಹುದು. ಉತ್ತಮ
ಹರಿಕೃಷ್ಣರ ಮ್ಯೂಸಿಕ್, ಪ್ರಕಾಶ್ ನಿರ್ದೇಶನ, ರಾಜ್ ಬ್ಯಾನರ್‌ನ ನಿಮ
ಎಲ್ಲವೂ ವಿನಯ್ ನನ್ನು ಬಾಕ್ಸ್ ಆಫೀಸ್‌ನಲ್ಲಿ ಗೆಲ್ಲಿಸಲು ಯತ್ನಿಸುತ್ತಿವೆ

ವಿನಯ್ ತನ್ನೆಲ್ಲ ಸಾಮರ್ಥ್ಯ, ಪ್ರತಿಭೆಯನ್ನು ಬಳಸಿಕೊಂಡು ರ
ಮನೆತನಕ್ಕೆ ಹೆಮ್ಮೆ ಮತ್ತು ಗೌರವ ತಂದುಕೊಡಲಿ, ಕನ್ನಡ ಚಿತ್ರರಂ
ಬೆಳೆಯಲಿ ಎಂಬುದೇ ನಮ್ಮ ಹಾರೈಕೆ.

● ರಾ.ಸೋಮನಾ

ರಾಬಿನ್ ಉತ್ತಪ್ಪ, ತಂದೆ ಗುದ್ದಪ್ಪ, ತಾಯಿ ಅತ್ತಪ್ಪ

ಲವ್ ಟ್ರ್ಯಾಜಿಡಿ ಮತ್ತು ಧರ್ಮ!

ಐಪಿಎಲ್‌ನಲ್ಲಿ ಸಿಕ್ಸರ್ ಮೇಲೆ ಸಿಕ್ಸರ್ ಬಾರಿಸಿ ಎದುರೇನಂತೆ; ರಾಬಿನ್ ಉತ್ತಪ್ಪನ ಸಂತೋಷಕ್ಕೆ ಆಕಾಶದ ಅಂಚುಗಳೇ ಚದುರುತ್ತಿಲ್ಲ. ಕಲ್ಕತ್ತಾ ನೈಟ್ ರೈಡರ್ಸ್ ಒಡೆಯ ಶಾರುಖ್‌ಖಾನ್ ಕೋಟಿ ಕೋಟಿ ಸುರಿದೇ ಖರೀದಿಸಿದರೇನಂತೆ, ಮ್ಯಾಚಿನಿಂದ ಮ್ಯಾಚಿಗೆ ಉತ್ತಪ್ಪನ ಜೊತೆಯಾಗಿ ಬಂದು ಕುದುರಿದರೇನಂತೆ, ಸಿಕ್ಸರ್, ಬೌಂಡರಿಗಳ ಮಳೆ ಸುರಿಸಿದರೂ ತಾಯಿ ಕಣ್ಣೀರು ಹರಿಸುವುದು ನಿಲ್ಲುತ್ತಿಲ್ಲ!

ಒಬ್ಬ ಕ್ರಿಕೆಟ್ ವೀರ ತನ್ನ ಕೀರ್ತಿಯ ಉತ್ತುಂಗದಲ್ಲಿರುವಾಗಲೇ ಆತನ ಖಾಸಗಿ ಬದುಕು ಕಲ್ಲೋಲವಾದರೆ ಏನೆಲ್ಲಾ ಅನಾಹುತಗಳಾಗುತ್ತೋ ಅಂಥದ್ದೇ ಪಜೀತಿಗೀಗ ಉತ್ತಪ್ಪ ತಲೆ ಕೆಡಿಸಿಕೊಳ್ಳಬೇಕಾಗಿದೆ. ಅದೂ ಈ ವಯಸ್ಸಲ್ಲಿ ತನ್ನ ತಾಯಿ ಪೋಲೀಸ್ ಠಾಣೆಯೊಂದಕ್ಕೆ ಧಾವಿಸಿ ತನ್ನ ಗಂಡ ಮತ್ತು ಮಗನ ವಿರುದ್ಧ ದೂರು ಕೊಟ್ಟ ಪಜೀತಿಯಿದೆಯಲ್ಲ; ಅಂತೂ ಅದು ಕ್ರಿಕೆಟರ್ ರಾಬಿನ್‌ನ ಲೆವೆಲ್ಲಿಗಂತೂ ಇಳಿದದ್ದೇ ಅಲ್ಲ!

ಇದೆಲ್ಲಾ ಮೇಲುನೋಟಕ್ಕದು ಯಾರೋ ಕುದುಕ ಹೆಂಡತಿಗೆ ಇನ್ನೊಬ್ಬನ ವಿರುದ್ಧ ಆತನ ಬಾಧಿತ ಪತ್ನಿ ಪೋಲೀಸರ ಮೊರೆ ಹೊಕ್ಕಂಥದ್ದೇ ಪ್ರಹಸನ. ಆದರೆ ಇದು ಏನಾವುದೋ ಕೊಳಗೇರಿಯಲ್ಲೋ ಇಲ್ಲಾ ಕೊಂಪೆಯಲ್ಲೋ ನಡೆದಿದ್ದರೆ ಆ ಮಾತು ಬೇರೆ. ಆದರೆ ರಾಬಿನ್ ಉತ್ತಪ್ಪನ ತಂದೆ ವೇಣು ಉತ್ತಪ್ಪ ಕಾಫಿ ತೋಟದ ಗೂಡಂಗಡಿ ಕುಡುಕನಾಗಲಿ ಕಲಾಸಿಪಾಳ್ಯದ ರೌಡಿಯಾಗಲಿ ಅಲ್ಲ, ಕರ್ನಾಟಕ ರಾಜ್ಯ ಹಾಕಿ ಅಸೋಸಿಯೇಷನ್ನಿನ ಹಾಲಿ ಅಧ್ಯಕ್ಷ ಮತ್ತು ಕೊಡಗಿನ ಗೌರವಾನ್ವಿತ ಕಾಫಿ ಪ್ಲಾಂಟರ್.

ಈ ಪ್ರಕರಣ ಕೂಡ ಮಾಮೂಲಿಯದ್ದೇನಲ್ಲ. ಕೊಡಗಿನ ಗೋಣಿಕೊಪ್ಪ ಸಮೀಪದ ಹಾತೂರು ಸಮೀಪದ ಕಾಫಿ ತೋಟವೊಂದರ ಮೇಲೆ ಪೋಲೀಸರು ದಾಳಿ ನಡೆಸಿದ್ದರು. ಅಲ್ಲಿ ಕಾಫಿ ಕೊಯ್ಯಲು ಬಂದಿದ್ದ ಕೂಲಿ ಕಾರ್ಮಿಕರ ಮಕ್ಕಳನ್ನು ಅಕ್ರಮವಾಗಿ ಜೂಜಾಟಕ್ಕೆ ಬಳಸಿಕೊಳ್ಳಲಾಗುತ್ತಿದೆ ಎಂಬ ಆರೋಪದ ಮೇಲೆ ಪೋಲೀಸರು ದಾಳಿ ನಡೆಸಿದ್ದರು. ಆ ಸಂದರ್ಭದಲ್ಲಿ ಅಲ್ಲಿ ಸಿಕ್ಕಿಬಿದ್ದವರಲ್ಲಿ ಕಾಫಿ ತೋಟದ ಮಾಲೀಕರಾದ ವೇಣು ಉತ್ತಪ್ಪ ಮತ್ತು ಅವರ ಪತ್ನಿ ರೋಸಲಿನ್ ಕೂಡ ಇದ್ದರು. ಆ ಪ್ರಕರಣ ಕೋರ್ಟಿನಲ್ಲಿ ಇತ್ಯರ್ಥವಾಗಿ ಹೋಗಿದೆ. ಆದರೆ ಈಗ ಮತ್ತೆ ಅದೇ ಪ್ರಕರಣ ಮರುಕಳಿಸಿದೆ. ಈ ಸಲ ಪೋಲೀಸರ ಮುಂದೆ ಹಾಜರಾಗಿರುವುದು ಕೂಡ ಅದೇ ರೋಸಲಿನ್ ಉತ್ತಪ್ಪ.

ಈ ಸಲದ ಪ್ರಕರಣ ಕೂಡ ಕೊಡಗಿನ ಗೋಣಿಕೊಪ್ಪ ಸಮೀಪದ ಹಾತೂರು ಸಮೀಪದ ಕಾಫಿ ತೋಟವೊಂದರಲ್ಲಿ ನಡೆದಿದೆ. ಆದರೆ ಈ ಸಲ ಪೋಲೀಸರು ದಾಳಿ ನಡೆಸಿದ್ದು ಕಾಫಿ ತೋಟದ ಮೇಲಲ್ಲ

ಉತ್ತರ ಕನ್ನಡ: ಎಮ್ಮೆಲ್ಸಿಗಿರಿ ಯೋಗ ಆಳ್ವಗೋ? ನಾಯ್ಕಗೋ?



ಉತ್ತರ ಕನ್ನಡ ರಾಜಕಾರಣದ ಆಟಾಡ ಮತ್ತೊಂದು ಎಲೆಕ್ಷನ್ ಆಟಕ್ಕೆ ಆಣಿಯಾಗುತ್ತಿದೆ. ಜೂನ್‌ನಲ್ಲಿ ವಿಧಾನ ಪರಿಷತ್ ಸದಸ್ಯತ್ವಕ್ಕೆ ನಡೆಯಲಿರುವ ಗುದುಮುರಿಗೆ ಜಿಲ್ಲೆಯ ಒಂದಿಷ್ಟು ಮರಿ-ಹಿರಿ ಪುಢಾರಿಗಳ ನಿದ್ದೆ ಕೆಡಿಸುತ್ತಿದೆ. ಎಸ್.ಡಿ. ಗಾಂವಕರ್, ಕಮಲಾಕರ, ಗೋಕರ್ಣರಂಥ ಒಬ್ಬಿಬ್ಬರ ಬಿಟ್ಟರೆ ಜಿಲ್ಲೆಯಿಂದ ಪರಿಷತ್‌ಗೆ ಹೋದ ಬಹಾದ್ದೂರರೇ ಇಲ್ಲ! ಇಂತಿಪ್ಪ ಉತ್ತರ ಕನ್ನಡದ ರಾಜಕೀಯ ಇತಿಹಾಸದಲ್ಲಿ ಈ ಬಾರಿ ಒಬ್ಬ ವಿಧಾನಸಭೆಯಿಂದ ಪರಿಷತ್‌ಗೆ ಪ್ರವೇಶಿಸುವ ಅದೃಷ್ಟ ಖುಲಾಯಿಸುವ ಸೂಚನೆ ಗೋಚರಿಸುತ್ತಿದೆ.

ಮಾಜಿ ಸಿಎಂ ವೀರೇಂದ್ರ ಪಾಟೀಲ್ ಪಟಾಲಮ್‌ನಲ್ಲಿದ್ದ ಕಾರವಾರದ ಪ್ರಭಾವಿ ಕೊಂಕಣ ಮರಾಠ ಸಮುದಾಯದ ಗಾಂವಕರ್ ಸುದೀರ್ಘ ಕಾಲ ಪರಿಷತ್‌ನಲ್ಲಿ ಕಳೆದಿದ್ದರು. ಒಮ್ಮೆಯಂತೂ ಪರಿಷತ್‌ನ ಅಧ್ಯಕ್ಷತೆಗೂ ಏರಿದ್ದರು. ಜೆ.ಎಚ್. ಪಟೇಲರ ಜನತಾದಳದ ದರ್ಬಾರಿನಲ್ಲಿ ತೀರ ಹಿಂದುಳಿದ ವರ್ಗದ ಕಮಲಾಕರ ಗೋಕರ್ಣ ಆಜಾನಕ್ ಪರಿಷತ್ ಪಾಠಕ್ಷಮಿಯಾಗಿದ್ದರು. ಲಕ್ಷ್ಮೀಸಾಗರ್ ನಿಧನದಿಂದ ತೆರವಾಗಿದ್ದ ಸ್ಥಾನ ತುಂಬಿದ್ದ ಗೋಕರ್ಣ ಅಲ್ಲಿದ್ದದ್ದು ಮಾತ್ರ ಬರೀ ಹದಿನಾಲ್ಕೇ ತಿಂಗಳು! ನಂತರದ ರಾಜಕೀಯ ಸ್ಥಿತ್ಯಂತರದಲ್ಲಿ ಆಹಿಂದ ಕಲಿ ಗೋಕರ್ಣ ಮೇಲೇರದಂತೆ ಡಾನ್ ದೇಶಪಾಂಡೆ ತರತರದ ಸಾಮ-ಭೇದ-ದಂಡ ಪ್ರಯೋಗಿಸಿ ಆಪೋಷನ ಪಡೆದುಬಿಟ್ಟರು.

ಫ್ಯೂಡಲ್ ದೇಶಪಾಂಡೆ ಪರ್ವ ಪ್ರಾರಂಭವಾಗಿ ಬರೋಬ್ಬರಿ ಮೂರು ದಶಕ ಕಳೆದಿದೆ. ಈ ಅವಧಿಯಲ್ಲಿ ಆತ ಎರಡನೇ ಸಾಲಿನ ನಾಯಕತ್ವ ಬೆಳೆಯದಂತೆ ಅಲ್ಲಿಂದಿಲ್ಲಿಗೂ ಚಿವುಟಿ ಹಾಕುವ ಕಾರ್ಯಾಚರಣೆಯಶಸ್ವಿಯಾಗಿ ಮಾಡಿಕೊಂಡು ಬಂದಿದ್ದಾರೆ. ದೇಶಪಾಂಡೆ ಜನತಾ ದಳದಲ್ಲಿರಲಿ ಅಥವಾ ಕಾಂಗ್ರೆಸ್‌ನಲ್ಲಿರಲಿ ಗ್ರಾಮ ಪಂಚಾಯ್ತಿ ಸದಸ್ಯತ್ವದಿಂದ ಪಾರ್ಲಿಮೆಂಟ್ ಮೆಂಬರಿಕೆ ತನಕದ ಅಧಿಕಾರ ಸ್ಥಾನಗಳೆಲ್ಲ ಆತನ ಇಷ್ಟಾನಿಷ್ಟದಂತೆ ಹಂಚಿಕೆ ಆಗಿವೆ. ಸ್ಥಳೀಯ ಸಂಸ್ಥೆಗಳಿಂದ ಪರಿಷತ್‌ಗೆ ಹೋದವರೆಲ್ಲರೂ ದೇಶಪಾಂಡೆಯ ಗುಲಾಮರೇ. ಪಶ್ಚಿಮ ಪದವೀಧರ ಅಥವಾ ಪಶ್ಚಿಮ ಶಿಕ್ಷಕರ ಕ್ಷೇತ್ರದಿಂದಲೂ ಉತ್ತರ ಕನ್ನಡದ ಒಬ್ಬನೂ ಪರಿಷತ್‌ಗೆ ಹೋದ ದಾಖಲೆಯಿಲ್ಲ. ಅದಕ್ಕೆ ದೇಶಪಾಂಡೆ ಅವಕಾಶವೂ ಕೊಟ್ಟಿಲ್ಲ.

ಈಗ ಅದೇ ಕುತಂತ್ರಗಾರ ದೇಶಪಾಂಡೆ ವಿಧಾನಸಭೆಯಿಂದ ಪರಿಷತ್‌ಗೆ ನಡೆವ ಚುನಾವಣಾ ಕಣದಲ್ಲಿ 'ದಾಳ' ಉರುಳಿಸುತ್ತಿದ್ದಾರೆ. ಉತ್ತರ ಕನ್ನಡ ಯಾವ ಕಾಂಗ್ರೆಸಿಗನೂ ಪರಿಷತ್ ಸದಸ್ಯನಾಗುವುದು ದೇಶಪಾಂಡೆಗೆ ಬೇಡವಾಗಿದೆ. ಎಲ್ಲ ಅಧಿಕಾರ ತನ್ನ ಕೈಯಲ್ಲೇ ಇರಬೇಕೆಂಬ ಸರ್ವಾಧಿಕಾರಿ ಮನೋಭಿಲಾಷೆಯ ದೇಶಪಾಂಡೆಗೆ ಜಿಲ್ಲೆಯಲ್ಲಿ ಇತರ ಐದು ಎಮ್ಮೆಲ್ಲೆಗಳಿರುವುದೇ ಅಸಹನೆಯ ಸಂಗತಿ. ಹೀಗಿರುವಾಗ ಮತ್ತೊಬ್ಬ ಎಮ್ಮೆಲ್ಸಿ ಜಿಲ್ಲೆಯಲ್ಲಿ ಸೃಷ್ಟಿಯಾಗುವುದು ಆತ ಸಹಿಸಲು ಸಾಧ್ಯವಾ? ಆದರೂ ಈ ಬಾರಿಯ ಎಮ್ಮೆಲ್ಸಿ ಚುನಾವಣೆಯಲ್ಲಿ ಭಾಗವಹಿಸಬೇಕಾಗಿರುವುದು ಆತನಿಗೆ ಅನಿವಾರ್ಯ ಕರ್ಮದಂತಾಗಿದೆ. ತನ್ನ ಆಜ್ಞಾನುಧಾರಿ ಒಬ್ಬನನ್ನು ಎಮ್ಮೆಲ್ಸಿ ಮಾಡುವುದಕ್ಕಿಂತಲೂ ತನ್ನ ವೈರಿಣಿ ಮಾರ್ಗರೆಟ್ ಆಳ್ವ ಪಡೆಯ ಕೈ ಮೇಲಾಗದಂತೆ ಆತ ಕಿತಾಪತಿ ಮಾಡಬೇಕಾಗಿದೆ.

ಮುಗಿದ ಪಾರ್ಲಿಮೆಂಟ್ ಚುನಾವಣೆಯಲ್ಲಿ ಕಾಂಗ್ರೆಸ್‌ನ ಉತ್ತರ ಕನ್ನಡದ ಟಿಕೆಟ್ ಮ್ಯಾಗಿಯ ಮೊದ್ಮಣಿ ಮಗ ನಿವೇದಿತ್ ಆಳ್ವನಿಗೆ ಕೊಡಲು ಹೈಕಮಾಂಡ್ ಮಾಂಡಲೀಕರು ನಿರ್ಧರಿಸಿದ್ದರು. ಆದರೆ ಹಠಕ್ಕೆ ಬಿದ್ದು ತನ್ನ ಕಾಸು, ದಿಲ್ಲಿ ದರ್ಬಾರಿನಲ್ಲಿರುವ ಸಂಪರ್ಕ, ಬೇಗನಾದ ಕೇಂದ್ರ ಮಂತ್ರಿ (ಎನ್‌ಸಿಪಿ) ಪ್ರಫುಲ್ ಪಟೇಲ್ ತಾಕತ್ತು ಒಂದುಗೂಡಿಸಿ ಕುಲೋದ್ಧಾರಕ ಪ್ರಶಾಂತ್ ಕಾಂಗ್ರೆಸ್ ಕ್ಯಾಂಡಿಡೇಟ್ ಆಗುವಂತೆ ದೇಶಪಾಂಡೆ ಚಮತ್ಕಾರ ನಡೆಸಿದ್ದರು. ಕ್ರಿಶ್ಚಿಯನ್ ಕೋಟಾದಲ್ಲಿ ರಾಜ್ಯದಲ್ಲಿ ಒಂದು ಕಡೆ ಟಿಕೆಟ್ ಕೊಡಬೇಕಾದ ಸ್ಪೇಟಜೆ ಲೆಕ್ಕಾಚಾರಕ್ಕೆ ಬಿದ್ದಿದ್ದ ಕಾಂಗ್ರೆಸ್ ಕಿಂಗ್‌ಗಳು ನಿವೇದಿತ್ ಆಳ್ವಗೆ ಉತ್ತರ ಕನ್ನಡದ ಟಿಕೆಟ್ ಕೊಡುವ ತೀರ್ಮಾನಕ್ಕೆ ಬಂದಿದ್ದರು. ಬೆಂಗಳೂರು ಉತ್ತರದಲ್ಲಿ ಸಾಂಗ್ಲಿಯಾನಾಗೂ ಟಿಕೆಟ ಕೊಡಲಾಗದ ಸಂದಿಗ್ಧಕ್ಕೆ ಬಿದ್ದಿದ್ದ ಕಾಂಗ್ರೆಸ್ ಹೈಕಮಾಂಡ್ ಕ್ರಿಶ್ಚಿಯನ್ ಕೋಟಾ ಉತ್ತರ ಕನ್ನಡ ಮೂಲಕ ತುಂಬುವ ಇರಾದೆಯಲ್ಲಿತ್ತು. ಆದರೆ ದೇಶಪಾಂಡೆಯ ತೂಕವೇ ಜಾಸ್ತಿಯಾದ್ದರಿಂದ ಆಗೊಂದು 'ಒಡಂಬಡಿಕೆ' ಮಾಡಲಾಗಿತ್ತು.

ಈ ಒಪ್ಪಂದದಂತೆ ಸಾಂಗ್ಲಿಯಾನಾಗೆ ರಾಜ್ಯಸಭೆ ಸ್ಥಾನ ಮತ್ತು ಮ್ಯಾಗಿ ಮಗನಿಗೆ ಪರಿಷತ್ ಸೀಟು ಕೊಡುವುದೆಂದು ರಾಜಿ ನಡೆಸಲಾಗಿತ್ತು. ಮಗನಿಗೆ ಟಿಕೆಟ್ ತರುವ ಆತುರದಲ್ಲಿ ಈ ಒಪ್ಪಂದಕ್ಕೆ ದೇಶಪಾಂಡೆ ಒಪ್ಪಿಗೆ ಸೂಚಿಸಿದ್ದರು. ಆದರೆ ಆದೇ ಹೊತ್ತಲ್ಲಿ ಉತ್ತರ ಕನ್ನಡ ಸಂಸದ ಸ್ಥಾನಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾಗುವ ಆಸೆಯಲ್ಲಿದ್ದ ಜಿಲ್ಲಾ ಕಾಂಗ್ರೆಸ್ ಅಧ್ಯ ಭೀಮಣ್ಣ ನಾಯ್ಕ್ ಎಐಸಿಸಿ ಪ್ರಧಾನಕಾರ್ಯದರ್ಶಿಯಾ ಸ್ವಜಾತಿ ಬಂಧು ಹರಿಪ್ರಸಾದ್ ಮೂಲಕ ಪ್ರಬಲ ಲಾ ನಡೆಸಿದ್ದರು. ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಶಿರಸಿ ಕ್ಷೇತ್ರ ಕಾಂಗ್ರೆಸ್ ಟಿಕೆಟ್ ತಪ್ಪಿಸಿದ್ದೇ ದೇಶಪಾಂಡೆ ಎಂ ಆಕ್ರೋಶದಲ್ಲಿದ್ದ ಭೀಮಣ್ಣ ಒಂದೋ ತನಗೆ ಟಿಕೆ ಕೊಡಿ ಅಥವಾ ಹರಿಗೇ ಅವಕಾಶ ನೀಡಿ ಎಂಬ ಒತ್ತಾಯ ಎಐಸಿಸಿ ಮಟ್ಟದಲ್ಲಿ ಹಾಕಿದ್ದರು. ಇದು ದೇಶಪಾಂಡೆಯನ್ನ ಕಂಗೆಡಿಸಿತ್ತು.

ತನ್ನ ವಿರುದ್ಧ ತಿರುಗಿಬಿದ್ದಿದ್ದ ಭೀಮಣ್ಣನ ತಣ್ಣಗಾಗಿಸಲು ದೇಶಪಾಂಡೆ ಆತನಿಗೆ ವಿಧಾನ ಪರಿಷತ್ ಮೆಂಬರಿಕೆಯ ಆಮಿಷ ಒಡ್ಡಿದ್ದರು. ಈ ದೇಶಪಾಂಡೆಯ ನಂಬಿ ದ ಕಾಯುತ್ತಿದ್ದ ತನಗೆ ರಾಜಕಾರಣೆಯ ಗೆಟಪ್ಪು ಕೊಟ್ಟ ಭಾವ (ಅಕ್ಕನ ಗಂಡ) 'ಬಂ' ಸಾಹೇಬರಿಗೆ ಕೈಕೊಟ್ಟ ಕಾಂಗ್ರೆಸ್‌ನಲ್ಲಿ ಉಳಿದಿದ್ದ ಭೀಮಣ್ಣನಿಗೆ ಶಿರಸಿ ಅಸೆಂ ಟಿಕೆಟ್ ಅಂತೂ ಸಿಗಲಿಲ್ಲ. ಈಗ 'ಇರುಳು ಕಂಡ ಬಾವಿಯ ಹಗಲು ಬಿದ್ದಂತಾಗಿದೆ ಭೀಮಣ್ಣನ ಪಾಡು. ದೇಶಪಾಂಡ ತನ್ನ ಎಮ್ಮೆಲ್ಸಿ ಮಾಡುವುದಕ್ಕಿಂತಲೂ ನಿವೇದಿತ್‌ಗೆ

ಮಾನವ ಹಕ್ಕು ವಕೀಲ ಪುರುಷೋತ್ತಮ ಪೂಜಾರಿ ಅವರಿಗೆ ವಿದಾಯ

ರಾಜ್ಯದ ಅತ್ಯಂತ ಹಿರಿಯ ಮಾನವಹಕ್ಕುಗಳ ಪರ, ವಕೀಲರಾಗಿದ್ದ ಮಂಗಳೂರಿನ ಪುರುಷೋತ್ತಮ ಪೂಜಾರಿ ಬಾಳ ಪಯಣ ಮುಗಿಸಿ ಮೊನ್ನೆ ಹೊರಟುಹೋದರು. 92 ವರ್ಷ ವಯಸ್ಸಿನ ಪುರುಷೋತ್ತಮ ಪೂಜಾರಿ ಸಾಯುವುದಕ್ಕಿಂತ ಹಿಂದಿನ ದಿನದವರೆಗೂ ವೃತ್ತಿ ನಿರ್ವಹಿಸಿದ್ದರು. ಸುದೀರ್ಘ 62 ವರ್ಷಗಳ ಕಾಲ ಅವರು ತನ್ನ ವೃತ್ತಿ ಬದುಕಿನುದ್ದಕ್ಕೂ ದುಷ್ಟರ, ಭ್ರಷ್ಟರ, ಚಿಡ್ಡಿಗಳ, 'ಚಿಡ್ಡಿ ತೊಟ್ಟ ಪೊಲೀಸರ' ಪಾಲಿಗೆ ಸಿಂಹಸ್ವಪ್ನವಾಗಿದ್ದರು. ಅವರ ಮಗ ಬೆಂಗಳೂರಿನಲ್ಲಿ ದೊಡ್ಡ ಉದ್ಯಮಿಯಾಗಿದ್ದರೂ, ಪೂಜಾರಿಯವರಿಗೆ ಸ್ವಂತದ್ದೆಂಬ ಒಂದು ಮನೆಯಿರಲಿಲ್ಲ, ಅತ್ಯಂತ ಸರಳವಾಗಿ ಬದುಕಿದ ಅವರು ಬರೇ ದುಡ್ಡಿಗಾಗಿ ವಕಾಲತ್ತು ನಡೆಸಿದವರಲ್ಲ, ಕಡುಬಡ ಕ್ಲೈಂಟ್‌ಗಳಿಂದ ನಯಾಪೈಸೆಯ ದುಡ್ಡು ಪಡೆಯದೇ ವಕಾಲತ್ತು ನಡೆಸಿ ಕೇಸು ಗೆದ್ದು ಕೊಟ್ಟ ಅಸಂಖ್ಯ ಉದಾಹರಣೆಗಳಿವೆ. ಅದೆಷ್ಟೋ ಕ್ಲೈಂಟ್‌ಗಳು ಕೇಸು ಮುಗಿದು ವರ್ಷಗಳ ಬಳಿಕ ಫೀಸು ತಂದುಕೊಟ್ಟದ್ದೂ ಇದೆಯಂತೆ. ಈ ಇಳಿವಯಸ್ಸಿನಲ್ಲಿ ಪ್ರಾಕ್ಟೀಸ್ ಮಾಡುವುದು ಬೇಡ ಇನ್ನು ನಸ್ನೊಂದಿಗೆ ಬಂದು ಆರಾಮಾಗಿರಿ ಎಂದು ಅವರ ಪುತ್ರ ಸುಜಯ್‌ರಾಜ್ ಅನೇಕ ಬಾರಿ ಅವರನ್ನು ಕರೆದಿದ್ದರಂತೆ. ಅದಕ್ಕವರು "ವೃತ್ತಿ ಬದುಕೇ ನನಗೆ ಆರಾಮ, ಸುಮ್ಮನಿರುವುದು ಆರಾಮವಲ್ಲ" ಎಂದು ಹೇಳುತ್ತಿದ್ದ ಅದ್ಭುತ ಕಾಯಕಜೀವಿ ಪುರುಷೋತ್ತಮ ಪೂಜಾರಿ. ಅವರ ಅಚ್ಚುಮೆಚ್ಚಿನ ಶಿಷ್ಯ ಅವರ ಪುತ್ರನಂತಿದ್ದ ನೌಷಾದ್ ಕಾಶಿಂಜಿ ದುಷ್ಕರ್ಮಿಗಳ ಗುಂಡಿಗೆ ಬಲಿಯಾದ ಬಳಿಕ ವೃತ್ತಿಯಿಂದ ನಿವೃತ್ತರಾಗಲು ಅವರ ಕುಟುಂಬಸ್ಥರು ಒತ್ತಡ ಹೇರಿದಾಗ "ನನ್ನ ಮಗಳನ್ನು (ನುಸ್ರತ್ ಫಾತಿಮಾ) ಯಾರು ನೋಡಿಕೊಳ್ಳುತ್ತಾರೆ" ಎಂದು ಪ್ರಶ್ನಿಸಿ ಅವರ ಬಾಯ್ಮುಚ್ಚಿಸಿದ್ದರಂತೆ. ನೌಶಾದ್ ಕಾಶಿಂಜಿ ಮಾನವಹಕ್ಕು ಉಲ್ಲಂಘಕ ಪೊಲೀಸರ ಗುಂಡಿಗೆ ಬಲಿಯಾಗಿ ಹುತಾತ್ಮರಾದ ಬಳಿಕ ಅವರ ಪತ್ನಿ ನುಸ್ರತ್ ಫಾತಿಮಾ ಮತ್ತು ಮಕ್ಕಳನ್ನು ಪೂಜಾರಿಯವರೇ ನೋಡಿಕೊಂಡಿದ್ದರು. ವಕೀಲೆಯಾಗಿದ್ದ ನುಸ್ರತ್ ಫಾತಿಮಾರಲ್ಲಿ ಧೈರ್ಯ ತುಂಬಿ ವೃತ್ತಿಗಿಳಿಸಿದ್ದರು. ಪೂಜಾರಿಯವರನ್ನು ಪ್ರತಿದಿನ ಮನೆಯಿಂದ ಕಚೇರಿಗೆ ಕರೆ ತರುವುದು, ಕಚೇರಿಯಿಂದ ಕೋರ್ಟಿಗೆ, ಕೋರ್ಟಿನಿಂದ ಮನೆಗೆ ಕರೆದೊಯ್ಯುವುದು ಅವರ ಮಗಳು ನುಸ್ರತ್ ಫಾತಿಮಾ. ಅಂತಹ ಅವಿನಾಭಾವ ಸಂಬಂಧವಿಟ್ಟುಕೊಂಡಿದ್ದ ಪೂಜಾರಿಯವರ ಬದುಕೇ ಕರಾವಳಿಯ ಕೋಮು ಪ್ರಭೃತಿಗಳಿಗೆ ಸೌಹಾರ್ದದ ಪಾಠ.

ಕಳೆದ ನವೆಂಬರ್ ತಿಂಗಳಲ್ಲಿ ನಾನು ಪತ್ರಿಕೆಗಾಗಿ ಅವರ ಸಂದರ್ಶನ ನಡೆಸಿದ್ದೆ. ಅದಾಗಿ ಮೂರು ತಿಂಗಳ ಬಳಿಕ ಮಂಗಳೂರಿನ ವುಡ್‌ಲ್ಯಾಂಡ್ಸ್ ಹೋಟೆಲ್‌ನಲ್ಲಿ ಕೋವು ಸೌಹಾರ್ದ ವೇದಿಕೆಯ ಪತ್ರಿಕಾಗೋಷ್ಠಿಯೊಂದನ್ನು ಮುಗಿಸಿ ಬೈಕ್ ಪಾರ್ಕ್ ಮಾಡಿದ್ದಲ್ಲಿಗೆ ನಡೆದುಕೊಂಡು ಹೋಗುತ್ತಿರುವಾಗ ಹೋಟೆಲ್‌ನ ಆವರಣದಲ್ಲಿ ಕಾರೊಳಗೇ ಕೂತು ಪೂಜಾರಿ, ಮತ್ತವರ ಮಗಳು ನುಸ್ರತ್ ಫಾತಿಮಾ ಚಹಾ ಸೇವಿಸುತ್ತಿದ್ದರು. ಕಡುಕೆಂಪು ಬಣ್ಣದ ಕಾರಿನ ಪಕ್ಕ ನಾನು ಸಾಗುತ್ತಿದ್ದಾಗ ನನ್ನನ್ನು ಗುರುತಿಸಿದ ಆ ಹಿರಿಜೀವ ನನ್ನನ್ನು ಪಕ್ಕಕ್ಕೆ ಕರೆದು ಚಹಾ ತೆಗೆದುಕೊಳ್ಳಲು ಒತ್ತಾಯಿಸಿತು. "ಹೇಗಿದ್ದೀರಿ ಸಾರ್" ಎಂದೆ... "ಫ್ರಸ್ಟ್ರೇಟ್ ಇದ್ದೇನೆ ಮಾರಾಯ. ನೀನು ಮಾಡಿದ ಇಂಟರ್‌ವ್ಯೂ ಓದಿ ನಿಡುಮಾಮಿಡಿ ಸ್ವಾಮೀಜಿ ಕರೆದು ದೊಡ್ಡಮಟ್ಟದ ಸನ್ಮಾನ ಮಾಡಿದ್ರು. ನಾನು ಯಾವತ್ತೂ ಸನ್ಮಾನ ತೆಗೆದುಕೊಳ್ಳುವುದಿಲ್ಲ ಅವರು ಪ್ರಗತಿಪರ ಸ್ವಾಮಿ ಅಲ್ವಾ ಅದಕ್ಕೆ ಒಪ್ಪಿಕೊಂಡೆ" ಎಂದರು. "ಸನ್ಮಾನದ ವೇದಿಕೆಯಲ್ಲಿ ನಿನ್ನ ಮತ್ತು ನಿನ್ನ ಪತ್ರಿಕೆಯ ಹೆಸರು ಹೇಳಲು ಮರೆಯಲಿಲ್ಲ, ನಿನ್ನ ಎಂಕೇಶ್ ಭಾರೀ ಚೆನ್ನಾಗಿ ರಿಪೋರ್ಟಿಂಗ್ ಮಾಡ್ತಿದೆ, ಅಷ್ಟು ದಿಟ್ಟವಾಗಿ ಕನ್ನಡದ ಯಾವ ಪತ್ರಿಕೆಯೂ ಬರೆಯುವುದಿಲ್ಲ" ಎಂದು ನಮ್ಮ ಪತ್ರಿಕೆಯ ಬಗ್ಗೆ ಅಭಿಮಾನದ ನುಡಿಗಳನ್ನು ಆ ಹಿರಿಜೀವದ ಬಾಯಲ್ಲಿ ಕೇಳಿದಾಗ ಅಪಾರ ಖುಷಿಯಾಯಿತು.



ಪ್ರಸ್ತುತ ನಮ್ಮ ನ್ಯಾಯಾಂಗ ವ್ಯವಸ್ಥೆ ತೀರಾ ಭ್ರಷ್ಟಗೊಂಡಿರುವ ಇಂದಿನ ವಿಷಮ ಕಾಲದಲ್ಲಿ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಂಡೇ ವೃತ್ತಿ ನಿರ್ವಹಿಸುತ್ತಿರುವ ವಕೀಲರ ಮಧ್ಯೆ ವಿರಳಾತಿವಿರಳ ಕಾನೂನು ಮತ್ತು ಸಂವಿಧಾನನಿಷ್ಠ ವಕೀಲರಲ್ಲಿ ಪೂಜಾರಿ ಒಬ್ಬರು. ಇತ್ತೀಚಿನ ವರ್ಷಗಳಲ್ಲಿ ಜಡ್ಜ್‌ಗಳನ್ನು ಫಿಕ್ಸ್ ಮಾಡಿ (ಲಂಚ ನೀಡಿ) ಕೇಸ್ ಗೆಲ್ಲುವ ಪರಿಪಾಠ ಹಲವೆಡೆ ಇದೆ. ಪ್ರತಿವಾದಿ ವಕೀಲರಿಗೆ ಗಂಟು ನೀಡಿ ಕೇಸ್‌ಗಳನ್ನು ವೀಕ್ ಮಾಡಿ 'ಪ್ರಸಿದ್ಧ' ವಕೀಲರಾದವರು ಹಲವಾರು ಮಂದಿ ಮಂಗಳೂರಿನಲ್ಲಿದ್ದಾರೆ. ಅಂತಹವರ ಬಗ್ಗೆ ಪೂಜಾರಿಯವರು ಹೇಳುತ್ತಿದ್ದುದಿಷ್ಟೆ "ನೆಟ್ಟಗೆ ಪ್ರಾಕ್ಟೀಸ್ ಮಾಡಿ ಕೇಸು ಗೆಲ್ಲಲಾಗದ ಹದಬೆಗಳು ಅಡ್ಡದಾರಿಯಲ್ಲಿ ಕೇಸು ಗೆದ್ದು ಪ್ರಖ್ಯಾತ ನ್ಯಾಯವಾದಿಯಾಗುತ್ತಾರೆ. ಆದರೆ ಅಂತಹವರ ಆಟ ನನ್ನ ಮುಂದೆ ನಡೆಯುವುದಿಲ್ಲ ಈಗಿನ ಜಡ್ಜ್‌ಗಳು ನಾನು ವೃತ್ತಿ ಪ್ರಾರಂಭಿಸುವ ಕಾಲಕ್ಕೆ ಹುಟ್ಟಿಯೇ ಇರಲಿಲ್ಲ, ಯಾವುದೇ ಕೇಸ್‌ನಲ್ಲಿ ನಾನು ಪ್ರತಿವಾದಿ ವಕೀಲನಾಗಿದ್ದರೆ ಯಾವ ಜಡ್ಜ್ ಫಿಕ್ಸ್ ಆಗುವುದಿಲ್ಲ."

ಮಂಗಳೂರಿನ ಪ್ರಸಿದ್ಧ "ಪಾಪಿ" ವಕೀಲರು ಪೂಜಾರಿಯವರು ಪ್ರತಿವಾದಿ ವಕೀಲರಾಗಿದ್ದ ಕೇಸ್‌ಗಳನ್ನು ತೆಗೆದುಕೊಳ್ಳುವುದೇ ಇಲ್ಲ. ಪೂಜಾರಿಯವರು ವೃತ್ತಿ ಬದುಕಿನಲ್ಲಿ ಸೋತ ಕೇಸುಗಳು ಮೂರೋ, ನಾಲ್ಕೋ ಅಷ್ಟೆ. ಅಷ್ಟು ಪ್ರಸಿದ್ಧ ಮತ್ತು ಹಿರಿಯ ವಕೀಲರಾಗಿದ್ದರೂ ಪೂಜಾರಿ ಸದಾ ಬಡವರ ಕೈಗೆಟುಕುವ ವಕೀಲರಾಗಿದ್ದರು.

ಮಂಗಳೂರಿನ ಸುತ್ತಮುತ್ತ ಅಮಾಯಕ ಮುಸ್ಲಿಂ ಯುವಕರನ್ನು ಭಯೋತ್ಪಾದನೆಯ ಆರೋಪದಲ್ಲಿ ಬಂಧಿಸುತ್ತಿದ್ದಾಗ ಮಂಗಳೂರಿನ ಹೆಚ್ಚಿನೆಲ್ಲಾ ವಕೀಲರು "ದೇಶಪ್ರೇಮ" ಮೆರೆಯುತ್ತಿದ್ದರು. ಆ ಸಂದರ್ಭಗಳಲ್ಲಿ ಯಾರೂ ಎತ್ತಿಕೊಳ್ಳದ ಕೇಸ್‌ಗಳನ್ನು ಎತ್ತಿಕೊಂಡು ಚೆಡ್ಡಿಗಳಿಂದ, ಚೆಡ್ಡಿ ಪೊಲೀಸರಿಂದ, ತಥಾಕಥಿತ ದೇಶಪ್ರೇಮಿಗಳಿಂದ ಭಯೋತ್ಪಾದಕರ ವಕೀಲ ಎಂಬ ಟೀಕೆಗೆ ಗುರಿಯಾಗಿದ್ದ ಪೂಜಾರಿಯವರು "ನಮ್ಮ ದೇಶದ ಯಾರನ್ನು ಬೇಕಾದರೂ ಭಯೋತ್ಪಾದನೆಯ ಆರೋಪದ ಆಕ್ರಮವಾಗಿ ಬಂಧಿಸಬಹುದಾದರೆ, ಸಕ್ರಮವಾಗಿ ಕಾನೂನಿ ನಿಷ್ಠನಾಗಿ ವೃತ್ತಿ ನಿರ್ವಹಿಸಿದರೆ ನಾನು ಭಯೋತ್ಪಾದಕ ವಕೀಲನಾಗುತ್ತೇನೆ. ಹೀಗೆ ಭಯೋತ್ಪಾದಕ ವಕೀಲನಾಗುವುದರಲ್ಲಿ ನನಗೆ ಆತ್ಮತೃಪ್ತಿ ಇದೆ. ನನ್ನ ನಿ ನನ್ನ ಬದ್ಧತೆ ಏನಿದ್ದರೂ ಈ ನೆಲದ ಕಾನೂನಿಗೆ ಮ ಮಾನವೀಯತೆಗೆ ಮಾತ್ರ" ಎನ್ನುತ್ತಿದ್ದರು.

ಪೊಲೀಸ್ ಅಟ್ರಾಸಿಟಿಯ ಕೇಸ್‌ಗಳನ್ನು ಅತೀ ಹೆ ತೆಗೆದುಕೊಳ್ಳುತ್ತಿದ್ದ ಪೂಜಾರಿಯವರು "ಪೊಲೀಸರೆಂದ ಇಲ್ಲಿನ ಫ್ಯೂಡಲ್ ದೊರೆಗಳಲ್ಲ, ಜನರನ್ನು ಶಿಕ್ಷಿಸುವ ಯ ಹಕ್ಕನ್ನೂ ಕಾನೂನು ಪೊಲೀಸರಿಗೆ ನೀಡಿಲ್ಲ. ನಮ್ಮ ದೇಶದ ಪೊಲೀಸ್ ವ್ಯವಸ್ಥೆಯ ಸುಧಾರಣೆಯಾದರೆ ಅರ್ಧಕ್ಕರ್ ಮಾನವ ಹಕ್ಕುಗಳ ಉಲ್ಲಂಘನೆ ಕಡಿಮೆಯಾಗುತ್ತ ಎನ್ನುತ್ತಿದ್ದರು. ಸಾಮಾನ್ಯವಾಗಿ ಪೂಜಾರಿಯವ ಕಕ್ಷಿದಾರರನ್ನು ನೀಚವಾಗಿ ನಡೆಸಿಕೊಳ್ಳುವ ಧೈರ್ಯವ ಯಾವ ಅಧಿಕಾರಿಯೂ ಮಾಡುತ್ತಿರಲಿಲ್ಲ. ಪೊಲೀ ನಾಲಗೆಯ ಬಗ್ಗೆ ಪೂಜಾರಿಯವರಿಗೆ ಅತೀವ ಸಿಟ್ಟು ಪೊಟ್ಟ ಮೊದಲು ಪೊಲೀಸರ ನಾಲಗೆಯನ್ನು ರಿಪಾಮ ಮಾಡಬೇಕು ಎಂದು ಅವರು ಆಗಾಗ ಹೇಳುತ್ತಿದ್ದ ಲೋಹಿಯಾರವರು ಪೊಲೀಸ್ ಮತ್ತು ಸೇನೆ ಇ ದೇಶ ಕಟ್ಟ ಬಯಸಿದ್ದರೆ ಪೂಜಾರಿಯವರು ಪೊಲೀ ಕೈಯಿಂದ ಲಾಠಿ ಮತ್ತು ಬಂದೂಕನ್ನು ಕಿತ್ತುಕೊಳ್ಳಬೇ ಎನ್ನುತ್ತಿದ್ದರು.

ಜೆ.ಪಿ. ಚಳವಳಿಯಲ್ಲಿ ಗುರುತಿಸಿಕೊಂಡಿ ಪೂಜಾರಿಯವರು ಒಂದೊಮ್ಮೆ ಜನತಾಪಕ್ಷದ ಸಕ್ರಿಯರಾಗಿದ್ದರು. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದ ಪೂಜಾರಿಯವ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಂಡಿದ್ದರೆ ಕೇ ಸರ್ಕಾರದಲ್ಲಿ ಉನ್ನತೋನ್ನತ ಪದವಿಗಳನ್ನು ಯಾವತ್ ಪಡೆದುಕೊಳ್ಳಬಹುದಿತ್ತು. ಜನತಾ ಪಕ್ಷದ ಹವಾ ಜೋರಾ ಕಾಲಕ್ಕೆ ಕಾಂಗ್ರೆಸ್‌ನ ರಾಜ್ಯದ ಹಿರಿ ತಲೆಗ ಇಂದಿರಾಗಾಂಧಿಯವರ ಆದೇಶದ ಮೇರೆಗೆ ಮಂಗಳೂ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಜಿಲ್ಲೆಯ

ಸಿಗದಂತೆ ಮಾಡುವುದೇ ಮುಖ್ಯವಾಗಿದೆ ಎಂಬ
ವ ಭೀಮಣ್ಣನಿಗೆ ಕಾಣಿಸಿದೆ! ಆತ ಮತ್ತೊಮ್ಮೆ ಮೋಸ
ೀಗುವ ಛಾನ್ಸೇ ಹೆಚ್ಚಾಗಿದೆ, ಪಾಪ!!

ದೇಶಪಾಂಡೆಗೆ ಈ ಬಾರಿ ದಿಲ್ಲಿಯಲ್ಲಿ ಮ್ಯಾಗಿಯನ್ನು
ಸಿಸಲು ಸಾಧ್ಯವಿಲ್ಲವಾಗಿದೆ. ಲೋಕಸಭಾ ಟಿಕೆಟ್
ರ್ಧದಲ್ಲಿ ಮ್ಯಾಗಿ ಸೋಲಿಸಲು ದೇಶಪಾಂಡೆಗೆ
ಾಗಿದ್ದ ಕಾಂಗ್ರೆಸ್ ಹೈಕಮಾಂಡ್ ಈಗ ಮತ್ತೆ ಆತನಿಗೆ
ಯ ಅವಕಾಶ ಕೊಡಲಾರದು. ಈಗ ಚೆಕ್ ಮತ್ತು
ಸೆನ್ಸ್ ಮಾಡಲು ಹೈಕಮಾಂಡ್ ಮ್ಯಾಗಿ ಪರ
ಬೇಕಾಗಿದೆ. ಅಂದರೆ ನಿವೇದಿತ್‌ಗೆ ಎಮ್ಮೆಲ್ಸಿ ಅವಕಾಶ
ಸಲು ದೇಶಪಾಂಡೆ 'ಆಟ' ಆಡಿದರೆ ತಿರುಗುಬಾಣ
ವುದು ಖಂಡಿತ. ಇದರರ್ಥ ಇಷ್ಟೇ. ದೇಶಪಾಂಡಗೆ
ಮಾಡಿದರೂ ಭೀಮಣ್ಣನ ಎಮ್ಮೆಲ್ಸಿ ಮಾಡಲು
ು. ಉತ್ತರ ಕನ್ನಡದಲ್ಲಿ ನಿರ್ಣಾಯಕರಾದ ದೀವರು
ಡಿಗ) ಮುನಿಸಿಕೊಂಡು ತನ್ನ ಮಗನಿಗೆ
ೂಡಬಾರದೆಂಬ ಲೆಕ್ಕಾಚಾರದಿಂದ ಭೀಮಣ್ಣನನ್ನು
ಪಾಂಡೆ ಎಮ್ಮೆಲ್ಸಿಗಿರಿ ಆಸೆ ತೋರಿ ಒಲಿಸಿಕೊಂಡಿದ್ದರು.
ಆ ಭೀಮಣ್ಣನಿಂದ ದೇಶಪಾಂಡೆಗೆ ನಿರೀಕ್ಷಿಸಿದಷ್ಟು
ರ ವೋಟು ಬಂದಿಲ್ಲ. ದೇಶಪಾಂಡೆಯ ಮೇಲ್ದರ್ಜೆಯ
ಷ್ಟಿನ ರಾಜಕಾರಣ-ದುರಹಂಕಾರದಿಂದ ಕೆರಳಿರುವ
ರಲ್ಲಿ ಮುಕ್ಕಾಲು ಪಾಲು ಮತದಾರರು ಬಿಜೆಪಿಗೆ
ಹಾಕಿದ್ದಾರೆ.

ಹೀಗಾಗಿ ದೇಶಪಾಂಡೆಗೂ ಭೀಮಣ್ಣನ ಪರ ಲಾಬಿ
ಯುವ ಮನಸ್ಸಿಲ್ಲವಾಗಿದೆ! ಇದಕ್ಕೆ ಸಮಾನಾಂತರವಾಗಿ
ಯಲ್ಲಿ ನಿವೇದಿತ್‌ಗೆ ಟಾಂಗ್ ಕೊಡುವ ತಾಕತ್ತು
ವಾಗಿದೆ. ಈ ಎಲ್ಲ ಸಮೀಕರಣ-ಲೆಕ್ಕಾಚಾರ ಮ್ಯಾಗಿ
ನ ಅದೃಷ್ಟ ಖುಲಾಯಿಸುವಂತೆ ಮಾಡಿದೆ. ನಿವೇದಿತ್
ಮ್ಮೆಲ್ಸಿಯಾಗುವ ಮುಹೂರ್ತ ಕೂಡಿಬಂದಿದೆ. ಆದರೆ
ಪಾಂಡೆಯ ಮಗ ಎಂಪಿಯಾಗುವ ಛಾನ್ಸ್ ಆಮ್ಮ
ವಾಗೇನೂ ಇಲ್ಲ. ಗೆದ್ದರಂತೂ ಆಯ್ತು. ಸೋತರೆ
ಿ ಟಿಕೆಟ್ ಜೆದ್ದಾಜೆದ್ದಿ ಮ್ಯಾಗಿ ಫ್ಯಾಮಿಲಿಗೆ ಒಲಿತು;
ಪಾಂಡೆ ಕುಟುಂಬಕ್ಕೆ ಕೇಡು ಮಾಡಿತೆಂದೇ ಅರ್ಥ!
ಪಾಂಡೆಯ ಮಗ ಗೆಲ್ಲಲಿ-ಸೋಲಲಿ ಎಡಬಿಡಂಗಿ
ಮಣ್ಣಿಗೆ ಎಮ್ಮೆಲ್ಸಿಯಾಗುವ ಅದೃಷ್ಟವಂತೂ ಇಲ್ಲ.

●ನಹುಷ

ಉತ್ತಮ ಪೂಜಾರಿಯವರು ತುರ್ತು ಪರಿಸ್ಥಿತಿಯ
ಲಂಕ ಪ್ರಜೆಗಳ ಸಂವಿಧಾನದತ್ತ ಸ್ವಾತಂತ್ರ್ಯಕ್ಕೆ ಬೇಡಿ
ದ್ದ ಇಂದಿರಾಗಾಂಧಿಯವರನ್ನು ಹಿಗ್ಗಾಮುಗ್ಗಾ ಬೈದು
ಗ್ರೆಸ್ ಮುಖಂಡರನ್ನು ತನ್ನ ಮನೆಬಾಗಿಲಿನಿಂದ
ಿದ್ದರು. ಆ ಬಳಿಕ ಬಿಲ್ಲವ ಸಮುದಾಯದ ಇನ್ನೋರ್ವ
ದ್ಧ ವಕೀಲ ಎಲ್ಯಣ್ಣ ಪೂಜಾರಿಯವರನ್ನು ಕಾಂಗ್ರೆಸ್
ಖಂಡರು ಸಂಪರ್ಕಿಸಿದ್ದರು. ಅವರೂ ಸ್ಪಷ್ಟವಾಗಿ
ಕರಿಸಿದ್ದ ಕಾರಣ ಮೂರನೆಯದಾಗಿ ಜನಾರ್ದನ
ಜಾರಿಗೆ ಟಿಕೆಟ್ ನೀಡಿದರು.

ನಮ್ಮ ವ್ಯವಸ್ಥೆಯ ಬುಡದಲ್ಲಿ ಆಳವಾಗಿ ಬೇರಿಳಿಸಿಕೊಂಡ
ರೀಕರಣದ ಬಗ್ಗೆ ಮಾತನಾಡುವಾಗೆಲ್ಲಾ ಗರಂ ಆಗುತ್ತಿದ್ದ
ಜಾರಿಯವರು "ಇಲ್ಲಿನ ಸಂವಿಧಾನವನ್ನು ಒಪ್ಪದ
ುವಾದಿಗಳನ್ನು ದೇಶದಿಂದ ಗಡೀಪಾರು ಮಾಡಬೇಕು"
ನ್ನುತ್ತಿದ್ದರು. ಹ್ರಸ್ವ ಅವಧಿಗೆ ಅಧಿಕಾರದಲ್ಲಿದ್ದ
ುವಾದಿಗಳು ಪೂರ್ಣ ಮಟ್ಟದಲ್ಲಿ ಅಧಿಕಾರಕ್ಕೆ ಬಂದರೆ
ಮ್ಮ ದೇಶದ ವಿಶಿಷ್ಟತೆಯಾದ ವಿವಿಧತೆಯಲ್ಲಿ ಏಕತೆಯನ್ನು
ಛಾಗಿಸುತ್ತಾರೆ ಎಂದು ಆತಂಕಿತರಾಗುತ್ತಿದ್ದರು.

ಟಾಡಾ, ಪೊಟಾ, ಕೋಕಾ ಮುಂತಾದ ಮನುಷ್ಯ
ೋಧಿ ಕಾಯಿದೆಗಳ ಕುರಿತಂತೆ ಆಳವಾಗಿ ಅಧ್ಯಯನ
ಡಿದ್ದ ಪೂಜಾರಿಯವರು "ಈ ದೇಶದ ಸಂಸತ್ತಿಗೂ
ಲಿಗೂ ಯಾವುದೇ ವ್ಯತ್ಯಾಸವಿಲ್ಲ. ಸಂಸತ್ತಿನಲ್ಲಿ
ಸಲ್‌ಗಳೇ ತುಂಬಿರುವುದರಿಂದ ಇಂತಹ ಕ್ರಿಮಿನಲ್
ಯಿದೆಗಳು ಜಾರಿಗೆ ಬರುತ್ತಿವೆ. ಕಂಬಿಯೊಳಗಿರ
ಾದವರು ಕಾಯಿದೆ ರೂಪಿಸುವವರಾಗುತ್ತಿರುವುದೇ
ದೇಶದ ದುರಂತ" ಎಂದು ಹೇಳುತ್ತಿದ್ದರು. ಅಲ್ಪಸಂಖ್ಯಾತ
ು, ಹಿಂದುಳಿದವರನ್ನು, ಕ್ರಿಮಿನಲ್‌ಗಳಾಗಿಸುವ
ಯಿದೆಗಳು ನಮ್ಮ ಸಂಸತ್ತಿನಲ್ಲಿ ಸಾಂಗವಾಗಿ
ರಿಯಾಗುತ್ತವೆ. ಕೋಮುವಾದವನ್ನು ಹತ್ತಿಕ್ಕಲು ಬೇಕಾದ
ೀಮು ಹಿಂಸಾಚಾರ ತಡೆ ಕಾಯಿದೆಗೆ ಈ ನೆಲದಲ್ಲಿ
ರು ವಿಘ್ನಗಳು ಎಂದು ಪೂಜಾರಿ ವಿಷಾದಿಸುತ್ತಿದ್ದರು.

ತ್ಮ ಬದುಕಿನುದ್ದಕ್ಕೂ ವ್ಯವಸ್ಥೆಯ ಕ್ರೌರ್ಯದ ವಿರುದ್ಧ
ೀರಾಡಿದ ಪೂಜಾರಿ ಅದಕ್ಕಾಗಿ ಬಹುದೊಡ್ಡ ಬೆಲೆಯನ್ನೇ
ದ್ದಾರೆ. ತನ್ನ ಮಗನಂತಿದ್ದ ಶಿಷ್ಯ ನೌಷಾದ್ ಖಾಶಿಂಜಿ
ಯಾಗಿದ್ದರ ಬಗ್ಗೆ ಪೂಜಾರಿಯವರಿಗೆ ಅಪಾರ ಸೋವಿತ್ತು
ಪುತ್ತೂರು ಕೇಸನ್ನು ದಡಮುಟ್ಟಿಸಲಾಗದ ನೋವಿನೊಂದಿಗೆ
ದ್ದಮುಚ್ಚಿದ ಪೂಜಾರಿಯವರ ಆಗಲುವಿಕೆಗೆ
ಗಳೂರಿನ ಪ್ರಗತಿಪರ ವಲಯ ರೋದಿಸುತ್ತಿದೆ. ವಕೀಲ
ಯ ಘನತೆಯನ್ನು ಹೆಚ್ಚಿಸಿದ ಮಾನವತಾವಾದಿ
ಾರಿಯವರಿಗೆ ವಿದಾಯದ ಸಲಾಂ...

●ಇಷ್ಮತ್ ಫಜೀರ್

ಕನ್ನಡಿಗರಿಗೆ ಕನ್ನಡವ ಕಡ್ಡಾಯ ಮಾಡಿದ್ರಾಯ್ತಿತ್ತು!

ಥೂತ್ತೇರಿ

► ಯಾಹೂ

ಇದ್ದಕ್ಕಿದ್ದಂತೆ ಕುವೆಂಪು ಯೂನಿವರ್ಸಿಟಿಯ ವಿದ್ವಾಂಸರಿಗೆಲ್ಲಾ ಅಪರೂಪದ ಮೆಸೇಜ್ ಬರತೊಡಗಿವೆಯಂತಲ್ಲಾ, ಆ ಮೆಸೇಜಿನಲ್ಲಿನ ಮಾತುಗಳು ಬ್ರಾಹ್ಮಣನ ಶಾಪದಂತಿವೆಯಂತಲ್ಲಾ "ನೀವು ಶುದ್ಧ ಪಶುಗಳು. ನಿಮ್ಮ ತಲೆಯಲ್ಲಿ ಸಗಣಿ ತುಂಬಿದೆ. ಹೋಗಿ ದನ ಕಾಯಿರಿ. ನಿಮಗೇಕೆ ಸಂಸ್ಕೃತಿಗಳ ಅಧ್ಯಯನ. ಓಂ ನಮ ಶಿವಾಯ ಎಂಬುದೂ ಒಂದು ಆಧ್ಯಾತ್ಮವೆ. ನಮ್ಮ ಋಷಿಮುನಿಗಳ ಸಂಶೋಧನೆ ನಿಮಗೇನು ಗೊತ್ತು ಥೂ ದಡ್ಡ ಮುಂಡೇವ" ಎಂಬ ಸುಸಂಸ್ಕೃತ ಬೈಗುಳವನ್ನು ನೋದಿಕೊಂಡ ವಿದ್ವಾಂಸರು, ಇದು ಯಾರ ಮೆಸ್ಸೇಜಿರಬಹುದೆಂದು ಶೋಧಿಸಿದರಂತಲ್ಲಾ ಆಗ ಸದರಿ ಮೆಸ್ಸೇಜು ಬೆಲ್ಲಿಯಂಣ ಫೌಂಟ್ ವಿಶ್ವವಿದ್ಯಾನಿಲಯದಲ್ಲಿ ತತ್ವಶಾಸ್ತ್ರದ ಪ್ರಾಧ್ಯಾಪಕನಾಗಿ ಕೆಲಸ ಮಾಡುತ್ತಿರುವ ತಲೆ ಕೆಟ್ಟಂತಹ ವಿದ್ವಾಂಸನಿಂದ ಬಂದಿದೆ ಎಂದು ಗೊತ್ತಾಯಿತಂತಲ್ಲಾ. ಕುವೆಂಪು ವಿ.ವಿ.ಯಲ್ಲಿನ ಬೆಲ್ಲಿಯಂ ಬಾಲಗಳ ಪ್ರಕಾರ "ಬಾಲುಗೆ- ಇಂತಹ ಮೆಸೇಜ್ ಕಳುಹಿಸಲು ಸಮಯವೇ ಇಲ್ಲ ಇದೇನಿದ್ದರೂ ಅವನ ಅಭಿಮಾನಿಗಳಾದ ವಿಕೃತ ಭಟ್ಟನ ಸಂತತಿಯವರು ಅಥವಾ ಪುರೋಹಿತಶಾಹಿ ವ್ಯವಸ್ಥೆಯ ಪುನರುತ್ಥಾನದ ಪಿಂಡಗಳು ಕಳುಹಿಸಿರುವ ಮೆಸ್ಸೇಜಿರಬೇಕು. ಅವರ ಸಿಟ್ಟಿಗೂ ಕಾರಣವಿದೆ. ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿದ್ದ ಸಂಸ್ಕೃತಿಗಳ ತುಲನಾತ್ಮಕ ಅಧ್ಯಯನ ಕೇಂದ್ರವನ್ನು ಬದಲಾದ ಸರಕಾರ ಎತ್ತಂಗಡಿ ಮಾಡಿದರೆ ಸಿಟ್ಟು ಬರುವುದಿಲ್ಲವೆ. ಆದಕಾರಣ ಬಾಲಗಂಗಾಧರನ ಅಭಿಮಾನಿಗಳಾದ ಪುಳುಜುಟ್ಟನ ಲಾಠಿ ವೀರರು ಈ ಮೆಸ್ಸೇಜಿನ ಹೊಣೆಗಾರರು" ಎಂದವಂತಲ್ಲಾ ಥೂತ್ತೇರಿ!

* * *

ಬೆಲ್ಲಿಯಂನಿಂದ ಬಾಲಗಂಗಾಧರ ಬಂದಾಗ ಹೆಗ್ಗೋಡಿನ ಹೆಬ್ಬಾಗಿಲಲ್ಲಿ ನಿಂತ ಸುಬ್ಬಣ್ಣನ ಪರಿವಾರ ಆತನನ್ನು ಅದ್ಧೂರಿಯಾಗಿ ಸ್ವಾಗತಿಸಿತಂತಲ್ಲಾ. ನಾಡಿನ ತುಂಬೆಲ್ಲಾ ಹರಡಿರುವ ಹೆಗ್ಗೋಡಿನ ಪಕ್ಕ ವಾದ್ಯಗಳನ್ನೆಲ್ಲಾ ಕರೆಸಿಕೊಂಡು, ಸಾಲದ್ದಕ್ಕೆ, ಅನಂತಮೂರ್ತಿ, ಕಿ.ರಂ. ಮುಂತಾದ ವಿದ್ವಾಂಸರನ್ನೆಲ್ಲಾ ಅಖಾಡಕ್ಕೆ ಬಟ್ಟಿತಂತಲ್ಲಾ. ಕಳೆದ ನಲವತ್ತು ವರ್ಷಗಳಿಂದ ಬಾಲು ಓದಿಕೊಂಡು ಬಂದ ಭಾರತೀಯ ಸಂಸ್ಕೃತಿಯ ಪಟ್ಟುಗಳನ್ನು ನೋಡಿದ ಅನಂತಮೂರ್ತಿಯಂತಹ ಮೂರ್ತಿಯೇ "ಇದು ವಿಪರೀತ ಓದಿನ ಪರಿಣಾಮ. ಈತನ ಚರ್ಚೆಯ ವ್ಯಾಪ್ತಿಯಲ್ಲಿ ನಮ್ಮ ಭೈರಪ್ಪನಂತೆ ಕಾವ್ಯದ ವಾಸನೆಯೇ ಇಲ್ಲ" ಎಂದು ಸುಮ್ಮನಾದರಂತಲ್ಲಾ, ಆಗ ಈ ಚಿಪ್ಪಿ ಬಾಲು, "ನಾನು ಮತ್ತು ನನ್ನ ವಾದವನ್ನು ಸಮರ್ಥವಾಗಿ ಎದುರಿಸುವವರು ಇಡೀ ಭಾರತದಲ್ಲಷ್ಟೇ ಅಲ್ಲ ಯೂರೋಪು ಮತ್ತು ಅಮೆರಿಕದಲ್ಲೂ ಇಲ್ಲ" ಎಂದು ಕೊಚ್ಚಿಕೊಂಡನಂತಲ್ಲಾ

ಎಂ.ಎಂ. ಕಲ್ಬುರ್ಗಿ, ರಾಜೇಂದ್ರ ಚೆನ್ನಿ, ದೇವನೂರು ಮಹಾದೇವ ಇತ್ಯಾದಿ ವಿದ್ವಾಂಸರು ತಮ್ಮ ವಿದ್ವತ್ ದಂಡದಿಂದಲೇ ಬಾಲು ಮರ್ಮಸ್ಥಾನಕ್ಕೆ ಏಟು ಕೊಟ್ಟ ಕೂಡಲೇ ಕುವೆಂಪು ವಿ.ವಿ. ಆವರಣದಿಂದ ಓಡಿಹೋದ ಈ ವಿದ್ವಾಂಸ "ಸೂರ್ಯನ ಸುತ್ತ ಭೂಮಿ ಸುತ್ತುವುದು ಎಷ್ಟು ಸತ್ಯವೊ ನನ್ನ ವಾದಗಳು ಅಷ್ಟೇ ಸತ್ಯ. ಆದ್ದರಿಂದ ಯೂನಿವರ್ಸಿಟಿಯ ದಡ್ಡ ವಿದ್ವಾಂಸರ ಜೊತೆ ವಾದ ಮಾಡುವುದಕ್ಕಿಂತ ನಮ್ಮವರ ಖಾಸಗಿ ಸಂಸ್ಥೆಗಳೊಂದಿಗೆ ಸಂವಾದ ಮಾಡುತ್ತೇನೆ. ನನಗೆ ನಮ್ಮ ಸಂಸ್ಕೃತಿ ರಕ್ಷಕರಾರೆಂದು ಚೆನ್ನಾಗಿ ಗೊತ್ತು" ಎಂದು ಊಳಿಡುತ್ತಿದ್ದಾನಂತಲ್ಲಾ ಥೂತ್ತೇರಿ!!

* * *

ಅಷ್ಟಕ್ಕೂ ಈ ಬೆಲ್ಲಿಯಂ ಬಾಲಗಂಗಾಧರನ ಸವಾಜಶಾಸ್ತ್ರದ ಹೂರಣವೇನೆಂದು ಸಿಂಪಲ್ಲಾಗಿ ಹೇಳುವುದಾದರೆ "ಈ ಜಗತ್ತಿನಲ್ಲೇ ಸರ್ವಶ್ರೇಷ್ಠ ಸಂಸ್ಕೃತಿ ನಮ್ಮದು. ಆಂತಹ ಸಂಸ್ಕೃತಿಯನ್ನ ಮುಸ್ಲಿಮರು ಮತ್ತು ಬ್ರಿಟಿಷರು ಒಂದು ಆಳೀ ಆಳೀ ಒಂದು ಸಾವಿರ ವರ್ಷದ ಹಿಂದೆಯೇ ನಮ್ಮ ಸಂಸ್ಕೃತಿ ಸರಪಳಿಯನ್ನ ತುಂಡರಿಸಿದ್ದಾರೆ." ಆದರೇನು ಈ ಬಾಲನ ಸಂಸ್ಕೃತಿಯ ಪಿಂಡಗಳು 2014ನೇ ಏಪ್ರಿಲ್ ತಿಂಗಳಲ್ಲೂ ಉಡುಪಿಯಲ್ಲಿ ಊಟಕ್ಕೆ ಕುಳಿತ ಹೆಣ್ಣು ಮಗಳನ್ನ ಅಮಾನುಷವಾಗಿ ಪಂಕ್ತಿಯಿಂದ ಎಬ್ಬಿಸಿ ಕಳುಹಿಸಿದ್ದಾರೆ ಎಂದರೆ ಈತನ ಸಾವಿರ ವರ್ಷದ ಹಿಂದಿನ ಸಂಸ್ಕೃತಿ ಹೇಗಿತ್ತು ಎಂಬುದನ್ನು ಆತನೇ ಹೇಳಬೇಕಿದೆ. ಹೇಳುವುದೇನು, ಇವತ್ತು ನೋಡಿದರೂ ಕಾಣುತ್ತಿದೆ. ಗರ್ಭಗುಡಿಯೊಳಗೆ ಬಾಲಗಂಗಾಧರನ ಟೀಮು, ಊರ ಹೊರಗೆ ದೇವನೂರು ಗುಂಪು.

ಇನ್ನೊಂದು ವಿಶೇಷವೆಂದರೆ ಕುವೆಂಪು ವಿ.ವಿ.ಯಿಂದ ಈತನ ಸಂಶೋಧನಾ ಗುಡಿಯನ್ನ ಮುಚ್ಚುಮ್ಮು ದೇವನೂರು ಗುಂಪಂತೆ. ಈತನಿಗೆ ಬೆಲ್ಲಿಯಂನಲ್ಲಿ ಬದುಕಿದ್ದರೂ ಅಗ್ರಹಾರದ ಬುದ್ಧಿ ಹೋಗಿಲ್ಲವೆಂಬುದಕ್ಕೆ ಈ ಮಾತೇ ಸಾಕ್ಷಿ. ಇಷ್ಟಾದರೂ ಈತ ಸೋಲೊಪ್ಪಿಕೊಂಡಿಲ್ಲ, ತಮ್ಮವರದೇ ನೆಟ್‌ವರ್ಕ್ ಮಾಡಿಕೊಂಡು, ಪಾಮ ಪಂಥೀಯರು ಮತ್ತು ಸೆಕ್ಯುಲರ್ ವಿದ್ವಾಂಸರನ್ನು ವಿಚಾರಿಸಿಕೊಳ್ಳುವುದಾಗಿ ಸಪಾಲೆಸಗಿದ್ದಾನೆ. ಕುವೆಂಪು ಹೇಳಿದ ಎಚ್ಚರಿಕೆ ಮರೆತ ಸೋಮಾರಿ ವಿದ್ವಾಂಸರು ಪುರೋಹಿತಶಾಹಿ ವ್ಯಾಗ್ದನ ಬುರುಡೆಗೆ ಗುರಿ ಇಟ್ಟು ಹೊಡೆಯುವ ಬದಲು ಕೈಗೋ ಕಾಲಿಗೂ ಏಟು ಮಾಡುತ್ತಿವೆ. ಗಾಯ ಮಾಯಿಸಿಕೊಂಡ ಪುರೋಹಿತ ಹುಲಿ ಹೊಸ



ಅವಿಷ್ಕಾರಗಳನ್ನು ಹಿಡಿದು ಬರುತ್ತಲೇ ಇದೆ. ಹಾಗೆಯೇ ಈ ಬಾಲಗಂಗಾಧರ ಮರಳಿ ಬರುತ್ತಾನಂತಲ್ಲಾ ಥೂತ್ತೇರಿ!!

* * *

ಹೀಗೆ ಬೆಲ್ಲಿಯಂನಲ್ಲಿ ಕುಳಿತು ಭಾರತದ ಪುರೋಹಿತಶಾಹಿ ಸಂಸ್ಕೃತಿ ಉಳಿವಿಗಾಗಿ ಬಾಲು ಹೋರಾಡುತ್ತಿರುವಾಗಲೇ ನಮ್ಮ ಭಾಷೆಯನ್ನು ಉಳಿಸಿಕೊಳ್ಳಲೋಸ್ಕರ ನಾವು ಅನಿವಾರ್ಯವಾಗಿ ಹೋರಾಡುವಂತಹ ಸಂದರ್ಭ ಬಂದೊದಗಿದೆ. ಈ ಸಮಯದಲ್ಲಿ ಯಾರಿಗಾದರೂ ಫೋನ್ ಮಾಡಿ ಮಾತನಾಡಿಸಿದರೆ ಹೇಗೆ ಅನ್ನಿಸಿದ ಕೂಡಲೇ ಸಾಲು ಸಾಲು ಹೆಸರು ಜ್ಞಾಪಕಕ್ಕೆ ಬಂದವಲ್ಲಾ! ಚಂಪಾ ಮಾತನಾಡಿಸಿದರೆ ಹೇಗೆ? ಬೇಡ ಗೋಕಾಕ್ ಚಳವಳಿ ಬಗ್ಗೆ ಕೊರೆಯುತ್ತಾರೆ. ಬರಗೂರು ಕನ್ನಡ ಕರುಳಿನ ಭಾಷೆ ಎಂಬ ವಾಕ್ಯ ಜೋಡಿಸಿ ಗೊಂದಲ ಹುಟ್ಟಿಸುತ್ತಾರೆ. ಚ.ಮೂ. ತೀರಿಕೊಂಡಾಗಿದೆ. ನಾರಾಯಣ ಗೌಡ ಇರಿಟೇಟ್ ಮಾಡುತ್ತಾನೆ. ಮುಖ್ಯಮಂತ್ರಿ ಚಂದ್ರು ಗಾನ್ ಕೇಸ್. ಇವರ್‍ಯಾರು ಬೇಡ, ಇಂಗ್ಲಿಷ್ ಪದ ಬಳಕೆಯ ವಾಟ್ಸೆ ಮಾತನಾಡಿಸಿದರೆ ಹೇಗೆ ಅನ್ನಿಸಿ ಫೋನ್ ಮಾಡಲಾಗಿ ರಿಂಗಾಯ್ತು

ರಿಂಗ್‌ಟೋನ್: "ಸಿರಿವಂತನಾದರೂ ಕನ್ನಡ ನಾಡಲ್ಲೆ ಮೆರೆವೆ, ಭಿಕ್ಷುಕನಾದರು ಮಂಡ್ಯದ ಬೀದಿಲಿ ಅಲೆವೆ..."

"ಹಲೋ ಯಾರ್ ಸಾರ್ ತಾವು?"

"ನಾನು ಯಾಹು."

"ಥ್ಯಾಂಕ್ಸ್, ಕರೆನ್ಸಿ ಬಂದಿದೆ."

"ರಿಂಗ್ ಟೋನ್ ಬದ್ಲಾಗಿದೆಯಲ್ಲಾ?"

"ಅನಿವಾರ್ಯ. ಮೊನ್ನೆಯಿಂದ ಸದನ್ತಂತ ನಮ್ಮ ಕನ್ನಡ ಲಾಂಗ್‌ವೇಜ್ ಮ್ಯಾಲೆ ಒಂಥರ ಮಮಕಾರ ಅಂತಾರಲ್ಲ, ಅಂದ್ರೆ ತಾಯಿ ಸತ್ತ ತಬ್ಬಲಿ ಮೇಲೆ ಪ್ರೀತಿ ಬತ್ತದಲ್ಲ ಅಂಗಾಗ್ದೆ."

"ತೀರ್ಪಿನ ವಿಷಯ ಗೊತ್ತಾಯ್ತಾ?"

"ಗೊತ್ತಾಯ್ತು, ಜಡ್ಜ್ ಯಾರು ಅಂತ ತಿಳಕೊಬೇಕಾಗಿತ್ತು."

"ಯಾಕೆ?"

"ಯಾಕೆ ಅಂದ್ರೆ ಇತ್ತೀಚೆಗೆ ಸುಪ್ರೀಂಕೋರ್ಟ್ ತೀರ್ಪು ಸ್ವಲ್ಪ ದವ್ಡುಪುಲ್ಲಾಗಿ ಬತ್ತಾ ಅವೆ."

"ಈ ಥರ ಅಂದ್ರೆ ಕಂಟೆಪ್ಟ್ ಆಫ್ ಕೋರ್ಟಾಗುತ್ತೆ."

"ಆಗ್ಲಿ ನಾನು ಡ್ರಿಂಕ್ಸ್ ಮಾಡಿ ಮಾತಾಡ್ತಯಿದ್ದಿನಿ. ರಾಜೀವ್ ಗಾಂಧಿ ಕೊಂದಾಕಿದೋರ ಬಗ್ಗೆ ತೀರ್ಪು ಬಂದಾಗ್ಲೆ ನನ್ಗೆ ದವ್ಡುಟಾಗಿತ್ತು, ಆದೀಗ ಕ್ಲಿಯರಾಯ್ತು."

"ಜಡ್ಜ್ ಸಂವಿಧಾನ ಕೋಟ್ ಮಾಡಿದಾರೆ."

"ನಮ್ಮ ಆರೆಸ್ಸೆಸ್ ಫ್ರೆಂಡ್ಸ್ ಸಂವಿಧಾನ ಸರಿಯಿಲ್ಲ, ನಮ್ಮ ರಾಮಾ ಜೋಯಿಸ್ಸನ ಲೀಡರ್‌ಷಿಪ್ಪಲ್ಲಿ ಹೊಸ ಸಂವಿಧಾನ ಬರುಸ್ತಿವಿ ಅಂತಿದ್ರು. ಅಂಥೋರ ಜೊತೆ ನಾವು ಕೈ ಜೋಡಿಸಂಗಾಯ್ತಲ್ಲೀ. ರಿಯಲಿ ಇಟೀಸ್ ಸೇಂಟು ಅವರ್ ಸ್ಟೇಟ್."

"ನಮ್ಮ ಭಾಷೆ ಉಳಿಸಿಗಳಕ್ಕೆ ಏನು ಮಾಡಬಹುದು ಪಾಟಿಸ್ಸೆ?"

"ಪೆರಿ ಸಿಂಪಲ್ಲು ಸಾರ್. ಕನ್ನಡಿಗರು ಪಟ್ಟು ಬಿಡದೆ ಕನ್ನಡದಲ್ಲಿ ಮಾತಾಡಿದರಾಯ್ತು, ಅಮ್ಮಾಲೆ ನಮ್ಮ ಮಕ್ಕಳಿಗೆ ಚೆನ್ನಾಗಿ ಕನ್ನಡ ಕಲಿಸಿದರಾಯ್ತು, ನನ್ನ ಕೇಳಿದ್ರೆ ಕನ್ನಡಿಗರಿಗೆ ಕನ್ನಡ ಕಡ್ಡಾಯ ಅಂತ ಮಾಡಿದ್ರೆ ಈ ಪ್ರಾಬ್ಲಮ್ಮೇ ಇರತಿರಲಿಲ್ಲ."

"ಅಂಗಂತಿಯಾ?"

"ಹೌದು ಕಂದ್ರಿ. ಕನ್ನಡಕ್ಕೆ ಕುತ್ತು ಬಂದಿರದು ಕನ್ನಡಿಗರಿಂದ್ಲೆ. ಇದೇ ನಮ್ಮ ಶಿವರಾಮೇಗೌಡ ಬಡಿಎ ಅಧ್ಯಕ್ಷರಾಗಿದ್ದಾಗ ಒಳ್ಳೆ ಜಾಗದಲ್ಲಿ ಸೈಟ್ ಹೊಡಕಂಡು, ಸ್ಕೂಲ್ ಕ್ಟುಸಿ, ಇಂಟರ್‌ನ್ಯಾಷನಲ್ ಸಬ್ಜೆಕ್ಟ್ ಅಂತ ನ್ಡಸ್ತಾ ಅವ್ರುನೆ. ಇವನು ನಮ್ಮವ್ನೆ ಆಲ್ಲವೇ. ಇನ್ನ ಡಿ.ಕೆ. ಶಿವಕುಮಾರನ ಸ್ಕೂಲೂ ಅಂಗೆ ಅವಂತೆ. ಇದನ್ನಲ್ಲ ನೋಡಿದ್ರೆ ನಮ್ಮವರಿಂದ್ಲೆ ನಮ್ಮ ಕನ್ನಡ ಹೋಯ್ತಾ ಆದೆ."

"ಅಂಗಾದ್ರೆ ಬ್ಯಾರೆ ಭಾಷೆಯೋರಿಂದ ಕನ್ನಡಕ್ಕೆ ತೊಂದ್ರೆ ಆಗಿಲ್ವೆ?"

"ಬ್ಯಾರೆ ಭಾಷೆ ಜನ ಎಷ್ಟವ್ರುರೆ ಅಂತ ತಿಳಕಂಡಿದ್ದೀರಿ? ಇಡೀ ಕರ್ನಾಟಕದ ತುಂಬ ಇರೊ ಕಲ್ಲು ವಡ್ಡರು, ಮಣ್ಣು ವಡ್ಡರು, ಬಟ್ಟೆ ವಲಿಯೋ ದರ್ಜಿಗಳು, ಲಂಬಾಣಿಗರು, ಶೆಟ್ರುಗಳು, ಇವ್ರುದ್ಯಾರು ಕನ್ನಡಿಗರಲ್ಲ ಅದ್ರು ನಮ್ಮ ಜೊತೇಲಿ ಕನ್ನಡ ಮಾತ್ಕಾಡಿಕಂಡು ಕತೆ ಕಾದಂಬರಿ ಬರಕಂಡು ಫ್ರೈಜ್‌ವಡಿತಾ ಅವ್ರುರೆ. ಮನೇಲಿ ತೆಲುಗು ಮಾತಾಡೊ ಶೆಟ್ರು, ಮರಾಠಿಗಳು ಎಷ್ಟು ಚೆನ್ನಾಗಿ ಬರಿತರೆ ಗೊತ್ತಾ ಅವ್ರುರನ್ನ ನೋಡ್ಯಾದ್ರು ಈ ನಾರಾಯಣಗೌಡನ ಟೀಮು ಕನ್ನಡ ಕಲಿಬೇಕು."

"ಬೆಂಗಳೂರಲ್ಲಿ ಅವ್ರುರಿಂದ್ಲೆ ಕನ್ನಡ ಉಳದದಂತೆ."

"ಎಲ್ಲೂಳದವಂತೆ. ಯಾವುದೇ ಹೋಟ್ಗೋದ್ರು ಮೆನುಕಾರ್ಡು ಇಂಗ್ಲಿಷ್‌ನಲ್ಲವೆ. ನಮ್ಮ ಮೈಲಿ ಕಲ್ಲು ಇಂಗ್ಲಿಷನಲ್ಲವೆ. ಯಾವುದೇ ಬೋರ್ಡು ನೋಡಿದ್ರೂ ಆನೆ ಗಾತ್ರದಕ್ಷರ ಇಂಗ್ಲಿಸಲಿದ್ರೆ, ಇರುವೆ ಗಾತ್ರದಕ್ಷರ ಕನ್ನಡದಲ್ಲಿರತವೆ. ನಮ್ಮ ಕಣ್ಣಿಂದ ಅಕ್ಷರ ಮರಿಯಾದ್ರೆ ಹೋಗೇಬುದ್ತವೆ. ನ್ಯನಪಲ್ಲಿ ಇರದಿಲ್ಲ, ಅಂತಾದಲ್ಲಿ ಇಂತಹದೊಂದು ತೀರ್ಪು ಬಂದದೆ. ಈ ತೀರ್ಪು ಬಂದ ಕೂಡ್ಲೆ ಇಂಡಿಯಾದ ಭಾಷಾವಾರು ಪ್ರಾಂತ್ಯನೂ ರದ್ದಾಗ್ಬದೆ. ಅಂಗಾಗಿ ಸಂವಿಧಾನ ಎತ್ತಿಡಿಯಕ್ಕೊಗಿ ಸಂವಿಧಾನಕ್ಕೆ ಅಪಚಾರ ಮಾಡ್ಬವ್ನನೆ ಜಡ್

ಪ್ರತಾಪಸಿಂಹ ಎಂಬ ಜಾತಿವಾದಿ ಗೋಸುಂಬೆ

ಕೆಳದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಹೀನಾಯವಾಗಿ ಸೋತಿದ್ದರ ಬಗ್ಗೆ ವಿಶ್ಲೇಷಣೆ ಮಾಡುತ್ತಾ ಕೆಲ ತಿಂಗಳುಗಳ ಹಿಂದೆ ಖ್ಯಾತ ಅಂಕಣಕಾರರೊಬ್ಬರು ಬರೆದಿದ್ದ ಕೆಲವು ಸಾಲುಗಳು ಹೀಗಿವೆ.

"2013ರ ಮೇ 8ರಂದು ಹೊರಬಿದ್ದ ಫಲಿತಾಂಶ ಹೇಗಿತ್ತು? ಅಧಿಕಾರದಲ್ಲಿದ್ದ ಪಕ್ಷಗಳು ಹೀನಾಯ ಸೋಲು ಕಂಡಿದ್ದನ್ನು ನೋಡಿದ್ದೇವೆ. ಆದರೆ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟ ಉದಾಹರಣೆಗಳು ಎಷ್ಟಿವೆ ಹೇಳಿ? ಇಬ್ಬರು ಮುಖ್ಯಮಂತ್ರಿಗಳು, ಅಷ್ಟೇ ಸಂಖ್ಯೆಯ ಉಪಮುಖ್ಯಮಂತ್ರಿಗಳು, ರಾಷ್ಟ್ರೀಯ ನಾಯಕರು, ಪಕ್ಷದ ರಾಜ್ಯ ಅಧ್ಯಕ್ಷರು ಅಬ್ಬರದ ಪ್ರಚಾರ ನಡೆಸಿದರೂ 121 ಇದ್ದ ಬಿಜೆಪಿಯ ಸ್ಥಾನಗಳ ಸಂಖ್ಯೆ ಕೇವಲ 40ಕ್ಕೆ ಇಳಿಯುತೆಂದರೆ ಇವರ ಬಗ್ಗೆ ಜನರಿಗೆ ಎಷ್ಟರ ಮಟ್ಟಿನ ವಿಶ್ವಾಸವಿದೆ, ಇವರ ಮಾತುಗಳನ್ನು ಜನ ಎಷ್ಟು ನಂಬುತ್ತಾರೆ, ಇವರೆಂಥ ಸುಭಗರು ಎಂದು ಯೋಚನೆ ಮಾಡಿ."

ವಾಹ್! ಎಂಥಾ ನಿಷ್ಠೂರ ವಿಶ್ಲೇಷಣೆ! ಇರಲಿ. ಇನ್ನೂ ಮುಂದುವರೆದು ಲೋಕಸಭಾ ಚುನಾವಣೆಯ ಭವಿಷ್ಯದ ಬಗ್ಗೆ ಅವರು ಏನು ಬರೆದಿದ್ದರು ಎಂದು ಓದೋಣ.

"ಮಾಜಿ ಮುಖ್ಯಮಂತ್ರಿಗಳಲ್ಲಿ ಒಬ್ಬರಾದ ಜಗದೀಶ್ ಶೆಟ್ಟರ್‌ಗೆ ಮೊನ್ನೆಮೊನ್ನೆ ನಡೆದ ಎಂಎಲ್‌ಸಿ ಚುನಾವಣೆಯಲ್ಲಿ ಸ್ವಂತ ತಮ್ಮನನ್ನೂ ಗೆಲ್ಲಿಸಲಾಗಲಿಲ್ಲ, ಮತ್ತೊಬ್ಬ ಮಾಜಿ ಮುಖ್ಯಮಂತ್ರಿ ಸದಾನಂದ ಗೌಡರಿಗಂತೂ ಮುಖ್ಯಮಂತ್ರಿಯಾಗಿದ್ದಾಗಲೇ ತಾವೇ ತೆರವು ಮಾಡಿದ್ದ ಉಡುಪಿ-ಚಿಕ್ಕಮಗಳೂರು ಸಂಸತ್ ಕ್ಷೇತ್ರವನ್ನೂ ಉಳಿಸಿಕೊಡಲಾಗಲಿಲ್ಲ. ಇನ್ನು ಅನಂತಕುಮಾರ್ ಕೃಪಾಪೋಷಿತ ನಾಟಕ ಮಂಡಳಿಯ ಪ್ರಮುಖ ಪಾತ್ರಧಾರಿಗಳು ಹಾಗೂ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪನವರು ಹುಂಬತನಕ್ಕೆ, ಪರ್ಯಾಯ ಪದವೆಂಬಂತಿದ್ದರೆ, ಆಶೋಕ ಒಂಥರಾ ಕಾಂಪೌಂಡ್ ಮೇಲೆ ಕುಳಿತ ಕಳ್ಳಬೆಕ್ಕಿನಂತೆ, ಯಾವಕಡೆ ನೆಗೆಯುತ್ತಾರೆ ಅನ್ನೋದೇ ಗೊತ್ತಾಗುವುದಿಲ್ಲ. ಇಂಥಾ ನಾಯಕರನ್ನು ಮುಂದಿಟ್ಟು ಕೊಂಡು ಚುನಾವಣೆಗೆ ಹೋದರೆ ಗತಿಯೇನಾದೀತು? ವಿಧಾನಸಭೆಯಲ್ಲಾದ ಗತಿಯೇ ಎದುರಾಗುವುದು ನಿಶ್ಚಿತವಲ್ಲವೆ?"

"ಜಗದೀಶ್ ಶೆಟ್ಟರ್, ಸದಾನಂದ ಗೌಡ, ಕೆ.ಎಸ್. ಈಶ್ವರಪ್ಪ ಆರ್.ಆಶೋಕ್ ಹಾಗೂ ಆನಂತಕುಮಾರರನ್ನಂತೂ ಜನ ಸಾರಾಸಗಟಾಗಿ ತಿರಸ್ಕರಿಸಿದರು. ಅದು ಮೇ ತಿಂಗಳ ವಿಧಾನಸಭಾ ಚುನಾವಣೆಯ ಫಲಿತಾಂಶದಲ್ಲಿ ಮತ್ತೂ ಕಠೋರ ಹಾಗೂ ಹೀನಾಯವಾಗಿ ವ್ಯಕ್ತವಾಯಿತು. 2008ರಲ್ಲಿ ಪಿರಿಯಾಪಟ್ಟಣದಲ್ಲಿ ಗೆಲುವು ಸಾಧಿಸಿದ್ದ ಬಿಜೆಪಿಗೆ 2013ರಲ್ಲಿ ಯಾವ ಸ್ಥಿತಿ ಬಂತು ಅಂದುಕೊಂಡಿರಿ? ಬಿಎಸ್‌ಆರ್ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಐದೂವರೆ ಸಾವಿರ ಮತಗಳನ್ನು ಪಡೆದು ಮೂರನೇ ಸ್ಥಾನ ಗಳಿಸಿದರೆ, ಕೇವಲ ಮೂರೂವರೆ ಸಾವಿರ ಮತ ಪಡೆದ ಬಿಜೆಪಿ ನಾಲ್ಕನೇ ಸ್ಥಾನಕ್ಕೆಳಿಯಿತು! ದೂರದ ಬಳ್ಳಾರಿಯವರಾದ, ಗಣಿ ಧೂಳು ಅಂಟಿಕೊಂಡಿರುವ ಶ್ರೀರಾಮುಲು ಪಕ್ಷಕ್ಕಿಂತಲೂ ಬಿಜೆಪಿ ಕಡೆಯಾಯಿತು. ಇಂಥಾ ನಾಯಕ ಶಿಖಾಮಣಿಗಳನ್ನು ಇಟ್ಟುಕೊಂಡು 2014ರ ಲೋಕಸಭೆ ಚುನಾವಣೆಗೆ ರಾಜ್ಯ ಬಿಜೆಪಿ ಧುಮುಕಿದರೆ ಕಥೆ ಏನಾಗಬಹುದು ಊಹಿಸಿ?! ಕಳೆದ ಚುನಾವಣೆಯ ಮತಗಳನ್ನು ಗಣನೆಗೆ ತೆಗೆದುಕೊಂಡರೆ ಕಾಂಗ್ರೆಸ್ ಏಕಾಂಗಿಯಾಗಿ 24 ಸೀಟುಗಳನ್ನು, ಬಿಜೆಪಿ-ಜೆಡಿಎಸ್ ತಲಾ ಎರಡು ಸೀಟುಗಳನ್ನು ಗಳಿಸಲಿವೆ!"

ಮೇಲಿನ ಬರಹದ ತುಣುಕುಗಳನ್ನು ಓದಿದ ನಂತರ ಇದು ಕಾಂಗ್ರೆಸ್ ಏಜೆಂಟ್‌ನಂತಿರುವ ಪತ್ರಕರ್ತನೊಬ್ಬನ ಬರಹವೆಂಬಂತೆ ತೋರುತ್ತಿದೆಯಲ್ಲವೆ? ಖಂಡಿತ ನಮ್ಮ ಊಹೆ ತಪ್ಪು. ಇದು ಮೈಸೂರು ಕ್ಷೇತ್ರದಲ್ಲಿ ಬಿಜೆಪಿ ಪಕ್ಷದ ಅಧಿಕೃತ ಅಭ್ಯರ್ಥಿಯಾಗಿರುವ ಖ್ಯಾತ ಪತ್ರಕರ್ತ ಸಾಕ್ಷಾತ್ ಪ್ರತಾಪ ಸಿಂಹನ ಅಂಕಣದ ಸಾಲುಗಳು! ನಿಮಗೆ ನಂಬಲು ಕಷ್ಟವಾದರೆ 2013ರ ಸೆಪ್ಟೆಂಬರ್ 28ರಂದು ಕನ್ನಡ ಪ್ರಭ ಪತ್ರಿಕೆಯಲ್ಲಿ ಪ್ರಕಟಗೊಂಡಿರುವ ಈ ಗೋಸುಂಬೆ ಪತ್ರಕರ್ತನ ಬೆತ್ತಲೆ ಪ್ರಪಂಚ ಅಂಕಣ ನೋಡಿ.

ಈ ಪ್ರತಾಪ ಇಂಥಾ ವಿಶ್ಲೇಷಣಾತ್ಮಕ ಬರಹ ಬರೆದುದರ ಹಿಂದಿನ ಉದ್ದೇಶ ಏನಾಗಿತ್ತೆಂದರೆ ಬಿಜೆಪಿಯಿಂದ ದೂರವಾಗಿ ಪ್ರತ್ಯೇಕ ಪಕ್ಷ ಕಟ್ಟುರುವ ಯಡ್ಡಿಯನ್ನು ಹೇಗಾದರೂ ಮಾಡಿ ಬಿಜೆಪಿಯಲ್ಲಿ ಪ್ರತಿಷ್ಠಾಪಿಸಬೇಕು ಎಂಬುದಾಗಿತ್ತು. ಆ ಲೇಖನದ ತಲೆಬರಹವೇ "ಬಿಜೆಪಿ-ಬಿಎಸ್‌ವೈ=2; ಬಿಜೆಪಿ-ಬಿಎಸ್‌ವೈ= ?" ಎಂದು. ಏನಿದು ಖ್ಯಾತ ಪತ್ರಕರ್ತನೆಂದೂ, ಮಹಾದೇಶಭಕ್ತನೆಂದೂ ಹೆಸರಾಗಿರುವ ಪ್ರತಾಪ ಹೀಗೆ ರಾಜಾರೋಷವಾಗಿ ಪರಮಭ್ರಷ್ಟ ಯಡ್ಡಿಯ ಪರ ವಕಾಲತ್ತು ವಹಿಸಿದ್ದಾನಲ್ಲಾ? ಎಂದು ಆಶ್ಚರ್ಯಪಡಬೇಡಿ. ಯಡ್ಡಿ ಕೂಟದೊಂದಿಗೆ ಈ ದೇಶಭಕ್ತ ಪ್ರತಾಪನಿಗೆ ಅವಿನಾಭಾವ ಸಂಬಂಧವಿದೆ. ಈತ ಜಿ ಕೆಟಗರಿ ಸೈಟು ಪಡೆದದ್ದು ಯಡ್ಡಿಯ ಕೃಪೆಯಿಂದಲೇ.

ಇದೇ ಕಾರಣಕ್ಕೆ ಈ ಹಗಲುವೇಷದ ಪತ್ರಕರ್ತನಿಗೆ ಯಡ್ಡಿ ವಿರೋಧಿಗಳೆಂದರೆ ಕೆಂಡದಂಥಾ ಕೋಪ. ಯಡ್ಡಿ ವಿರೋಧಿ ಆನಂತಕುಮಾರ್‌ನನ್ನು ಯಾವ ರೀತಿ ಟಾರ್ಗೆಟ್ ಮಾಡಿ ಭವಿಷ್ಯ ಬರೆದುಬಿಟ್ಟಿದ್ದಾನೆ ನೋಡಿ.

"ವಿಧಾನಸಭೆ ಚುನಾವಣೆಯ ಮತಗಳನ್ನು ದಿಕ್ಕೂಚಿಯಾಗಿಟ್ಟುಕೊಂಡರೆ ಐದು ಬಾರಿ ಸಂಸತ್‌ಗೆ ಆಯ್ಕೆಯಾಗಿರುವ 'ರಾಷ್ಟ್ರೀಯ' ನಾಯಕ ಆನಂತಕುಮಾರ್ ಅವರು 56 ಸಾವಿರ ಮತಗಳ ಅಂತರದಿಂದ ಸೋಲಲಿದ್ದಾರೆ!"

ಭಲೇ! ಭಲೇ!! ಈ ಸಿಂಹನ ಸ್ವಾಮಿನಿಷ್ಠೆಯನ್ನು ಯಾರಾದರೂ ಮೆಚ್ಚಲೇಬೇಕು. ಕರ್ನಾಟಕದಲ್ಲಿ ಈತನ ನೆಚ್ಚಿನ ರಾಜಕಾರಣಿ ಯಡ್ಡಿಯಾಗಿರುವಂತೆಯೇ, ಕೇಂದ್ರದಲ್ಲಿ ಮೋದಿ ಎಂದರೆ ಈತನಿಗೆ ಬಹಳ ಅಚ್ಚುಮೆಚ್ಚು ಹೀಗಾಗಿ ಮೋದಿಯನ್ನು ಟೀಕಿಸಿದವರು ಯಾರೇ ಆಗಲಿ, ಅವರ ತೇಜೋವಧೆಗೆ ಈ ಸಿಮ್ಮ ಕಟಬದ್ಧ.

2013ರ ಸೆಪ್ಟೆಂಬರ್ 7ನೇ ತಾರೀಖಿನ ಅಂಕಣದಲ್ಲಿ ಈ ಪ್ರಭೃತಿಯ ಬರಹ ಇಂದು ಹೇಗೆ ಬೆತ್ತಲಾಗಿದೆ ನೋಡಿ:

"2014ರ ಚುನಾವಣೆಯಲ್ಲಿ ಬಿಜೆಪಿಗೆ 200 ಹಾಗೂ ಅದಕ್ಕೂ ಅಧಿಕ ಸೀಟುಗಳು ಬರುವುದು ಅಡ್ವಾನಿ, ಸುಷ್ಮಾಗೆ ಬೇಕಿಲ್ಲ! ... ಏಕೆಂದರೆ 160-170ರೊಳಗೆ ನಿಂತರೆ ತಾನೇ ಪ್ರಧಾನಿಯಾಗಬಹುದು ಎಂದು ಅಡ್ವಾನಿ ಹೊಂಚು ಹಾಕುತ್ತಿದ್ದಾರೆ. ನೋಡಿಯುವರನ್ನು ತರೆದರೆ ಅಡ್ವಾನಿ ನಂತರ ತಾನು ಉತ್ತರಾಧಿಕಾರಿಯಾಗಬಹುದು ಎಂದು ಸುಷ್ಮಾ ಹವಣಿಸುತ್ತಿದ್ದಾರೆ. ಇನ್ನು ಅಡ್ವಾಣಿ ಪ್ರಧಾನಿಯಾದರಷ್ಟೆ ತನಗೆ ಚೆನ್ನಾಗಿ ಗಿಟ್ಟುವುದು ಎಂದು ಅನಂತ್‌ಕುಮಾರ್‌ಗೂ ಗೊತ್ತು. ಆದಕ್ಕಾಗಿಯೇ ಮೋದಿಯವರ ವಿರುದ್ಧ ಬಣ ಕಟ್ಟಿದ್ದಾರೆ."

"ಇನ್ನು ಅಡ್ವಾಣಿಯವರ ಮಗ ರಾಜ್ಯಕ್ಕೆ ಬರುತ್ತಿದ್ದುದ್ದೇ ಹಣ ಕೊಡೊಯ್ಯಲು ಎಂದು ಕೆಜೆಪಿಯ ಧನಂಜಯ ಕುಮಾರ್ ಆರೋಪ ಮಾಡಿದಾಗ ರಾಜ್ಯ ಬಿಜೆಪಿಯ ಯಕಶ್ಚಿತ್ ನಾಯಕರು ಬೊಬ್ಬೆ ಹಾಕಿದರೇ ಹೊರತು ಸ್ವತಃ ಅಡ್ವಾಣಿಯವರೇ ಏಕೆ ಆರೋಪವನ್ನು ನಿರಾಕರಿಸಲಿಲ್ಲ ಹೇಳಿ?"

"ಮತ್ತೊಬ್ಬ ನಾಯಕಿ ಸುಷ್ಮಾ ಸ್ವರಾಜ್ ಹಾಗೂ ಆಕೆಯ ದತ್ತು ಮಕ್ಕಳಾದ ರೆಡ್ಡಿ-ಶ್ರೀರಾಮುಲು ನಡುವಿನ ತಾಳಮೇಳ ಜಗತ್ತಿಗೇ ಗೊತ್ತಾಗಿ ಆಕೆ ಭ್ರಷ್ಟಾಚಾರದ ಬಗ್ಗೆ ಮಾತಾಡಿದರೆ ಕಾಂಗ್ರೆಸ್ ಆಕೆಯ ನಿಜರೂಪ ಬಯಲು ಮಾಡುವ ಅಪಾಯ ಎದುರಿಸುತ್ತಿದ್ದರು... ಹೀಗೆ ಬಿಜೆಪಿ ಒಂಥರಾ ಕಳ್ಳರ ಸಂತೆಯಾಗಿತ್ತು. ಸಂವೇದನೆಯನ್ನೇ ಕಳೆದುಕೊಂಡ ನಾಯಕರ ಕೂಟವಾಗಿತ್ತು."

ಎಂಥಾ ನಿಷ್ಠುರ ವಿಶ್ಲೇಷಣೆ! ಎಂಥಾ ಮೊನಚಾದ ಬರಹ?! ಆದರೆ ಇದು ಕೇವಲ ಬರಹಕ್ಕೆ ಮಾತ್ರ ಸೀಮಿತ. ವಾಸ್ತವದಲ್ಲಿ ಪ್ರತಾಪ ಸಿಂಹ ಅದೇ ಕಳ್ಳರ ಸಂತೆಗೆ ಈಗ ಸೇರ್ಪಡೆಯಾಗಿಬಿಟ್ಟಿದ್ದಾನೆ. 'ಬಜೆಪಿಯ ತತ್ವಸಿದ್ಧಾಂತಗಳನ್ನು ಒಪ್ಪಿ' ಈ ಗೋಸುಂಬೆ ಪತ್ರಕರ್ತ ಮೈಸೂರಿನ ಅಭ್ಯರ್ಥಿಯೂ ಆಗಿಬಿಟ್ಟಿದ್ದಾನೆ.

ಈ ಬೆತ್ತಲೆ ಅಂಕಣವೇ ಅದರ ಲೇಖಕನ ವೇಷವನ್ನು ಕಳಚಿ ಹೀಗೆ ನಡುಬೀದಿಯಲ್ಲಿ ಬೆತ್ತಲು ಮಾಡುತ್ತಿರುವುದು ಎಂಥ ವಿಪರ್ಯಾಸವಲ್ಲವೆ?

ಬೆತ್ತಲಾದ ಜಾತಿವಾದ

ಈತ ಮೈಸೂರಿನ ಲೋಕಸಭಾ ಅಭ್ಯರ್ಥಿಯಾಗುವುದಕ್ಕೆ ಮೊದಲು ಬಹಳ ಮಂದಿ ಈತನನ್ನು ಬ್ರಾಹ್ಮಣ ಎಂದೇ ಭಾವಿಸಿದ್ದರು. ಆದರೆ ಮೈಸೂರಿನಲ್ಲಿ ಪ್ರಬಲವಾಗಿರುವ ಒಕ್ಕಲಿಗ ಜಾತಿಯ ಓಟುಗಳ ಮೇಲೆ ಕಣ್ಣಿಟ್ಟು ಈತ ಜಾತಿಯ ಹೆಸರಿನಲ್ಲಿ ರಾಜಕಾರಣ ಮಾಡಿದ್ದರ ಬಗ್ಗೆ ವರದಿಗಳು ಹೇರಳವಾಗಿ ಕೇಳಿಬಂದಿವೆ.

"ಬಿಜೆಪಿ ಅಭ್ಯರ್ಥಿ ಪ್ರತಾಪ ಸಿಂಹ ತಾನು ಒಕ್ಕಲಿಗ ಎಂದು ಹೇಳಿಕೊಂಡು ಜಾತಿ ಆಧಾರದ ಮೇಲೆ ಮತ ಯಾಚಿಸಿ ಸಮಾಜವನ್ನು ಒಡೆಯುತ್ತಿದ್ದಾನೆ" ಎಂದು ಜೆಲ್ಲಾಧಿಕಾರಿಗೆ ದೂರು ಕೂಡಾ ಹೋಗಿದೆ. ಈ ಹಿಂದೆ ಇದೇ ಆಸಾಮಿ ತಾನು ಬ್ರಾಹ್ಮಣ ಎಂಬಂತೆ ಬಿಂಬಿಸಿ ಕೊಳ್ಳಲು ಹೆಣಗಾಡಿದ್ದ ಸಂಗತಿಯನ್ನೂ ಆ ದೂರಿನಲ್ಲಿ ವಿವರಿಸಲಾಗಿದೆ. ಅದರಂತೆ ನಗರ ಪ್ರದೇಶಗಳಲ್ಲಿ ಅದರಲ್ಲೂ ಮುಖ್ಯವಾಗಿ ಕೃಷ್ಣರಾಜ ಕ್ಷೇತ್ರದಂತಹ ಬ್ರಾಹ್ಮಣರ ಪ್ರಾಬಲ್ಯವಿರುವ ಕಡೆಗಳಲ್ಲಿ ತನ್ನ ಒಕ್ಕಲಿಗ ಕಾರ್ಡ್ ಬಿಚ್ಚಿಟ್ಟು ತನ್ನ ರಾಷ್ಟ್ರೀಯವಾದಿ ಪೋಸು ಮುಂದುವರೆಸಿದ. ಒಕ್ಕಲಿಗರ ಜನಬಾಹುಳ್ಯವಿರುವ ಗ್ರಾಮೀಣ ಪ್ರದೇಶಗಳಲ್ಲಿ ಪ್ರತಾಪಸಿಂಹ ಗೌಡ ಎಂದು ಬಂಬಿಸಿಕೊಂಡು ಜಾತಿವಾದಕ್ಕೆ ಮೊಹರೆ ಕೊಟ್ಟ.

ಸರಿಯಾಗಿ ಇದೇ ಸಂದರ್ಭಕ್ಕೆ ದೇವೇಗೌಡರ ರಾಜಕೀಯ ತಂತ್ರವೂ ಈತನ ಬೆಂಗಾವಲಿಗೆ ಬಂದಂತಾಗಿತ್ತು. ಜೆಡಿಎಸ್ ಯಾರೂ ಕಂಡುಕೇಳರಿಯದ ವ್ಯಕ್ತಿಯನ್ನು ಅಭ್ಯರ್ಥಿಯಾಗಿ ಆರಿಸಿದಾಗಲೇ ಬಹಳ ಮಂದಿಗೆ ಈ ಗುಮಾನಿಯಿತ್ತು, ತಮ್ಮ ಕಣ್ಣೆದುರಿನಲ್ಲೇ ರಾಜ್ಯದ ಅಧಿಕಾ ಹಿಡಿದು 'ಮೆರೆಯುತ್ತಿರುವ' ಸಿದ್ದರಾಮಯ್ಯನನ್ನು ತವರ ಜಿಲ್ಲೆಯಲ್ಲೇ ಮುಖಭಂಗ ಮಾಡಲು ಈ ತಂತ್ರ ಹೆಣೆಯ ಲಾಗಿತ್ತು ಎಂದು ಈಗ ಎಲ್ಲೆಡೆ ಚರ್ಚೆಯಾಗುತ್ತಿರುವ ಸಂಗ

ಇದಕ್ಕೆ ಪುರಾವೆ ಎಂಬಂತೆ ಜೆಡಿಎಸ್ ಅಭ್ಯರ್ಥಿ ಹಾಗೂ ಬಹುಪಾಲು ಕಾರ್ಯಕರ್ತರು ಕೊನೆ ದಿನಗಳ ತಮ್ಮ ಪ್ರಚಾರ ಕಾರ್ಯವನ್ನೇ ತೊರೆದುಬಿಟ್ಟರು. ಬಗ್ಗೆ ಅಭ್ಯರ್ಥಿಯನ್ನು ಕೇಳಲಾಗಿ ಎಲ್ಲರೂ ಯುಗಾದಿ ಹಬ್ಬದ ಆಚರಣೆಯಲ್ಲಿದ್ದಾರೆ ಎಂಬ ಉತ್ತರವೂ ಬಂತು ಆದರೆ ಅಸಲಿಯತ್ತೇನೆಂದರೆ ಜೆಡಿಎಸ್ ಅಭ್ಯರ್ಥಿ ಹೇಗೂ ಗೆಲ್ಲಲು ಸಾಧ್ಯವಿಲ್ಲವಾದ್ದರಿಂದ ಒಕ್ಕಲಿಗ ಅಭ್ಯರ್ಥಿಯಾಗಿರುವ ಪ್ರತಾಪಸಿಂಹನಿಗೆ ಓಟು ಹಾಕಿ ಎಂದು ಗುಸುಗುಸು ಪ್ರಚಾರ ಬಾಯಿಂದ ಬಾಯಿಗೆ ಹರಡಿತು. ಎಸ್ಸೆಮ್ಮೆಸ್ಸುಗಳೂ ಹರಿದಾಡಿದವು.

ಇದರ ಪರಿಣಾಮವಾಗಿ ಸಾಕಷ್ಟು ಒಕ್ಕಲಿಗ ಓಟುಗಳು ಪ್ರತಾಪಸಿಂಹ 'ಗೌಡ'ನಿಗೆ ವರ್ಗಾವಣೆಯಾಗಿವೆ ಎಂದು ಮೈಸೂರಿನ ರಾಜಕೀಯ ವಲಯದಲ್ಲಿ ದಟ್ಟವಾದ ಸುದ್ದಿ ಹರಡಿದೆ. ಈ ಎಲ್ಲ ಮಸಲತ್ತಿನ ಘೋರ ದುಷ್ಪರಿಣಾಮ ವೇನೆಂದರೆ ಸಿದ್ದರಾಮಯ್ಯನನ್ನು ಮಣ್ಣುಮುಕ್ಕಿಸಲು ಹೋದ ಸ್ವತಃ ಜೆಡಿಎಸ್ ಪಕ್ಷವೇ ಜಿಲ್ಲೆಯಲ್ಲಿ ದಿನೇದಿನೇ ನೆಲ ಕಳೆದುಕೊಳ್ಳುವತ್ತ ಸಾಗುತ್ತಿದೆ. ಈ ಬಗ್ಗೆ ಜೆಡಿಎಸ್ ನಿಷ್ಠಾವಂತ ಕಾರ್ಯಕರ್ತರೇ ಬಹಳ ಬೇಸರ ವ್ಯಕ್ತಪಡಿಸುತ್ತಾ

ಆದರೆ ಚುನಾವಣೆಗೆ ಇನ್ನೇನು ಒಂದು ವಾರ ಬಾ ಇದ್ದಾಗ ಕ್ಷೇತ್ರದಲ್ಲಿ ಪ್ರಚಾರ ಕಾರ್ಯ ಕೈಗೊಂಡಿ ದೇವೇಗೌಡರು "ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಜನತಾ ದಳದ ಅಭ್ಯರ್ಥಿಯನ್ನು ಗೆಲ್ಲಿಸದಿದ್ದ ನಾನು ಮತ್ತೆ ಮೈಸೂರಿಗೆ ಕಾಲಿಡುವುದಿಲ್ಲ" ಎಂದ ಉಗ್ರ ಭಾಷಣ ಮಾಡಿದ್ದರು. "ಮೈಸೂರು ಪ್ರಾಂತ್ಯದ ನಾಲ್ಕು ಮಂದಿ ಜಾತ್ಯತೀತ ಜನತಾದಳದ ಶಾಸಕರಿದ್ದೀರಿ 25 ಮಂದಿ ಪಾಲಿಕೆ ಸದಸ್ಯರಿದ್ದೀರಿ, ನೀವೆಲ್ಲಾ ಸೇ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಜಾತ್ಯತೀ ದಳದ ಅಭ್ಯರ್ಥಿಯನ್ನು ಗೆಲ್ಲಿಸಲೇಬೇಕು. ನಿಮಗೆ ಏನ ಸಹಕಾರ ಬೇಕು ಹೇಳಿ. ನಾನು ಮಾಡಲು ಸಿದ್ಧ" ಎಂದ ಘೋಷಿಸಿದ್ದರು.

ಈ ಬಾರಿ ಚುನಾವಣೆಯಲ್ಲಿ ಜೆಡಿಎಸ್ ಮುಸ ಸಂಘಟನೆಯಾದ ಎಸ್‌ಡಿಪಿಐ ಜೊತೆ ಮೈತ್ರಿ ಮಾ ಕೊಂಡಿತ್ತು. ಮುಸ್ಲಿಮರ ಮತಗಳನ್ನು ಒಡೆದ ಇದರ ಹಿಂದಿನ ಮರ್ಮ. ಆದರೆ ಯಾವಾಗ ಜೆಡಿಎ ನವರು ಪ್ರತಾಪ ಸಿಂಹನ ಪರ ವಾಲಿದ್ದಾರೆ ಎಂಬುದ ಗಮನಕ್ಕೆ ಬಂತೋ, ಆಗಲೇ ಮುಸ್ಲಿಂ ನಾಯಕರು ಎಚ್ಚೆ ಕೊಂಡರು. ಈ ಚಿಲ್ಲಿ ಸಿಂಹನನ್ನು ಸೋಲಿಸಬೇಕಾದ ವಿಶ್ವನಾಥ್‌ಗೆ ಮತ ಹಾಕುವುದೇ ಸೂಕ್ತ ಎಂ ತೀರ್ಮಾನಕ್ಕೆಳಿದರು.

ಕೊನೆ ಘಳಿಗೆಯಲ್ಲಿ ನಡೆದ ಈ ಎಲ್ಲಾ ನಾಟಕೀಯ ಬೆಳವಣಿಗೆಗಳ ಪರಿಣಾಮ ಈಗ ಮತಪೆಟ್ಟಿಗೆಯಲ್ಲಿ ಕುಳಿತಿ ಹಾಗೆಯೇ ಅರ್ಧ ಸತ್ಯ ಹಾಗೂ ಪಸಿ ಸುಳ್ಳುಗಳ ಹದವಾಗಿ ಮಿಶ್ರಣ ಮಾಡಿ ಸಂಕುಚಿತಗಟ್ಟಲೆ ಬರೆ ಅಪ್ಪಟ ದೇಶಭಕ್ತ ಅಖಂಡ ರಾಷ್ಟ್ರೀಯವಾದಿ ಎಂ ಪೋಸು ಕೊಡುತ್ತಿದ್ದ ಪತ್ರಕರ್ತನೊಬ್ಬನ ಮುಖವಾಡ ಇದೀಗ ಕಳಚಿ ಬಿದ್ದಿದೆ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಸಿಮ್ಮನ ಮೂಡಾ ಸೈಟು ಪ್ರತಾಪ!

ಪರಮ ಪತಿವ್ರತಾ ಶಿರೋಮಣಿಯಂತೆ ಪೋಸು ಕೊಡುವ ಈ ಸಿಮ್ಮನ ಅಸಲಿಯತ್ತು ನೋಡಿ. ಈ ಆಸಾಮಿ ಲಾಭದ ಲೆಕ್ಕಾಚಾರವಿಲ್ಲದೆ ಒಂದು ಹುಲ್ಲುಕಡ್ಡಿಯಷ್ಟು ಕೆಲಸವನ್ನೂ ಮಾಡುವುದಿಲ್ಲ ಎಂದು ಈತನನ್ನು ಹತ್ತಿರದಿಂದ ಬಲ್ಲವರು ಹೇಳುತ್ತಾರೆ. ಕಳೆದ ಬಾರಿ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರಕ್ಕೆ ಈತ ಸಲ್ಲಿಸಿದ ಪ್ರತ್ಯಕ್ಷ ಹಾಗೂ ಪರೋಕ್ಷ ಸೇವೆಗಳಿಗೆ ಏನಾದರೂ ಪ್ರತಿಫಲ ಪಡೆಯಲೇಬೇಕಲ್ಲ? ಆದ್ದರಿಂದ 2010ರಲ್ಲಿ ಯಡ್ಡಿ ಮುಖ್ಯಮಂತ್ರಿ ಆಗಿದ್ದಾಗ ಈತ ಮೈಸೂರಿನಲ್ಲಿ 'ಜಿ' ಕೆಟಗರಿ ಸೈಟೊಂದನ್ನು ಲಪಟಾಯಿಸಲು ಮಾಡಿದ ತಂತ್ರಗಳು ಒಂದೆರಡಲ್ಲ.

ತನ್ನ ಪತ್ರಿಕಾ ಅಂಕಣ ಬರಹಗಳನ್ನೇ ಮುಂದಿಟ್ಟುಕೊಂಡ ಈ ಪತ್ರಾವಳಿ ಗಿರಾಕಿ ಕಂಡಕಂಡವರ ಕಾಲಿಗೆ ಬದ್ಧ ಹಲ್ಲು ಗಿಂಜಿ ಕೊನೆಗೂ ಮೈಸೂರಿನ ವಿಜಯನಗರ ಬಡಾವಣೆಯಲ್ಲಿ 12194 ನಂಬರಿನ 40x60 ಅಳತೆಯ ಸೈಟೊಂದನ್ನು ಮುಂಜೂರು ಮಾಡಿಸಿಕೊಂಡೇಬಿಟ್ಟ. ನಂತರದ ದಿನಗಳಲ್ಲಿ ನಾಗಲಕ್ಷ್ಮಿ ಎಂಬ ಮಕ್ಕಾಮಕ್ಕಿ ಪತ್ರಕರ್ತರೊಬ್ಬರು ಈ 'ಜಿ' ಸೈಟು ಹಗರಣವನ್ನು ಬಯಲಿಗೆ ತಂದು ಸರ್ಕಾರ ಮಂಜೂರು ಮಾಡಿದ್ದ ಸೈಟನ್ನು ವಾಪಸ್ ಪಡೆಯುವಂತೆ ಆಗ್ರಹಿಸಿದರು.

ಆಗ ಖತರ್‌ನಾಕ್ ಪ್ರತಿಭಾವಂತ ಪ್ರತಾಪ ಸಿಮ್ಮ ಒಂದು ಹೊಸ ಯೋಜನೆಗೆ ಕೈಯಿಟ್ಟ. ಇನ್ನು ಕೆಲವೇ ವಾರಗಳಲ್ಲಿ ತನ್ನ ಹೆಂಡತಿಯಾಗಲಿದ್ದ ಡಾಕ್ಟರ್ ಅರ್ಪಿತಾ ಎಂಬ ಅಂಗವಿಕಲ ಹುಡುಗಿಯನ್ನು ಮುಂದಿಟ್ಟುಕೊಂಡು ಅದೇ ಸೈಟನ್ನು ಆಕೆಯ ಹೆಸರಿನಲ್ಲಿ ಪಡೆದುಬಿಟ್ಟ.

28.10.2010ರಂದು ವಿಧಾನಸೌಧದಲ್ಲಿರುವ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯವರು ಮೈಸೂರಿನ ಮೂಡಾ ಕಮಿಷನರ್‌ಗೆ ಬರೆದ ಪತ್ರದಲ್ಲಿ ಈ ಅಂಶ ಸ್ಪಷ್ಟವಾಗಿದೆ. "... ನಿವೇಶನ ಸಂಖ್ಯೆ: 12194/1ರ 60x40 ಅಳತೆಯ ನಿವೇಶನವನ್ನು ಪೆ ಪ್ರವರ್ಗದಡಿ ಪ್ರತಾಪ ಸಿಂಹ ಅವರಿಗೆ ಮಂಜೂ ಮಾಡಲಾಗಿತ್ತು. ... ಈ ವಿಷಯವನ್ನು ಪುನರ್ ಪರಿಶೀಲಿಸಿ ಉಲ್ಲೇಖ (2)ರ ಸರ್ಕಾ ಪತ್ರದಲ್ಲಿ ಶ್

ವಿಟ್ಲ ಗ್ಯಾಂಗ್‌ರೇಪ್



ಆರೋಪಿಗಳು: ಬಕ್ಕುಟ ಬಶೀರ್, ಕಡಂಬು ಬಶೀರ್, ಕಾರ್ಯಾಡಿ ಜಬ್ಬಾರ್

ಕಾಮುಕರ ಬೆನ್ನಿಗೆ ಪೊಲೀಸ್-ಪೊಲಿಟಿಕ್ಸ್?

ವೃತ್ತಾಂತವನ್ನು ಮನೆಯವರ ಮುಂದೆ ಹೇಳಿಕೊಂಡಳು. ಬಲಾಢ್ಯ ಬೆಂಬಲವಿರದ ಆ ಬಡ ಕುಟುಂಬವಾದರೂ ಪೊಲೀಸ್ ಕಂಪ್ಲೆಂಟ್ ಕೊಡುವುದರ ಹೊರತಾಗಿ ಮತ್ತೇನನ್ನು ಮಾಡಲು ಸಾಧ್ಯವಿರಲಿಲ್ಲ. ಆದರೆ 'ವಿಟ್ಲ ಪೊಲೀಸ್ ಠಾಣೆ'ಯ ಕರ್ತವ್ಯ ದಕ್ಷತೆಯ ಬಗ್ಗೆ ತಿಳಿದಿದ್ದ ಅವರು ಕಂಪ್ಲೆಂಟ್ ಕೂಡಾ ಕೊಡದೆ ಮತ್ತೊಮ್ಮೆ ಅಸಹಾಯಕತೆಯಲ್ಲಿ ಸುಮ್ಮನಾದರು. ಇದನ್ನೇ, ಹುಡುಗಿ ಹಾಗೂ ಆಕೆಯ ಮನೆಯವರು ತನಗೆ ಹೆದರಿದ್ದಾರೆ ಅಂತ ಭ್ರಮಿಸಿಕೊಂಡ ಜಬ್ಬಾರ್‌ನ ಫೋನ್ ಕಾಲ್‌ಗಳು ಬರುವುದು ಹೆಚ್ಚಾದವು. ರೋಸತ್ತ ಹುಡುಗಿ ಕೊನೆಗೂ ವಿಧಿಯಿಲ್ಲದೆ ಪೊಲೀಸ್ ಠಾಣೆಯ ಮೆಟ್ಟಿಲೇರಬೇಕಾಯಿತು. ವಿಪ್ರಿಲ್ 23ನೇ ತಾರೀಖು ವಿಟ್ಲ ಠಾಣೆಗೆ ಬಂದು ಸಬ್‌ಇನ್ಸ್‌ಪೆಕ್ಟರ್ ಟಿ.ಆರ್. ರಾಘವೇಂದ್ರನ ಮುಂದೆ ತನ್ನ ಅಳಲು ತೋಡಿಕೊಂಡು ಕಂಪ್ಲೆಂಟ್ ಕೊಟ್ಟಳು.

ಅಟ್ಟಹಾಸ ಹೆಚ್ಚಾಯ್ತು

ಪೊಲೀಸ್ ಪರಾಕ್ರಮದ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದ ಆರೋಪಿಗಳು ಇದರಿಂದ ಹೆಚ್ಚೇನು ಗಾಬರಿ ಬೀಳಲಿಲ್ಲ. ಬದಲಾಗಿ ಜಬ್ಬಾರ್‌ನ ಉಪಟಳ ಈಗ ಮತ್ತಷ್ಟೂ ಹೆಚ್ಚಾಯಿತು. ಠಾಣೆಯಲ್ಲಿ ದೂರು ನೀಡಿದ್ದಕ್ಕಾಗಿ ಕೋಪಗೊಂಡ ಆತ ಹುಡುಗಿಯ ಮನೆಯವರ ಮೇಲೆ ಹಲ್ಲೆ ಮಾಡಲೂ ಮುಂದಾದ. ಅದೂ ಫಲಿಸದ ಕಾರಣ ಬಾಲಕಿಯ ಸಂಬಂಧಿಕರನ್ನು ಸಂಪರ್ಕಿಸಿ ರಾಜಿ ಪಂಚಾಯ್ತಿ ಮಾಡಿಸುವಂತೆ ದಂಬಾಲು ಬಿದ್ದ. ಅದಕ್ಕೂ ಮಣಿದ ಬಡಪಾಯಿ ಹುಡುಗಿ ಮನೆಯವರು ರಾಜಿಗೆಂದು ಬಂದಾಗ ಅಲ್ಲಿಯೂ ಜಬ್ಬಾರ್ ಆವರ ಮೇಲೆ ಹಲ್ಲೆ ನಡೆಸಿದ. ಅದೇಗೋ ವಿಷಯ ತಿಳಿದು ಪೊಲೀಸರು ಸ್ಥಳಕ್ಕೆ ಆಗಮಿಸುವ ಶ್ರಮ ತೆಗೆದುಕೊಳ್ಳುತ್ತಿದ್ದಂತೆಯೇ ಅಲ್ಲಿಂದ ಪರಾರಿಯಾದ ಜಬ್ಬಾರ್ ಒಂದೆರಡು ದಿನ ಕಣ್ಮರೆಯಾದ. ಅದಾದ ಮೇಲೆ ಕೇಸು ಕೋರ್ಟ್‌ನ ಮೆಟ್ಟಿಲೇರಿತು. ಮೊನ್ನೆ ಬಂಟ್ವಾಳದ ನ್ಯಾಯಾಲಯಕ್ಕೆ ಹುಡುಗಿ ಹೇಳಿಕೆ ನೀಡಲು ಬರುತ್ತಿದ್ದಾಳೆ ಎಂಬುದನ್ನು ತಿಳಿದುಕೊಂಡ ಆರೋಪಿ ಜಬ್ಬಾರ್ ಕೋರ್ಟ್ ಆವರಣದಲ್ಲೇ ಪ್ರತ್ಯಕ್ಷನಾಗಿ ಹುಡುಗಿ ಮತ್ತು ಆಕೆಯ ಸಂಬಂಧಿಕರಿಗೆ ಕೊಲೆ ಬೆದರಿಕೆ ಹಾಕಿ ಪರಾರಿಯಾದ.

ಪೊಲೀಸ್ ಕಂಪ್ಲೆಂಟ್ ದಾಖಲಾಗುತ್ತಿದ್ದಂತೆ ಜಬ್ಬಾರ್‌ಗೂ ಮುನ್ನವೇ ಮೊದಲಿಬ್ಬರು ಕಿರಾತಕರು (ಬಕ್ಕುಟ ಬಶೀರ್ ಮತ್ತು ಕಡಂಬು ಬಶೀರ್) ನಾಪತ್ತೆಯಾದರು. ಪ್ರಮುಖ ಆರೋಪಿ ಬಶೀರ್‌ನದು ಇಂತಹ ಮಾನಗೇಡಿ ಕೆಲಸಗಳಲ್ಲಿ ಎತ್ತಿದ ಕೈ. ಗಲ್ಫ್‌ನಲ್ಲಿ ಕೆಲಸ ಮಾಡಿಕೊಂಡಿರುವ ಈತ ಕೆಲ ತಿಂಗಳ ಹಿಂದಷ್ಟೇ ಭಾರತಕ್ಕೆ ವಾಪಸ್ಸಾಗಿದ್ದ. ಈ ಗ್ಯಾಂಗ್‌ರೇಪ್‌ಗೂ ಮುನ್ನ ಒಂದೆರಡು ಕಡೆ ತನ್ನ ಕಚ್ಚಿಪರುಕತನದಿಂದ ಒದೆ ತಿಂದು ನಟೋರಿಯಸ್ ರೇಪಿಸ್ಟ್ ಆಗುವ ಸೂಚನೆ ನೀಡಿದ್ದ. ವಿಷಯ ರಟ್ಟಾಗುತ್ತಿದ್ದಂತೆ ಈತ ಮತ್ತೆ ಗಲ್ಫ್‌ಗೆ ಪರಾರಿಯಾಗಿರಬಹುದೆನ್ನುವ ಮಾತುಗಳೂ ಕೇಳಿಬರುತ್ತಿವೆ.

ಪೊಲೀಸ್ ವೈಫಲ್ಯ-ರಾಜಕಾರಣಿಗಳ ನಿರ್ಲಕ್ಷ್ಯ

ಪೊಲೀಸ್ ಕೇಸು ದಾಖಲಾಗಿ ಇಲ್ಲಿಗೆ ಇಪ್ಪತ್ತು ದಿನಗಳೇ ಕಳೆದುಹೋದರೂ ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸರು ಆಸಕ್ತಿ ತೋರದಿರುವುದು ಹಲವಾರು ಅನುಮಾನಗಳಿಗೆ ಎಡೆಮಾಡಿಕೊಡುತ್ತಿದೆ. ಆರೋಪಿಗಳ ಹಲವು ಸಂಬಂಧಿಕರು ಸ್ಥಳೀಯ ಕಾಂಗ್ರೆಸ್ ಮುಖಂಡರುಗಳಾಗಿರುವುದರಿಂದ ಪೊಲೀಸರು ಬೇಕಂತಲೇ ಪ್ರಕರಣವನ್ನು ನಿರ್ಲಕ್ಷಿಸುತ್ತಿರುವ ಸಾಧ್ಯತೆಯೂ ಇದೆ. ಸಂತ್ರಸ್ತ ಹುಡುಗಿ ತನ್ನ ಮಾವ ಕರ್ನೂಡ್ಡದ ಹಕೀಂ ಎಂಬಾತನ ಜೊತೆ ವಿಟ್ಲ ಠಾಣೆಗೆ ಬಂದು ದೂರು ನೀಡುವಾಗ ಅದೇ ಠಾಣೆಯಲ್ಲಿ ಸ್ಥಳೀಯ ಕಾಂಗ್ರೆಸ್ ಮುಖಂಡ ಹಾಗೂ ಹಾಲಿ ಜಿಲ್ಲಾ ಪಂಚಾಯತ್ ಸದಸ್ಯ ಎಂ.ಎಸ್. ಮಹಮ್ಮದ್ ಕೂಡಾ ಹಾಜರಿದ್ದ. ಆರೋಪಿಗಳ ಪೊಲಿಟಿಕಲ್ ಪ್ರಭಾವದ ಬಗ್ಗೆ ತಿಳಿದಿದ್ದ ಹಕೀಂ, ಪೊಲೀಸರು ಪ್ರಕರಣದತ್ತ ಗಮನ ಹರಿಸದಿರಬಹುದು ಎಂಬ ಅನುಮಾನದಲ್ಲಿ ಎಂ.ಎಸ್. ಮಹಮ್ಮದ್‌ನಲ್ಲಿ ನ್ಯಾಯಕ್ಕಾಗಿ ಬೇಂಬಲಿಸುವಂತೆ ಅವಲತ್ತುಕೊಂಡಿದ್ದ. ತಮ್ಮದೇ ಸಮುದಾಯದ ಬಡ ಹುಡುಗಿಯ ಮೇಲೆ ನಡೆದಿರುವ ಈ ದೌರ್ಜನ್ಯದ ಬಗ್ಗೆ ತಿಳಿದ ನಂತರವೂ ಮೊಹಮ್ಮದ್ ಕುಟುಂಬದ ಬೆಂಬಲಕ್ಕೆ ಬರಲಿಲ್ಲ ಎನ್ನಲಾಗಿದೆ. ಅಲ್ಲದೆ ರಸ್ತೆ ಅಗಲೀಕರಣ, ವಿರೋಧಿಗಳ ಭ್ರಷ್ಟಾಚಾರಗಳ ಬಗ್ಗೆ ಪ್ರೆಸ್‌ಮೀಟ್ ನಡೆಸಿ ಅಪ್ರತಿಮ ಹೋರಾಟಗಾರನೆಂಬ ಇಮೇಜು ಸೃಷ್ಟಿಸಿಕೊಂಡಿರುವ ಮೊಹಮ್ಮದ್ ಘಟನೆ ಬಗ್ಗೆ ನೇರವಾಗಿ ತಿಳಿದಿದ್ದರೂ ಇದುವರೆಗೂ ಹುಡುಗಿ ಮನೆಗೆ ಹೋಗಿ ಸಂತೈಸುವ ಕೆಲಸವನ್ನಾಗಲಿ, ಖಂಡನೀಯ ಪತ್ರಿಕಾ ಹೇಳಿಕೆಯನ್ನಾಗಲಿ ನೀಡಿಲ್ಲ. ಇನ್ನು ಅಂತಹವರಿಂದ ಪೊಲೀಸರ ಮೇಲೆ ತನಿಖೆ ತೀವ್ರಗೊಳಿಸುವಂತ ಒತ್ತಡ ಬೀಳುವುದು ದೂರದ ಮಾತೇ ಸರಿ. ಅಂದಹಾಗೆ, ಸೌಜನ್ಯ ಅತ್ಯಾಚಾರ ಪ್ರಕರಣದ ಹೋರಾಟದಲ್ಲಿ ಈ ಮೊಹಮ್ಮದ್ ಕೂಡಾ ಸಕ್ರಿಯನಾಗಿದ್ದ!

ಆರೋಪಿಗಳ ಸಂಬಂಧಿಕರು ಕಾಂಗ್ರೆಸ್ ಪಂಟು ಹೊಂದಿರುವುದರಿಂದ ಸ್ಥಳೀಯ ರಾಜಕಾರಣಿಗಳಿಂದ ಹಿಡಿದು ಉಸ್ತುವಾರಿ ಸಚಿವ ರಮಾನಾಥ ರೈವರೆಗೆ ಎಲ್ಲರೂ ತೆಪ್ಪಗಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿರೋದರಲ್ಲಿ ಸತ್ಯಾಂಶ ಇಲ್ಲದಿಲ್ಲ.

ಇನ್ನು ವಿಟ್ಲ ಪೊಲೀಸರು ನಿಷ್ಪಕ್ಷಪಾತವಾಗಿ ತನಿಖೆ ನಡೆಸುವ ಯಾವೊಂದು ಲಕ್ಷಣವನ್ನೂ ಈ ಪ್ರಕರಣದಲ್ಲಿ ಇದುವರೆಗು ತೋರಿಸಿಲ್ಲ. ಆಗಿಂದಾಗ್ಗೆ ಪ್ರತ್ಯಕ್ಷನಾಗಿ ಹುಡುಗಿ ಮನೆಯವರಿಗೆ ಧಮಕಿ ಹಾಕಿ ಆರಾಮವಾಗಿ ನಾಪತ್ತೆ(?)ಯಾಗುತ್ತಿರುವ ಜಬ್ಬಾರ್‌ನಂತವನೂ ಪೊಲೀಸರ ಕಣ್ಣಿಗೆ ಸತತ ಇಪ್ಪತ್ತು ದಿನಗಳಿಂದ ಕಾಣಿಸುತ್ತಿಲ್ಲ ಎಂದರೆ ಹಾಸ್ಯಾಸ್ಪದವಲ್ಲದೆ ಮತ್ತೇನೂ ಅಲ್ಲ. ಸಬ್‌ಇನ್ಸ್‌ಪೆಕ್ಟರ್ ಟಿ.ಆರ್. ರಾಘವೇಂದ್ರ ಠಾಣೆಯನ್ನು ರಾಜಕಾರಣಿಗಳ ಅಡ್ಡೆ ಮಾಡಿದಂತಿದೆ. ಸ್ಥಳೀಯ ಬಿಜೆಪಿ ಲೀಡರ್ ಕಮ್ ಶಕ್ತಿಕೇಂದ್ರದ ಅಧ್ಯಕ್ಷ ಅರುಣ್ ವಿಟ್ಲನ ಜೊತೆ ಠಾಣೆಯಲ್ಲಿ ಹರಟುತ್ತಾ ಕೂರುವುದನ್ನು ಬಿಟ್ಟು ಕರ್ತವ್ಯದತ್ತಲೂ ಗಮನ ಕೊಡುವುದು ಒಳಿತು. ಈಗಷ್ಟೆ ಇಲಾಖೆಗೆ ಪಾದಾರ್ಪಣೆ ಮಾಡಿರುವ ರಾಘವೇಂದ್ರ 'ಪೊಲಿಟಿಕ್ಸ್ ಪರಿಧಿ'ಗೆ ಸಿಕ್ಕಿ ಹಾಕಿಕೊಳ್ಳದಿರುವುದು ಅವರ ಕೆರಿಯರ್ ದೃಷ್ಟಿಯಿಂದ ತುಂಬಾ ಒಳ್ಳೆಯದು. ಆಗಲಾದರು ಅವರು ಇಂತಹ ಪ್ರಕರಣಗಳತ್ತ ಪ್ರಾಮಾಣಿಕವಾಗಿ ಗಮನ ಕೊಡಬಹುದು.

ದೂರು ನೀಡಿ ಹತ್ತು ದಿನ ಕಳೆದರೂ ರಾಘವೇಂದ್ರರ ಪೊಲೀಸ್ ಟೀಮು ನಿರ್ಲಕ್ಷ್ಯ ವಹಿಸುತ್ತಿರೋದನ್ನು ವಿರೋಧಿಸಿ ಡಿ.ವೈ.ಎಫ್.ಐ ಸಂಘಟನೆ ವಿಟ್ಲ ಠಾಣೆಯ ಮುಂದೆಯೇ ಪ್ರತಿಭಟನೆ ನಡೆಸಿತ್ತು. ಅಷ್ಟಾದರೂ 'ತನಿಖೆ ಪ್ರಗತಿಯಲ್ಲಿದೆ' ಎಂಬೊಂದು ರೆಡಿಮೇಡ್ ಉತ್ತರವನ್ನು ಬಿಟ್ಟು ಮತ್ತಾವ ಭರವಸೆಯೂ ಇನ್ಸ್‌ಪೆಕ್ಟರ್‌ರಿಂದ ಬಂದಿಲ್ಲ.

ಅಸಲಿಗೆ ಇದೊಂದು ನಿರ್ಲಕ್ಷಿಸುವಂತಹ ಪ್ರಕರಣವಲ್ಲ ಎಂಬುದನ್ನು ಪೊಲೀಸರು ಮೊದಲು ಅರ್ಥಮಾಡಿಕೊಳ್ಳಬೇಕಿದೆ. ಅಪ್ರಾಪ್ತ ಹುಡುಗಿಯರ ಮೇಲೆ ಅತ್ಯಾಚಾರದ ಪ್ರಕರಣಗಳು ಮಂಗಳೂರಿನಲ್ಲಿ ಹೆಚ್ಚಾಗುತ್ತಿವೆ. ಇತ್ತೀಚೆಗೆ ಬಂಟ್ವಾಳದಲ್ಲೂ ಅಪ್ರಾಪ್ತ ಹುಡುಗಿಯನ್ನು ಅತ್ಯಾಚಾರ ಮಾಡಿದ ಪ್ರಕರಣ ನಡೆದಿತ್ತು. ಇಬ್ಬರು ಅಪರಾಧಿಗಳನ್ನು ಬಂಧಿಸಿದ ನಂತರ ಆ ಹುಡುಗಿಯನ್ನು ವೇಶ್ಯಾವಾಟಿಕೆಗೆ ತಳ್ಳುವ ಯೋಜನೆ ಅವರದಾಗಿತ್ತು ಎಂಬ ಆಘಾತಕಾರಿ ಅಂಶ ಬೆಳಕಿಗೆ ಬಂದಿತ್ತು. ಬಿಡಿಸಿದನಲ್ಲಿರುವ ಮತ್ತು ಅಪ್ರಾಪ್ತ ಹುಡುಗಿಯರನ್ನು ಅತ್ಯಾಚಾರ ಮಾಡಿ ವೇಶ್ಯಾವಾಟಿಕೆಗೆ ಮಾರಾಟ ಮಾಡುವ ಜಾಲವೊಂದು ಮಂಗಳೂರಿನಲ್ಲಿ ಬೀಡುಬಿಟ್ಟಿರುವ ಅನುಮಾನ ಮೂಡುತ್ತಿದೆ. ವಿಟ್ಲ ಪ್ರಕರಣದ ಆರೋಪಿಗಳಿಗೂ ಅಂತಹ ಜಾಲದ ಸಂಪರ್ಕವಿದ್ದಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಹಾಗಾಗಿ ಪೊಲೀಸರು ಈಗಲಾದರು ನಿಗಾ ವಹಿಸದಿದ್ದರೆ ಜಿಲ್ಲೆಯಲ್ಲಿ ಸೆಕ್ಸ್ ರ‍್ಯಾಕೆಟ್ ಬಲವಾಗಿ ಬೇರೂರುವ ಸಾಧ್ಯತೆಯಿದೆ.

ಸಂಘಟನೆಗಳ ಪ್ರತಿಭಟನೆಯ ಹೊರತಾಗಿಯೂ ವಿಟ್ಲ ಪೊಲೀಸರು ತನಿಖೆಯನ್ನು ಚುರುಕುಗೊಳಿಸದೆ ಮೌನವಾಗಿರುವುದರ ವಿರುದ್ಧ ಸಿಡಿದೆದ್ದಿರುವ ಡಿವೈಎಫ್‌ಐ, ಎಸ್‌ಎಫ್‌ಐ, ಜನವಾದಿ ಮಹಿಳಾ ಸಂಘಟನೆಗಳ ನೂರಾರು ಕಾರ್ಯಕರ್ತರು ಮೇ 8ರಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಚೇರಿಯಿಂದ ಎಸ್ಪಿ ಕಚೇರಿವರೆಗೆ ಮೆರವಣಿಗೆ ನಡೆಸಿ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಮುಂದೆ ಧರಣಿ ನಡೆಸಿದರು. ವಿಟ್ಲ ಗ್ಯಾಂಗ್‌ರೇಪ್ ಪ್ರಕರಣ ನಿಧಾನಕ್ಕೆ ಹೋರಾಟದ ತೀವ್ರತೆಯನ್ನು ಪಡೆದುಕೊಳ್ಳುತ್ತಿದೆ. ಮತ್ತೊಂದು 'ಸೌಜನ್ಯ ಹೋರಾಟ'ಕ್ಕೆ ಅವಕಾಶ ಮಾಡಿಕೊಡದಂತೆ ಪೊಲೀಸರು ಇನ್ನು ಮುಂದಾದರು ಆರೋಪಿಗಳನ್ನು ಬಂಧಿಸಿ ಜೈಲಿಗಟ್ಟುವುದು ಕ್ಷೇಮ.

●ಗಿರೀಶ್ ತಾಳಿಕಟ್ಟೆ

...ವ್ ಟ್ರ್ಯಾಜಿಡಿ ಮತ್ತು ಧರ್ಮ!

...ಗ್ಗೂ ಧಲ ಬಡದ ತಿವಿಕ್ರಮನಂತೆ ತಂದೆ ವೇಣು ...ಶೈಲಿಯಲ್ಲಿ ಪತ್ನಿಯ ವಿರುದ್ಧ ಜಿದ್ದಾಜಿದ್ದಿಗಿಳಿದಿ...ು. ಅದಕ್ಕೆ ಆಯುಧವಾದವನು ರೋಸಲಿನ್ ಅಕ್ಕನ ...ಕಾಲ್ವಿನ್ ಪರ್ಗೀಸ್.

...ೋಸಲಿನ್ ಅಕ್ಕನ ಮಗ ಕಾಲ್ವಿನ್ ಪರ್ಗೀಸ್ ...ಂದ ಕೇರಳ ಕುಟ್ಟಿಯಾದರೂ ಬಾಲ್ಯದಿಂದ ಚಿಕ್ಕಪ್ಪ ...ಉತ್ಪಪ್ಪನ ಬಗ್ಗೆ ಆದೆಂಥದೋ ಮೋಹ. ಈ ...ಯ ಫಲವಾಗೇ ಆಗಾಗ ಸುಂಟಿಕೊಪ್ಪದ ನಾಕೂರಿಗೆ ...ಪ್ಪನ ಮೂರ್ನಾಲ್ಕು ದಿನಗಳ ಕಾಲ ತೋಟದಲ್ಲೇ ...ಪ್ಪನ ಇದು ಬರುಬರುತ್ತ ಅತಿರೇಕದ ಮಟ್ಟಕ್ಕೆ ...ಕಿ ತಿವಿಯನ್ ಯುಡತಿಯೊಬ್ಬಳನ್ನು ಮದುವೆಯಾಗ ...ದ್ದ ಕಾಲ್ವಿನ್ ಚಿಕ್ಕಪ್ಪನ ಮೇಲಿನ ಪ್ರೀತಿಗೆ ಬದ್ಲು ...ಶ್ರೀ ಎಂಬ ಕೂರ್ಗಿ ಹುಡುಗಿಯನ್ನೇ

ಮದುವೆಯಾದ.

ಇದು ಕಾಲ್ವಿನ್ ಚಿಕ್ಕಮ್ಮ ಅಂದರೆ ವೇಣು ಪತ್ನಿ ರೋಸಲಿನ್ ಹೊಟ್ಟೆಯಲ್ಲಿ ಖಾರ ಕಲಿಸಿದಂತಾಗಿದೆ. ಮೊದಲೇ ಕ್ರೈಸ್ತ ಮತಭ್ರಾಂತೆ. ಇನ್ನು ತನ್ನ ಅಕ್ಕನ ಮಗ ಕಾಲ್ವಿನ್ ತಿವಿಯನ್ ಯುವತಿಯನ್ನು ಮದುವೆಯಾಗುವುದನ್ನು ಬಿಟ್ಟು ಕೂರ್ಗಿ ಮಂಜುಶ್ರೀಯ ಜೊತೆ ಮದುವೆಯಾಗಿದ್ದು ತನ್ನ ಪಾಲಿಗಾದ ದೊಡ್ಡ ಅವಮಾನವೆಂದೇ ಪರಿಗಣಿಸಿದ್ದಾಳೆ. ಹೀಗೆ ಬಿಟ್ಟರೆ ಗಂಡ ವೇಣು ತನ್ನ ಅಕ್ಕನ ಮಗನನ್ನೇ ಹಿಂದುವಾಗಿ ಮತಾಂತರ ಮಾಡಿಬಿಡು ತ್ಯಾನೆಂದು ಸೂಕ್ಷ್ಮ ಶಾಸ್ತಿ ಮಾಡುವ ಪಣ ತೊಟ್ಟೇ ಏಪ್ರಿಲ್ 19ರಂದು ಸಂಜೆ ಶುಂಟಿಕೊಪ್ಪದ ಬಂಗಲೆಗೆ ಬಂದಿದ್ದಾರೆ.

ನಾಕೂರಿನ ತೋಟಕ್ಕೆ ಬಂದಿದ್ದೇ ಪತಿ ವೇಣು ಜೊತೆ ಓಡಾಡಿಕೊಂಡಿದ್ದ ಮಂಜುಶ್ರೀ ಮತ್ತು ಕಾಲ್ವಿನ್



ವರ್ಗೀಸ್‌ರನ್ನು ಕಂಡ ರೋಸಲಿನ್‌ಗೆ ಪಿತ್ಥ ನೆತ್ತಿಗೇರಿದೆ. ಹಿಂದೆ ಮುಂದೆ ಮಲೆಯಾಳದಲ್ಲಿ ಅಕ್ಕನ ಮಗನನ್ನು ವಾಚಾಮಗೋಚರ ಬೈದಿದ್ದೇ ಮೊದಲು ಇಲ್ಲಿದ ಜಾಗ ಖಾಲಿ ಮಾಡು, ಇದು ನನ್ನ ಗಂಡನ ಮನೆ. ಇಲ್ಲಿ ನಿನಗೇನು ಕೆಲಸ... ಎಂದೆಲ್ಲ ರೋಸಲಿನ್ ಬೈದಿದ್ದಾಳೆ. ವಿಕಾಪಿಕೆ ಅಪ್ಪಲಿಸಿದ ಅಪಮಾನ ಆಘಾತಕ್ಕೆ ಕಾಲ್ವಿನ್ ರೊಚ್ಚಗೆದ್ದಿದ್ದಾನೆ. ಚಿಕ್ಕಮಗನನ್ನು ಹಿಡಿದದ್ದೇ ಎಳೆದಾಡಿದ್ದಾನೆ. ಹಿಡಿದು ನೆಲಕ್ಕೆ ದಬ್ಬಿದ್ದಾನೆ. ತನ್ನ ಕೈಲಾಗದ ಕೆಲಸವನ್ನು ಮಗನ ಸ್ಥಾನದಲ್ಲಿ ನಿಂತು ಮಾಡಿದ್ದಕ್ಕೆ ಪತಿ ವೇಣು ಕೂಡ ಚಪ್ಪಾಳೆ ತಟ್ಟುವು ಕೈ ಜೋಡಿಸಿದ್ದಾನೆ. ತಾಯಿ ರೋಸಲಿನ್ ಪಾಲಿಗೆ ಉಳಿದದ್ದು ಪೊಲೀಸರಿಗೆ ದೂರು ಕೊಡುವುದೊಂದೇ-

ಪಾಪ ರಾಬಿನ್ ಉತ್ಪಪ್ಪನ ಮಾನ ಮೂರುಕಿಟ್ಟಿಗೆ ಬಂದಂತಾಯ್ತು. ಹಠಮಾರಿ ತಂದೆ ಮತಭ್ರಾಂತ ತಾಯಿಯ ಮುದ್ದಿಗೆ ಉಳಿದ ವಿಕ್ಕೆಕ್ಕ ಆಯ್ಕೆಯೆಂದರೆ ಬತುಶಿ ಅಮ್ಮ ಕಿಕೆಟ್ ಆಗಿರಲೇಬೇಕಲ್ಲವೆ?

ರಾ.ಸೋಮನಾಥ್

ಕನ್ನಡಕ್ಕೊಂದು ಆಘಾತಕಾರಿ ತೀರ್ಪು

ವಿಶೇಷ ಲೇಖನ

ಸುಪ್ರೀಂಕೋರ್ಟಿನ ಈ ತೀರ್ಪಿನಿಂದ ಕನ್ನಡ ಅಥವಾ ಮಾತೃಭಾಷೆಗಳಿಗಷ್ಟೇ ಧಕ್ಕೆಯಾಗುವುದಿಲ್ಲ. ಈ ಭಾಷೆಗಳಲ್ಲಿ ಅಭಿವ್ಯಕ್ತಗೊಳ್ಳುವ ಸಾಹಿತ್ಯ, ಸಿನಿಮಾ, ಸಂಗೀತ ಮುಂತಾದ ಪ್ರಕಾರಗಳಿಗೆ ಮುಂದೊಂದು ದಿನ ಕೇಳುಗರು, ನೋಡುಗರು ಇಲ್ಲವಾಗಬಹುದಾದ ಅಥವಾ ತೀರಾ ಕಡಿಮೆಯಾಗಬಹುದಾದ ಸ್ಥಿತಿ ಬರುತ್ತದೆ. ಪ್ರಾಥಮಿಕ ಶಿಕ್ಷಣ ತಳಹದಿಯಾದ್ದರಿಂದ ಅಲ್ಲಿಯೇ ಮಾತೃಭಾಷೆ ರೂಢಿಸಿಕೊಳ್ಳದವರು ಮಾತೃಭಾಷೆ/ರಾಜ್ಯ ಭಾಷೆಗಳ ಅಭಿವ್ಯಕ್ತಿ ಮಾದರಿಗಳಿಗೆ ಮನಸ್ಸು ಕೊಡಲು ಹೇಗೆ ಸಾಧ್ಯ? ಹೀಗಾಗಿ ಸುಪ್ರೀಂಕೋರ್ಟ್ ತೀರ್ಪು ಭಾಷಿಕ ಮಾತ್ರವಾಗಿ ಅಲ್ಲ, ಸಾಂಸ್ಕೃತಿಕವಾಗಿಯೂ ನಕಾರಾತ್ಮಕ ಪರಿಣಾಮ ಬೀರುತ್ತದೆ.



ದಿನಾಂಕ 6.5.2014 ರಂದು ಸುಪ್ರೀಂಕೋರ್ಟಿನ ಸುವಿಧಾನ ಪೀಠವು ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷಾ ಮಾಧ್ಯಮವನ್ನು ಸರ್ಕಾರವು ಕಡ್ಡಾಯ ಮಾಡುವಂತಿಲ್ಲ ಎಂದು ತೀರ್ಪು ನೀಡಿದೆ. ಇದು ದೇಶದ ಎಲ್ಲ ಮಾತೃಭಾಷೆ ಹಾಗೂ ರಾಜ್ಯ ಭಾಷೆಗಳಿಗೆ ಆಘಾತಕಾರಿಯಾಗುವ ತೀರ್ಪು. ಕರ್ನಾಟಕ ಸರ್ಕಾರದ ಮೇಲ್ಮನವಿ ಅರ್ಜಿಯ ಮೇಲೆ ನೀಡಿದ ಈ ತೀರ್ಪು ಇದೇ ದೇಶದ ಪ್ರಾಥಮಿಕ ಶಿಕ್ಷಣ ಮತ್ತು ರಾಜ್ಯದ ಹಣ್ಣಿನ ಪ್ರಶ್ನೆಯಾಗಿ ಪರಿಣಮಿಸುತ್ತದೆ. ವಿಶೇಷ ಮತ್ತು ವಿಚಿತ್ರವೆಂದರೆ ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆ ಅಥವಾ ರಾಜ್ಯಭಾಷೆಯ ಮಾಧ್ಯಮ ಕಡ್ಡಾಯವಾಗಬೇಕೆಂದು ಸುಪ್ರೀಂಕೋರ್ಟಿನಲ್ಲಿ ಹೋರಾಡಿದ ಏಕೈಕ ರಾಜ್ಯವೆಂದರೆ ಕರ್ನಾಟಕ. ನಮ್ಮ ರಾಜ್ಯದ ಕೆಲವು ಕನ್ನಡಪರ ಚಿಂತಕರು ಮತ್ತು ಹೋರಾಟಗಾರರು ಭಾಷಾಭಿಮಾನಕ್ಕೆ ಏಕೈಕ ಉದಾಹರಣೆಯೆಂಬಂತೆ ಬಂಬಸುತ್ತ ಬಂದ ತಮಿಳುನಾಡಿನ ಅರ್ಜಿಯೂ ಸುಪ್ರೀಂಕೋರ್ಟಿನಲ್ಲಿ ಇತ್ತಾದರೂ ತಮಿಳುನಾಡಿನ (ಜಯಲಲಿತಾ) ಸರ್ಕಾರ ಈ ಅರ್ಜಿಯನ್ನು ಹಿಂಪಡೆದು ಕಾನೂನು ಹೋರಾಟವನ್ನು ಕೈಬಿಟ್ಟಿತು! ಆಂಗ್ಲ ಮಾಧ್ಯಮದವರಿಗೆ ಮುಕ್ತ ಅವಕಾಶ ನೀಡಲು ಸಿದ್ಧವಾಯಿತು. ಇನ್ನು ಆಂಧ್ರಪ್ರದೇಶದ ಒಂದು ಅರ್ಜಿಯು ಸುಪ್ರೀಂಕೋರ್ಟಿನಲ್ಲಿ ಇತ್ತಾದರೂ ತೆಲಂಗಾಣ ರಾಜ್ಯ ರಚನೆಯ ಸಮಸ್ಯೆಯಲ್ಲಿ ಸೆಣಸುತ್ತಿದ್ದ ಆ ರಾಜ್ಯಕ್ಕೆ ಈ ಅರ್ಜಿ ಮುಖ್ಯವಾಗಿರಲಿಲ್ಲ. ಕಡೆಗೆ ಉಳಿದದ್ದು ಕರ್ನಾಟಕದ ಮೇಲ್ಮನವಿಯ ಅರ್ಜಿ ಮಾತ್ರ.

ಒಂದರಿಂದ ನಾಲ್ಕನೇ ತರಗತಿಯ ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆ ಅಥವಾ ರಾಜ್ಯಭಾಷಾ ಮಾಧ್ಯಮ ಕಡ್ಡಾಯವಾಗಿರಬೇಕೆಂಬ ಕರ್ನಾಟಕದ ಕಾನೂನು ಹೋರಾಟಕ್ಕೆ ಒಂದು ಇತಿಹಾಸವಿದೆ.

ಆದು, ದೇವರಾಜ ಅರಸು ಅವರು ಮುಖ್ಯಮಂತ್ರಿಯವರಾಗಿದ್ದ ಕಾಲ. ಪೌಢಶಾಲೆಯಲ್ಲಿ ಪ್ರಥಮ ಭಾಷೆಯಾಗಿ ಕನ್ನಡವನ್ನೂ ಒಳಗೊಂಡಂತೆ ತಮಿಳು, ತೆಲುಗು ಮುಂತಾದ ಭಾಷೆಗಳ ಜೊತೆಗೆ ಸಂಸ್ಕೃತವೂ ಇತ್ತು. ಭಾಷಾ ಅಲ್ಪಸಂಖ್ಯಾತರಿಗೆ ಭಾಷಿಕ ರಕ್ಷಣೆ ಕೊಡಬೇಕೆಂಬುದು ಸಂವಿಧಾನದತ್ತ ನಿಯಮವಾದ್ದರಿಂದ ಆಯಾ ರಾಜ್ಯಗಳಲ್ಲಿರುವ ಅಲ್ಪಸಂಖ್ಯಾತರ ಭಾಷೆಗಳನ್ನು ಪ್ರಥಮ ಭಾಷೆಗಳ ಪಟ್ಟಿಯಲ್ಲಿ ಸೇರಿಸುವುದು ಒಂದು ಕಾನೂನಾತ್ಮಕ ಪದ್ಧತಿ. ಆದರೆ ಅಲ್ಪಸಂಖ್ಯಾತರು ಅವರದೇ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬೇಕೆಂಬ ಕಡ್ಡಾಯವೇನೂ ಇಲ್ಲ. ಇದೊಂದು ಸಂವಿಧಾನದತ್ತ ಅವಕಾಶ. ಈ ಭಾಷೆಗಳಿಂದ ಕನ್ನಡ ಭಾಷೆಗೆ ಧಕ್ಕೆಯಾಗಲಿಲ್ಲ; ಸಂಸ್ಕೃತದಿಂದ ಧಕ್ಕೆಯಾಗತೊಡಗಿತು. ಇದಕ್ಕೆ ಕಾರಣವಿತ್ತು. ಸಂಸ್ಕೃತವನ್ನು ತೆಗೆದುಕೊಂಡ ಪೌಢಶಾಲಾ ವಿದ್ಯಾರ್ಥಿಗಳು ಸಂಸ್ಕೃತ ಭಾಷೆಯಲ್ಲೇ ಉತ್ತರಿಸಬೇಕೆಂಬ ನಿಯಮವಿರಲಿಲ್ಲ. ಕನ್ನಡ ಅಥವಾ ಇಂಗ್ಲಿಷ್‌ನಲ್ಲೂ ಉತ್ತರಿಸಬಹುದಿತ್ತು. ಪ್ರಥಮ ಭಾಷೆಯೆನ್ನುವುದು ಭಾಷಾಪ್ರಧಾನ ಕಲಿಕೆಯಾಗಿದ್ದರೂ ಈ ರಿಯಾಯಿತಿಯಿತ್ತು. ಜೊತೆಗೆ ಸಂಸ್ಕೃತದ ಪಠ್ಯ ತುಂಬಾ ಸರಳ ಸುಲಭವಾಗಿತ್ತು. ಒಂದೆರಡು ವಾಕ್ಯಗಳಲ್ಲಿ ಉತ್ತರ ಕೊಟ್ಟರೂ ಪೂರ್ಣ ಅಂಕಗಳನ್ನು ಪಡೆಯುವುದು ಸಾಧ್ಯವಿತ್ತು. ಈ ಅಂಕಗಳನ್ನು ರ‍್ಯಾಂಕ್ ನೀಡಿಕೆಗೆ ಪರಿಗಣಿಸಲಾಗುತ್ತಿತ್ತು. ಹೀಗೆ ಸಂಸ್ಕೃತವು ಎಸ್.ಎಸ್.ಎಲ್.ಸಿಯಲ್ಲಿ ರ‍್ಯಾಂಕ್ ಪಡೆಯುವ ಒಂದು ಸುಲಭ ಸಾಧನವಾಗಿತ್ತು. ಇದರ ಫಲವಾಗಿ ಪೌಢಶಾಲೆಯಲ್ಲಿ ಪ್ರಥಮ ಭಾಷೆಯಾಗಿ ಕನ್ನಡವನ್ನು ತೆಗೆದುಕೊಳ್ಳುವವರ ಸಂಖ್ಯೆ ಕಡಿಮೆಯಾಗತೊಡಗಿತು. ಒಂದು ಉದಾಹರಣೆ ಕೊಡುವುದಾದರೆ ಪ್ರತಿಷ್ಠಿತವೆನ್ನಿಸಿಕೊಂಡ ಪೌಢಶಾಲೆಯೊಂದರಲ್ಲಿ ಕನ್ನಡ ಪ್ರಥಮ ಭಾಷೆಯ ಒಂದು ಸೆಕ್ಷನ್ ಇದ್ದರೆ ಸಂಸ್ಕೃತ ಪ್ರಥಮ ಭಾಷೆಯ ನಾಲ್ಕು ಸೆಕ್ಷನ್‌ಗಳಿದ್ದವು. ಪೌಢಶಾಲೆಯಲ್ಲಿ ಕನ್ನಡ ಓದುವವರ ಸಂಖ್ಯೆ ಕಡಿಮೆಯಾಗುತ್ತಿರುವುದಕ್ಕೆ ಆತಂಕಪಟ್ಟುಕೊಂಡ ಅನೇಕ ಸಾಹಿತಿ-ಕಲಾವಿದರು, ಶಿಕ್ಷಣ ತಜ್ಞರು ಈ ಬಗ್ಗೆ ಸಾರ್ವಜನಿಕವಾಗಿ ಮಾತಾಡತೊಡಗಿದರು. ಸರ್ಕಾರದ ಗಮನಕ್ಕೂ ತಂದರು. ಪಠ್ಯಕ್ರಮದಲ್ಲಿ ಪ್ರಥಮ ಭಾಷೆಯೆನ್ನುವುದು ಮಾತೃಭಾಷೆಯಾಗಿರಬೇಕು. ಆದರೆ ಯಾರ ಮಾತೃಭಾಷೆಯೂ ಅಲ್ಲದ ಸಂಸ್ಕೃತವನ್ನು ಪ್ರಥಮ ಭಾಷೆಗಳ ಪಟ್ಟಿಯಲ್ಲಿ ಸೇರಿಸಿರುವುದು ತಪ್ಪು ಎಂಬ ತಾತ್ವಿಕತೆಯನ್ನೂ ಪ್ರಸ್ತಾಪಿಸಲಾಯಿತು. ಆಗ ಮುಖ್ಯಮಂತ್ರಿಯವರಾಗಿದ್ದ ದೇವರಾಜ ಅರಸು ಅವರು ಕೂಡಲೇ ಸ್ಪಂದಿಸಿದರು. ಪೌಢಶಾಲೆ ಪಠ್ಯಕ್ರಮದ ಪ್ರಥಮ ಭಾಷೆ ಪಟ್ಟಿಯಲ್ಲಿದ್ದ ಸಂಸ್ಕೃತವನ್ನು ಮೂರನೇ ಭಾಷೆಯ ಪಟ್ಟಿಗೆ ಸೇರಿಸುವ ತೀರ್ಮಾನ ಕೈಗೊಂಡರು. ಸರ್ಕಾರ ಆದೇಶ ಹೊರಡಿಸಿತು. ಯಾವ ಒತ್ತಡಕ್ಕೂ ಮಣಿಯಲಿಲ್ಲ. ಸಂಸ್ಕೃತವು ಪ್ರಥಮ ಭಾಷೆಯ ಪಟ್ಟಿಯಲ್ಲಿರುವುದನ್ನು ವಿರೋಧಿಸಿದವರು (ನನ್ನನ್ನೂ ಒಳಗೊಂಡಂತೆ) ಸಂಸ್ಕೃತ ಕಲಿಕೆಯ ವಿರೋಧಿಗಳಾಗಿರಲಿಲ್ಲ. ಪ್ರಥಮ ಭಾಷೆಗಳ ಪಟ್ಟಿಯಲ್ಲಿ ಚಾಲ್ತಿಯಲ್ಲಿರುವ ಜನಭಾಷೆಗಳು ಮಾತ್ರ ಇರಬೇಕೆಂಬ ತತ್ವ ನಮ್ಮದಾಗಿತ್ತು.

ಮುಂದೆ, ದೇವರಾಜ ಅರಸು ಅವರು ಮುಖ್ಯಮಂತ್ರಿ ಸ್ಥಾನ ತ್ಯಜಿಸಬೇಕಾಯಿತು. ಗುಂಡೂರಾವ್ ಅವರು ಮುಖ್ಯಮಂತ್ರಿಯಾದರು. ಸಂಸ್ಕೃತ ಪರವಾದವರು ಕೂಡಲೇ ಕಾರ್ಯಪ್ರವೃತ್ತರಾದರು. ಗುಂಡೂರಾಯರು ಮೂರನೇ ಭಾಷೆಯಾಗಿದ್ದ ಸಂಸ್ಕೃತವನ್ನು ಮತ್ತೆ ಪ್ರಥಮ ಭಾಷೆ ಮಾಡಿದರು. ಇದಕ್ಕೆ ಸಾಕಷ್ಟು ವಿರೋಧ ವ್ಯಕ್ತವಾಯಿತು. ಬಂಡಾಯ ಸಾಹಿತ್ಯ ಸಂಘಟನೆಯ ಕನ್ನಡದ ಐವತ್ತಕ್ಕೂ ಹೆಚ್ಚು ಸಾಹಿತಿಗಳ ಸಹಿ ಸಂಗ್ರಹ ಮಾಡಿ ಇಪ್ಪತ್ತೈದು ಸಾವಿರ ಕರಪತ್ರ ಮುದ್ರಿಸಿ ರಾಜ್ಯಾದ್ಯಂತ ಹಂಚಲಾಯಿತು. 'ಕನ್ನಡ ಹೋರಾಟ ವಾರ' ಎಂಬ ಒಂದು ವಾರದ ಕಾರ್ಯಕ್ರಮ ನಡೆಸಿತು. ಬೆಂಗಳೂರು, ಧಾರವಾಡ ಮುಂತಾದ ಕಡೆಯ ಕನ್ನಡ ಪರ ಸಂಘಟನೆಗಳೂ ಈ ಸರ್ಕಾರದ ಆದೇಶವನ್ನು ಸಮರ್ಥವಾಗಿ ಪ್ರತಿರೋಧಿಸಿದವು. ರಾಜ್ಯಾದ್ಯಂತ ಹಬ್ಬುತ್ತಿದ್ದ ಪ್ರತಿರೋಧಕ್ಕೆ ಉತ್ತರವಾಗಿ ಗುಂಡೂರಾವ್ ಸರ್ಕಾರವು ಪೌಢಶಾಲೆಯ ಭಾಷಾ ಪಠ್ಯಕ್ರಮದ ಬಗ್ಗೆ ಪರಿಶೀಲಿಸಿ ಶಿಫಾರಸ್ಸು ಮಾಡಲು ಡಾ. ವಿ. ಕೃ. ಗೋಕಾಕ್ ನೇತೃತ್ವದ ಸಮಿತಿ ರಚಿಸಿದರು. 'ಗೋಕಾಕ್ ಸಮಿತಿ'ಯು ಪ್ರಥಮ ಭಾಷೆ ಪಟ್ಟಿಯಿಂದ ಸಂಸ್ಕೃತವನ್ನು ತೆಗೆದು ಹಾಕಿದ್ದಲ್ಲದೆ ಕನ್ನಡದ ಜೊತೆಗಿದ್ದ ಉಳಿದ ಭಾಷೆಗಳನ್ನೂ ತೆಗೆದು ಹಾಕಿತು. ಕನ್ನಡವೊಂದೇ ಪ್ರಥಮ ಭಾಷೆಯಾಗಿರಬೇಕು ಎಂದು ಶಿಫಾರಸ್ಸು ಮಾಡಿತು. ಜೊತೆಗೆ ಮಾತೃಭಾಷಾ ಮಾಧ್ಯಮದ ಬಗ್ಗೆಯೂ ಪ್ರಸ್ತಾಪಿಸಿತು.

'ಗೋಕಾಕ್ ವರದಿ'ಯನ್ನು ಜಾರಿಗೆ ತರಬೇಕೆಂದು ಮೊದಲು ಒತ್ತಾಯ ತಂದವರು ಸಾಹಿತಿ-ಕಲಾವಿದರು. ಬೆಂಗಳೂರು, ಧಾರವಾಡಗಳಲ್ಲಿ ಸತ್ಯಾಗ್ರಹ ಶುರುವಾಯಿತು. ಈ ಘಟ್ಟದಲ್ಲಿ ಡಾ. ರಾಜ್‌ಕುಮಾರ್ ಚಳವಳಿಗೆ ಧುಮುಕಿದರು. ರಾಜ್ಯಾದ್ಯಂತ ಸಂಚರಿಸಿ ಕನ್ನಡ ಪರ 'ಅಲೆ'ಗೆ ಕಾರಣರಾದರು. ಸರ್ಕಾರವು ಗೋಕಾಕ್ ವರದಿಗನುಗುಣವಾಗಿ 20.7.1982 ರಂದು ಆದೇಶ ಹೊರಡಿಸಿತು. ಇದರ ಪ್ರಕಾರ ಪೌಢಶಾಲೆಗಳಲ್ಲಿ ಕನ್ನಡವೊಂದೇ ಪ್ರಥಮ ಭಾಷೆ. ಒಂದರಿಂದ ನಾಲ್ಕನೇ ತರಗತಿವರೆಗೆ ಮಾತೃಭಾಷಾ ಮಾಧ್ಯಮ. ಕನ್ನಡೇತರ ಮಾಧ್ಯಮ ಶಾಲೆಗಳಲ್ಲಿ ಮೂರನೇ ತರಗತಿಯಿಂದ ಕನ್ನಡ ಐಚ್ಛಿಕ ಭಾಷೆ. ಆದರೆ ಈ ಆದೇಶವನ್ನು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು. ಕನ್ನಡಕ್ಕೆ ಸಂಬಂಧಿಸಿದ ಕಾನೂನು ಹೋರಾಟ ಆರಂಭವಾಯಿತು.

ಸಾಕಷ್ಟು ಕಾಲ ವಿಚಾರಣೆ ನಡೆದು ರಾಜ್ಯದ ಉಚ್ಚ ನ್ಯಾಯಾಲಯವು 20.7.1982 ರ ಸರ್ಕಾರಿ ಆದೇಶವನ್ನು ರದ್ದು ಮಾಡಿತು. ಈ ಆದೇಶವು ಸಂವಿಧಾನದ 14, 29 (1) ಮತ್ತು 30 (1) ನೇ ಪರಿಚ್ಛೇದಗಳನ್ನು ಉಲ್ಲಂಘಿಸಿದೆ ಎಂದು ತೀರ್ಪು ನೀಡಿತು. ಸಂವಿಧಾನದ 14ನೇ ಪರಿಚ್ಛೇದವು ಸಮಾನತೆಯ ತತ್ವವನ್ನೂ 29 (1) ಮತ್ತು 30 (1) ನೇ ಪರಿಚ್ಛೇದಗಳು ಅಲ್ಪಸಂಖ್ಯಾತರ ಪರವಾದ ಆಶಯವನ್ನೂ ಪ್ರತಿಪಾದಿಸುತ್ತವೆ. ಕನ್ನಡವೊಂದೇ ಪ್ರಥಮ ಭಾಷೆಯಾಗಿ ಕಡ್ಡಾಯವಾದರೆ ರಾಜ್ಯದಲ್ಲಿರುವ ಅಲ್ಪಸಂಖ್ಯಾತರಿಗೆ ಪ್ರಥಮ ಭಾಷೆಯಾಗಿ ಅವರವರ ಭಾಷೆಯನ್ನು ಕಲಿಯುವ ಹಕ್ಕನ್ನು ವಂಚಿಸಲಾಗುತ್ತದೆಯೆಂಬ ಅಂಶ ಇಲ್ಲಿ ಮುಖ್ಯವಾಯಿತು. ಆಗ ಸರ್ಕಾರವು 19.6.1989 ರಂದು ಹೊಸ ಆದೇಶವನ್ನು ಹೊರಡಿಸಿ ಅಲ್ಪಸಂಖ್ಯಾತರ ಭಾಷೆಗಳಿಗೆ ಅವಕಾಶ ಕಲ್ಪಿಸಿತು. (ಈ ನಡುವೆ ಸಂಸ್ಕೃತವೂ ಮತ್ತೆ ಪ್ರಥಮ ಭಾಷೆಯ ಪಟ್ಟಿಗೆ ಸೇರಿಬಿಟ್ಟಿತು!) ಜೊತೆಗೆ ಮಾತೃಭಾಷಾ ಮಾಧ್ಯಮದ ನಿಯಮವನ್ನು ಮುಂದುವರಿಸಿತು. ಸರ್ಕಾರದ ಈ ತೀರ್ಮಾನ ಉಚ್ಚನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿತ್ತು.

ಆದರೆ ಮಾತೃಭಾಷಾ ಮಾಧ್ಯಮದ ವಿಷಯವನ್ನು ಪ್ರಶ್ನಿಸಿ ಕೆಲವರು (ಖಾಸಗಿ ಶಿಕ್ಷಣ ಸಂಸ್ಥೆಯವರು) ಸುಪ್ರೀಂಕೋರ್ಟಿಗೆ ಹೋದರು. 1993 ರಲ್ಲಿ ತೀರ್ಪು ನೀಡಿದ ಸುಪ್ರೀಂಕೋರ್ಟು ಕರ್ನಾಟಕ ಸರ್ಕಾರದ 19.6.1989 ರ ಆದೇಶವನ್ನು ಎತ್ತಿ ಹಿಡಿಯಿತು. ಅಷ್ಟೇ ಅಲ್ಲ, 'ಭಾಷಾನೀತಿಯನ್ನು ಹೇಗೆ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕೆಂದು ರಾಜ್ಯಕ್ಕೆ ತಿಳಿದಿದೆ. ಈ ವಿಚಾರದಲ್ಲಿ ನ್ಯಾಯಾಲಯವು ಹಸ್ತಕ್ಷೇಪ ಮಾಡುವುದು ಸರಿಯಲ್ಲ' ಎಂದೂ ಹೇಳಿತು.

ಸುಪ್ರೀಂಕೋರ್ಟಿನ ತೀರ್ಪಿನ ನಂತರ 29.4.1994 ರಲ್ಲಿ ಕರ್ನಾಟಕ ಸರ್ಕಾರವು ಹೊಸ ಆದೇಶವನ್ನು ಹೊರಡಿಸಿತು. ಈ ಆದೇಶದ ಪ್ರಕಾರ ಒಂದರಿಂದ ನಾಲ್ಕನೇ ತರಗತಿಯವರೆಗೆ ಮಾತೃಭಾಷಾ ಮಾಧ್ಯಮ, ಕನ್ನಡೇತರ ಶಾಲೆಗಳಲ್ಲಿ ಮೂರನೇ ತರಗತಿಯಿಂದ ಕನ್ನಡ ಐಚ್ಛಿಕ ಕಲಿಕೆ, ಐದನೇ ತರಗತಿಯಿಂದ ಯಾವುದೇ ಭಾಷಾ ಮಾಧ್ಯಮಕ್ಕೆ ಮುಕ್ತ ಅವಕಾಶ, ಸಿಬಿಎಸ್‌ಇ, ಐಸಿಎಸ್‌ಇ ಶಾಲೆಗಳಿಗೆ ರಾಜ್ಯ ಸರ್ಕಾರದ ನಿರಾಕ್ಷೇಪಣಾ ಪತ್ರ ಕಡ್ಡಾಯ-ಈ ಅಂಶಗಳು ಇದ್ದವು. ಸಹ್ಯಾದ್ರಿ ಸಂಸ್ಥೆಯು ಈ ಆದೇಶವನ್ನು ಪ್ರಶ್ನಿಸಿ ಸುಪ್ರೀಂಕೋರ್ಟಿಗೆ ಹೋದಾಗ 1999 ರಲ್ಲಿ ಸುಪ್ರೀಂಕೋರ್ಟ್ 'ಈ ಪ್ರಕರಣವೇ ನಿರರ್ಥಕ' ಎಂದು ಅರ್ಜಿಯನ್ನು ತಳ್ಳಿ ಹಾಕಿತು.

ಅಂದರೆ 1993 ಮತ್ತು 1999 ರಲ್ಲಿ ಸುಪ್ರೀಂಕೋರ್ಟು- ಒಂದರಿಂದ ನಾಲ್ಕನೇ ತರಗತಿಯವರೆಗೆ ಮಾತೃಭಾಷಾ ಮಾಧ್ಯಮವನ್ನು ಕಡ್ಡಾಯ ಮಾಡುವುದಕ್ಕೆ ಒಪ್ಪಿಗೆ ನೀಡಿತ್ತು.

ಆದರೆ ಕಾನೂನು ಹೋರಾಟ ನಿಲ್ಲಲಿಲ್ಲ. ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಒಳಗೊಂಡ 'ಕುಸ್ಮಾ' ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ 1994 ಸರ್ಕಾರಿ ಆದೇಶವನ್ನು ಮತ್ತೆ ಪ್ರಶ್ನಿಸಿದ್ದು ವಿಚಾರಣೆ ಮುಂದುವರೆಯಿತು. 3.7.2008 ರಂದು ತೀರ್ಪು ನೀಡಿದ ರಾಜ್ಯದ ಉಚ್ಚ ನ್ಯಾಯಾಲಯವು 'ಮಾತೃಭಾಷಾ ಮಾಧ್ಯಮವನ್ನು ಸರ್ಕಾರಿ ಮತ್ತು ಸರ್ಕಾರ ಅನುದಾನಿತ ಶಾಲೆಗಳಿಗೆ ಮಾತ್ರ ಕಡ್ಡಾಯ ಮಾಡಬಹುದು. ಅನುದಾನರಹಿತ ಖಾಸಗಿ ಶಾಲೆಗಳಿಗೆ ಕಡ್ಡಾಯ ಮಾಡುವಂತಿಲ್ಲ' ಎಂದು ಹೇಳಿತು. ಮಾಹಿತಿಗಾಗಿ ಹೇಳುವುದಾದರೆ ರಾಜ್ಯದಲ್ಲಿ 22,105 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಿವೆ. 22,567 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿವೆ. 222 ಅನುದಾನಿತ ಕಿರಿಯ ಪ್ರಾಥಮಿಕ ಶಾಲೆಗಳೂ 2586 ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಗಳೂ ಅಸ್ತಿತ್ವದಲ್ಲಿವೆ. ಅನುದಾನರಹಿತ ಕಿರಿಯ ಪ್ರಾಥಮಿಕ ಶಾಲೆಗಳು 3486 ಮತ್ತು ಅನುದಾನರಹಿತ ಹಿರಿಯ ಪ್ರಾಥಮಿಕ ಶಾಲೆಗಳೂ 825. ಕಾರ್ಪೊರೇಷನ್ ಶಾಲೆಗಳು ಒಟ್ಟು 711 ಇದ್ದು ಇದರಲ್ಲಿ ಕಿರಿಯ 135, ಹಿರಿಯ 576 ಪ್ರಾಥಮಿಕ ಶಾಲೆಗಳು ಜೊತೆಗೆ ಮೊರಾರ್ಜಿ, ನವೋದಯ, ಕಿತ್ತೂರು ಚೆನ್ನಮ್ಮ ಶಾಲೆಗಳಿವೆ.

ಅಲ್ಪಸಂಖ್ಯಾತ ಮಾತೃಭಾಷಾ ಮಾಧ್ಯಮದ ಶಾಲೆಗಳು ಹೀಗಿವೆ: ಉರ್ದು: ಕಿರಿಯ-2178, ಹಿರಿಯ-197, ತೆಲುಗು: ಕಿರಿಯ-49, ಹಿರಿಯ-58, ತಮಿಳು ಕಿರಿಯ-63, ಹಿರಿಯ: 119, ಮರಾಠಿ: ಕಿರಿಯ-43, ಹಿರಿಯ: 554, ಮಲೆಯಾಳಿ: ಕಿರಿಯ: 04, ಹಿರಿಯ-

2008 ರಲ್ಲಿ ನೀಡಿದ ತೀರ್ಪಿನಲ್ಲಿ ರಾಜ್ಯ



ನ್ಯಾಯಾಲಯವು ಅಲ್ಪಸಂಖ್ಯಾತರಿಗಿರುವ ಶೈಕ್ಷಣಿಕ ಹಕ್ಕುಗಳನ್ನು ಪ್ರಸ್ತಾಪಿಸಿದ್ದರಿಂದ ಮತ್ತು ಸರ್ಕಾರಿ ಖಾಸಗಿ ಶಾಲೆಗಳನ್ನು ಪ್ರತ್ಯೇಕವಾಗಿ ನೋಡಿದ್ದರಿಂದ ಮಾಹಿತಿಗಾಗಿ ಅರ್ಜಿಗಳನ್ನು ನೀಡಿದ್ದೇನೆ. ಅಂದರೆ ಕೋರ್ಟಿನ ತೀರ್ಪು ಪ್ರತಿಯಾಗಿ ಖಾಸಗಿಯವರ ಪರವಾಗಿದೆ. ಶೈಕ್ಷಣಿಕ ವಿವೇಕದ ಕೊರತೆಯನ್ನು ನಿರ್ಲಕ್ಷಿಸಿದೆ. ಉಚ್ಚ ನ್ಯಾಯಾಲಯದ ಈ ತೀರ್ಪು 1994 ರ ಸರ್ಕಾರಿ ಆದೇಶವನ್ನು ರದ್ದುಗೊಳಿಸಲು ಮುಖ್ಯವಾಗಿ, ಸಂವಿಧಾನದ 19(1)ಜ, 26 ಮತ್ತು 30(1) ಪರಿಚ್ಛೇದಗಳನ್ನು ಬಳಸಿಕೊಳ್ಳುತ್ತದೆ. 19(1) ಜಿ ಪರಿಚ್ಛೇದವು ಪ್ರತಿಯ ನಾಗರಿಕರು ಯಾವುದೇ ಉದ್ಯೋಗ, ವೃತ್ತಿ ವ್ಯಾಪಾರ ಮೊದಲಾದ ವ್ಯವಹಾರಗಳನ್ನು ನಡೆಸುವ ಹಕ್ಕನ್ನು ನೀಡುತ್ತದೆ'. ಈ ಹಕ್ಕನ್ನು ಶಿಕ್ಷಣ ಕ್ಷೇತ್ರಕ್ಕೆ ಅನ್ವಯಿಸುವುದು ಸರಿಯೆ? ಪ್ರಾಥಮಿಕ ಶಿಕ್ಷಣ ಕ್ಷೇತ್ರವೂ ಒಂದು ವ್ಯಾಪಾರ ಎಂದು ಸ್ಪಷ್ಟವಾಗಿ ಒಪ್ಪಿಕೊಂಡಂತಾಗಲಿಲ್ಲವೆ?

ಇನ್ನು, 26 ನೇ ಪರಿಚ್ಛೇದವು ಧಾರ್ಮಿಕ ಆಚಾರಗಳನ್ನು ನಿರ್ವಹಿಸುವ ಸ್ವಾತಂತ್ರ್ಯವನ್ನು ನೀಡುತ್ತದೆ. 30(1) ನೇ ಪರಿಚ್ಛೇದವು-ಅಲ್ಪಸಂಖ್ಯಾತರು ತಮ್ಮ ಇಚ್ಛೆಯ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿ ಆಡಳಿತ ನಡೆಸುವ ಹಕ್ಕನ್ನು ನೀಡುತ್ತದೆ. ಮಾತೃಭಾಷಾ ಮಾಧ್ಯಮವು ಅಲ್ಪಸಂಖ್ಯಾತರ ಭಾಷಾ ಮಾಧ್ಯಮಕ್ಕೂ ಮನ್ನಣೆ ಕೊಡುತ್ತದೆಯಾದ್ದರಿಂದ

ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆ/ರಾಜ್ಯ ಭಾಷೆ ಮಾಧ್ಯಮದಲ್ಲಿ ಕಲಿತರೆ ಮಕ್ಕಳ ಭವಿಷ್ಯಕ್ಕೆ ಧಕ್ಕೆಯಾಗುತ್ತದೆಯೆಂದೂ ಉದ್ಯೋಗ ಸಿಗುವುದಿಲ್ಲವೆಂದೂ ಪೋಷಕರು ಭಾವಿಸುವುದು ಸಹ ಸರಿಯಲ್ಲ. ಯಾಕೆಂದರೆ, ಒಂದರಿಂದ ನಾಲ್ಕನೆಯ ತರಗತಿಯವರೆಗೆ ಯಾವ ಮಾಧ್ಯಮದಲ್ಲಿ ವ್ಯಾಸಂಗ ಮಾಡಲಾಗಿದೆಯೆಂಬ ಆಧಾರದಲ್ಲಿ ಯಾರೂ ಉದ್ಯೋಗ ಕೊಡುವುದಿಲ್ಲ. ಉದ್ಯೋಗವೊಂದಕ್ಕೆ ಬೇಕಾದ ವಿದ್ಯಾರ್ಹತೆ ಮತ್ತು ಪರಿಣತಿಯನ್ನು ಮಾತ್ರ ಪರಿಗಣಿಸಲಾಗುತ್ತದೆ. ಇಷ್ಟಕ್ಕೂ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಭಾಷೆಯನ್ನು ಒಂದು ವಿಷಯವಾಗಿ ಕಲಿಸುವ ಅವಕಾಶ ಕರ್ನಾಟಕದಲ್ಲಿರುವುದರಿಂದ ಮುಂದೆ ಇಂಗ್ಲಿಷ್ ಮಾಧ್ಯಮಕ್ಕೆ ಹೋಗಲು ಅನುಕೂಲವೂ ಆಗುತ್ತದೆ. ಒಂದರಿಂದ ನಾಲ್ಕನೇ ತರಗತಿಯವರೆಗೆ ಮಾತೃಭಾಷಾ ಅಥವಾ ರಾಜ್ಯಭಾಷಾ ಮಾಧ್ಯಮ ಮತ್ತು ಒಂದು ಪಠ್ಯ ವಿಷಯವಾಗಿ ಇಂಗ್ಲಿಷ್ -ಎಂಬ ಪದ್ಧತಿ ಖಂಡಿತ ಯಾರ ಹಕ್ಕಿಗೂ ಉದ್ಯೋಗಕ್ಕೂ ಧಕ್ಕೆ ತರುವುದಿಲ್ಲ.

ತನ್ನ ತೀರ್ಪಿಗೆ ಅದು ಬಳಸಿಕೊಂಡಿರುವ ಸಂವಿಧಾನದ ಪರಿಚ್ಛೇದ 19(1), ಮುಖ್ಯವಾಗಿ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ್ದು. ಈ ದೇಶದ ನಾಗರಿಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಮತ್ತು ವಿವಿಧ ಮಾಧ್ಯಮಗಳಲ್ಲಿ ಅಭಿವ್ಯಕ್ತಿಸುವ ಸ್ವಾತಂತ್ರ್ಯವನ್ನು ನೀಡುವ ಈ ಪರಿಚ್ಛೇದವನ್ನು ಶಿಕ್ಷಣದ ಆಯ್ಕೆಯ ಹಕ್ಕಿಗೆ ಅಳವಡಿಸಿದ್ದು ಎಷ್ಟರಮಟ್ಟಿಗೆ ಸರಿ ಎಂದು ಪ್ರಶ್ನಿಸುವುದು ಅಗತ್ಯ. ಪೋಷಕರು ತಮ್ಮ ಮಕ್ಕಳಿಗೆ ಯಾವ ಭಾಷಾ ಮಾಧ್ಯಮ ಬೇಕೆಂದು ಆಯ್ಕೆ ಮಾಡಿಕೊಳ್ಳುವ ಹಕ್ಕು ಹೊಂದಿದ್ದಾರೆಂಬ ತೀರ್ಪಿಗೂ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿಗೂ ಇರುವ ಸಂಬಂಧ (ಒಂದು ವೇಳೆ ಈ ಸಂಬಂಧ ಇದೆ ಎನ್ನುವುದಾದರೆ) ತೀರಾ ತೆಳುವಾದದ್ದು. 19(1) ನೇ ಪರಿಚ್ಛೇದವು ಮುಖ್ಯವಾಗಿ ಅಭಿಪ್ರಾಯ-ಅಭಿವ್ಯಕ್ತಿಗೆ ಸಂಬಂಧಿಸಿದ್ದು; ಭಾಷೆ ಮತ್ತು ಶಿಕ್ಷಣ ನೀತಿಯ ಆಯ್ಕೆಗೆ ಸಂಬಂಧಿಸಿದ್ದಲ್ಲ ಎಂದು ನನ್ನ ನಮ್ರ ತಿಳಿವಳಿಕೆ. ಅಲ್ಪಸಂಖ್ಯಾತರ ಭಾಷೆಗೆ ಸಂಬಂಧಿಸಿದ 350 (ಎ) ಪರಿಚ್ಛೇದವನ್ನೂ ತನ್ನ ತೀರ್ಪಿಗಾಗಿ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳು ಬಳಸಿಕೊಂಡಿದ್ದಾರೆ. ಕರ್ನಾಟಕ ಸರ್ಕಾರದ 1994 ರ ಆದೇಶವು ಅಲ್ಪಸಂಖ್ಯಾತರ ಹಕ್ಕು ಮತ್ತು ಆಯ್ಕೆಗಳಿಗೆ ಧಕ್ಕೆ ತರುವುದಿಲ್ಲ. ಈ ಆದೇಶಕ್ಕೆ ಸ್ವತಃ ಸುಪ್ರೀಂಕೋರ್ಟ್ (ಬೇರೆ ನ್ಯಾಯಾಧೀಶರು) 1993 ಮತ್ತು 1999 ರಲ್ಲಿ ಮನ್ನಣೆ ನೀಡಿತ್ತು ಎಂಬುದನ್ನು ಇಲ್ಲಿ ನೆನೆಯಬಹುದು. ಸುಪ್ರೀಂಕೋರ್ಟಿನಿಂದಲೇ ಎರಡು ಸಾರಿ ಮಾನ್ಯತೆ ಪಡೆದ ಆದೇಶವು ನ್ಯಾಯಾಧೀಶರು ಬದಲಾದ ಕೂಡಲೇ ರದ್ದಾಗುತ್ತದೆ ಅಂದರೆ ಏನರ್ಥ? 1993 ಮತ್ತು 1999 ರಲ್ಲಿ ಮೂಲಭೂತ ಹಕ್ಕಿಗೆ ಧಕ್ಕೆ ತಾರದೆ ಇದ್ದ ಆದೇಶ ಈಗ ತಂದುಬಿಟ್ಟಿತೆ? ಹಾಗಾದರೆ ನ್ಯಾಯಾಲಯದ ತೀರ್ಪುಗಳು ನ್ಯಾಯಾಧೀಶರ ವೈಯಕ್ತಿಕ ಅಭಿಪ್ರಾಯಕ್ಕನುಗುಣವಾಗಿ ಬರುತ್ತವೆಯೇ? ಇಂಥ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ.

ನಮ್ಮದು ಒಕ್ಕೂಟ ವ್ಯವಸ್ಥೆ ಭಾಷಾವಾರು ಪ್ರಾಂತ್ಯಗಳುಳ್ಳ ದೇಶ. ಭಾಷಾವಾರು ಪ್ರಾಂತ್ಯ ಮತ್ತು ಒಕ್ಕೂಟ ಕಲ್ಪನೆಯ ಹಿಂದಿನ ಆಶಯವೇನು ಎಂಬುದು ಇಲ್ಲಿ ಮುಖ್ಯವಲ್ಲವೇ? ಜೊತೆಗೆ ಇನ್ನೊಂದು ಅಂಶವನ್ನೂ ಇಲ್ಲಿ ಗಮನಿಸಬೇಕು: ಸಂವಿಧಾನದ ಪ್ರಕಾರ ಶಿಕ್ಷಣವು ರಾಜ್ಯ ಮತ್ತು ಕೇಂದ್ರ ಸರ್ಕಾರ- ಎರಡಕ್ಕೂ ಸಂಬಂಧಿಸಿದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರತಿ ರಾಜ್ಯವೂ ಒಂದು ಅಧಿನಿಯಮವನ್ನು ರೂಪಿಸಿರುತ್ತದೆ. ವಸ್ತುಸ್ಥಿತಿ ಹೀಗಿರುವಾಗ ಕಡೇ ಪಕ್ಷ ಪ್ರಾಥಮಿಕ ಶಿಕ್ಷಣದ ಸ್ವರೂಪವನ್ನು ನಿರ್ಧರಿಸುವ ಹಕ್ಕು-ಅಧಿಕಾರ ರಾಜ್ಯಗಳಿಗಿಲ್ಲವೇ? ವೈಯಕ್ತಿಕ ಅಭಿಪ್ರಾಯದ ಹಕ್ಕನ್ನು ಮುಂದುಮಾಡಿ ರಾಜ್ಯದ ಶೈಕ್ಷಣಿಕ ಹಕ್ಕನ್ನು ಕಿತ್ತುಕೊಳ್ಳಬಹುದೇ? ಇಷ್ಟಕ್ಕೂ ರಾಜ್ಯದ ಶೈಕ್ಷಣಿಕ ಹಕ್ಕು ಒಬ್ಬ ಮುಖ್ಯಮಂತ್ರಿಯದಲ್ಲ, ತಜ್ಞರನ್ನೂ ಒಳಗೊಂಡಂತೆ ವಿವಿಧ ಹಂತದ ಚಿಂತನೆಗೊಳಗಾಗಿ ಶಾಸನಾತ್ಮಕ ಅಂಗೀಕಾರ ಪಡೆದ ಹಕ್ಕು ಮತ್ತು ಅಧಿಕಾರ.

ಒಟ್ಟಿನಲ್ಲಿ ನ್ಯಾಯಾಲಯಗಳೂ (ನ್ಯಾಯಾಧೀಶರು?) ಜಾಗತೀಕರಣದ ಫಲವಾದ ಖಾಸಗೀಕರಣಕ್ಕೆ ಕುಮ್ಮಕ್ಕು ಕೊಡುತ್ತಿರುವ ಸ್ಪಷ್ಟ ಸೂಚನೆಗಳು ಕಂಡು ಬರುತ್ತಿವೆ. ಇದು ಎಷ್ಟರಮಟ್ಟಿಗೆ ಇದೆಯೆಂದರೆ, ವಾದ-ಪ್ರತಿವಾದ ಪೂರ್ಣವಾಗುವವರೆಗೂ ಕಾಯದೆ ನಡುನಡುವೆಯೇ ಅಡ್ಡ ಬಂದು ತಮ್ಮ ಅಭಿಪ್ರಾಯವನ್ನು ಹೇಳುವ ಪ್ರವೃತ್ತಿಯನ್ನು ಕೆಲ ನ್ಯಾಯಾಧೀಶರು ತೋರಿಸುತ್ತಿದ್ದಾರೆ. ಇದು ಸರಿಯಾದ ಕ್ರಮವೆ ಎಂಬ ಬಗ್ಗೆಯೂ ಚರ್ಚೆಯಾಗಬೇಕಾಗಿದೆ.

ಸುಪ್ರೀಂಕೋರ್ಟಿನ ಈ ತೀರ್ಪಿನಿಂದ

ವಿಶೇಷ ಲೇಖನ

ಕನ್ನಡ ಅಥವಾ ಮಾತೃಭಾಷೆಗಳಿಗೇ ಧಕ್ಕೆಯಾಗಿರುವಾಗ, ಈ ಭಾಷೆಗಳಲ್ಲಿ ಅಭಿವ್ಯಕ್ತಿಗೊಳ್ಳುವ ಸಾಹಿತ್ಯ, ಚಿತ್ರ, ಸಂಗೀತ ಮುಂತಾದ ಪ್ರಕಾರಗಳಿಗೆ ಮುಂದೊಂದು ದಿನ ಕೇಳುಗರು, ನೋಡುಗರು ಇಲ್ಲವಾಗಬಹುದಾದ ಅಥವಾ ತೀರಾ ಕಡಿಮೆಯಾಗಬಹುದಾದ ಸ್ಥಿತಿ ಬರುತ್ತದೆ. ಪ್ರಾಥಮಿಕ ಶಿಕ್ಷಣ ತಳಹದಿಯಾದ್ದರಿಂದ ಅಲ್ಲಿಯೇ ಮಾತೃಭಾಷೆ ರೂಢಿಸಿಕೊಳ್ಳದವರು ಮಾತೃಭಾಷೆ/ರಾಜ್ಯ ಭಾಷೆಗಳ ಅಭಿವೃದ್ಧಿ ಮಾದರಿಗಳಿಗೆ ಮನಸ್ಸು ಕೊಡಲು ಹೇಗೆ ಸಾಧ್ಯ? ಹೀಗಾಗಿ ಸುಪ್ರೀಂಕೋರ್ಟ್ ತೀರ್ಪು ಭಾಷಿಕ ಮಾತ್ರವಾಗಿ ಅಲ್ಲ, ಸಾಂಸ್ಕೃತಿಕವಾಗಿಯೂ ನಕಾರಾತ್ಮಕ ಪರಿಣಾಮ ಬೀರುತ್ತದೆ.

ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆ/ರಾಜ್ಯ ಭಾಷೆ ಮಾಧ್ಯಮದಲ್ಲಿ ಕಲಿತರೆ ಮಕ್ಕಳ ಭವಿಷ್ಯಕ್ಕೆ ಧಕ್ಕೆಯಾಗುತ್ತದೆಯೆಂದೂ ಉದ್ಯೋಗ ಸಿಗುವುದಿಲ್ಲವೆಂದೂ ಪೋಷಕರು ಭಾವಿಸುವುದು ಸಹ ಸರಿಯಲ್ಲ, ಯಾಕೆಂದರೆ, ಒಂದರಿಂದ ನಾಲ್ಕನೆಯ ತರಗತಿಯವರೆಗೆ ಯಾವ ಮಾಧ್ಯಮದಲ್ಲಿ ವ್ಯಾಸಂಗ ಮಾಡಲಾಗಿದೆಯೆಂಬ ಆಧಾರದಲ್ಲಿ ಯಾರೂ ಉದ್ಯೋಗ ಕೊಡುವುದಿಲ್ಲ; ಉದ್ಯೋಗವೊಂದಕ್ಕೆ ಬೇಕಾದ ವಿದ್ಯಾರ್ಹತೆ ಮತ್ತು ಪರಿಣತಿಯನ್ನು ಮಾತ್ರ ಪರಿಗಣಿಸಲಾಗುತ್ತದೆ. ಇಷ್ಟಕ್ಕೂ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಭಾಷೆಯನ್ನು ಒಂದು ವಿಷಯವಾಗಿ ಕಲಿಸುವ ಅವಕಾಶ ಕರ್ನಾಟಕದಲ್ಲಿರುವುದರಿಂದ ಮುಂದೆ ಇಂಗ್ಲಿಷ್ ಮಾಧ್ಯಮಕ್ಕೆ ಹೋಗಲು ಅನುಕೂಲವೂ ಆಗುತ್ತದೆ. ಒಂದರಿಂದ ನಾಲ್ಕನೇ ತರಗತಿಯವರೆಗೆ ಮಾತೃಭಾಷೆ ಅಥವಾ ರಾಜ್ಯಭಾಷಾ ಮಾಧ್ಯಮ ಮತ್ತು ಒಂದು ಪಠ್ಯ ವಿಷಯವಾಗಿ ಇಂಗ್ಲಿಷ್ -ಎಂಬ ಪದ್ಧತಿ ಖಂಡಿತ ಯಾರ ಹಕ್ಕಿಗೂ ಉದ್ಯೋಗಕ್ಕೂ ಧಕ್ಕೆ ತರುವುದಿಲ್ಲ.

ಈಗ ಮುಂದಿರುವ ದಾರಿ ಏನು ಎಂಬ ಪ್ರಶ್ನೆ ಕಾಡುತ್ತಿದೆ. ನಿಜ, ಮತ್ತೆ ಸುಪ್ರೀಂಕೋರ್ಟಿನಲ್ಲಿ ಪುನರ್‌ಪರಿಶೀಲನಾ ಅರ್ಜಿ ಹಾಕಬಹುದು. ಇದೊಂದು ಕಾನೂನಿನ ಅವಕಾಶವಿದೆ. ಈ ಪ್ರಯತ್ನವನ್ನೂ ಮಾಡಬಹುದು. ಆದರೆ ಇಲ್ಲಿಗೇ ನಿಲ್ಲದೆ ರಾಷ್ಟ್ರದಲ್ಲಿಯೇ ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆ ಅಥವಾ ರಾಜ್ಯ ಭಾಷಾ ಮಾಧ್ಯಮಕ್ಕೆ ಅವಕಾಶವಾಗುವಂತೆ ಸಂವಿಧಾನಕ್ಕೆ ತಿದ್ದುಪಡಿಗೆ ಪ್ರಯತ್ನಿಸುವುದು ಮುಖ್ಯ. ಈ ದಿಕ್ಕಿನಲ್ಲಿ ವಿವಿಧ ರಾಜ್ಯಗಳ ಸಮಾನ ಮನಸ್ಕರು ಸಂಘಟಿತರಾಗಬೇಕು. ಮುಂದಿನ ಸಂಸದರ ಮತ್ತು ಸರ್ಕಾರದ ಮನವೊಲಿಸಬೇಕು. ಈ ಕೆಲಸಕ್ಕೆ ಕರ್ನಾಟಕ ಸರ್ಕಾರವು ನಾಂದಿ ಹಾಡಬೇಕು. ವಿವಿಧ ಶಿಕ್ಷಣ ತಜ್ಞರು, ಸಾಮಾಜಿಕ ಚಿಂತಕರು, ಸಾಮಾಜಿಕ ಕಾರ್ಯಕರ್ತರ ಸಹಕಾರವನ್ನು ಪಡೆದು ಅಭಿಪ್ರಾಯ ಮೂಡಿಸಬೇಕು. ವಿವಿಧ ರಾಜ್ಯಗಳ ರಾಜಕೀಯ ಮುಖಂಡರಿಗೂ ಮನವರಿಕೆ ಮಾಡಿಕೊಡಬೇಕು. ಈ ದಿಕ್ಕಿನ ಮೊದಲ ಹೆಜ್ಜೆಯಾಗಿ ವಿವಿಧ ರಾಜ್ಯಗಳ ನೇತಾರರ ಮತ್ತು ಚಿಂತಕರ ಸಭೆಯನ್ನು ಕರೆದು ಚರ್ಚಿಸಿ ಚಾಲನೆ ನೀಡಬೇಕು. ಜೊತೆಗೆ ಸಾರ್ವಜನಿಕರಿಗೆ ವಸ್ತುಸ್ಥಿತಿಯನ್ನು ತಿಳಿಸಿ ಮಕ್ಕಳ ಭವಿಷ್ಯಕ್ಕೆ ಧಕ್ಕೆಯಾಗುವುದಿಲ್ಲವೆಂಬುದನ್ನು ಮನವರಿಕೆ ಮಾಡಿಕೊಡಬೇಕು.

ಇನ್ನೊಂದು ಅಂಶವನ್ನೂ ಇಲ್ಲಿ ಪರಿಗಣಿಸಬೇಕು. ಕಡ್ಡಾಯ ಶಿಕ್ಷಣ ಕಾಯಿದೆಯ 29ನೇ ಕಲಂನಲ್ಲಿ 'ಪ್ರಾಥಮಿಕ ಶಿಕ್ಷಣವನ್ನು ಸಾಧ್ಯವಾದಷ್ಟೂ ಮಾತೃಭಾಷೆಯಲ್ಲಿ ಕೊಡಬೇಕು' ಎಂದಿದೆ. ಇದು ಸಂಸತ್ತಿನಿಂದ ಅಂಗೀಕಾರವಾದ ಕಾಯಿದೆ. ಇಲ್ಲಿರುವ 'ಸಾಧ್ಯವಾದಷ್ಟು' ಎಂಬ ಮಾತನ್ನು ಕೈಬಿಟ್ಟು 'ಪ್ರಾಥಮಿಕ ಶಿಕ್ಷಣವನ್ನು ಮಾತೃ ಭಾಷೆ ಅಥವಾ ರಾಜ್ಯ ಭಾಷೆಯಲ್ಲಿ ಕೊಡಬೇಕು' ಎಂದು ತಿದ್ದುಪಡಿ ಮಾಡಲು ಪ್ರಯತ್ನಿಸಬೇಕು. ಎಳೆ ವಯಸ್ಸಿನ ಮಕ್ಕಳಲ್ಲಿ ಭಾಷಾ ಅಸಮಾನತೆಯನ್ನು ಹುಟ್ಟು ಹಾಕಿ, ಮೇಲರಿಮೆ-ಕೀಳರಿಮೆಗಳಿಗೆ ಕಾರಣವಾಗಬಾರದೆಂಬ ಅಂಶವನ್ನು ಅರ್ಥ ಮಾಡಿಸಿ ಸಂವಿಧಾನಾತ್ಮಕ ಸಮಾನತೆಯನ್ನು ಎತ್ತಿ ಹಿಡಿಯಬೇಕು. ಹಾಗೆಂದು ಎಲ್ಲ ಕಡೆ ಇಂಗ್ಲಿಷ್ ಮಾಧ್ಯಮದ ಏಕರೂಪತೆಗೆ ಶರಣಾಗಿ 'ಸಮಾನತೆ' ಸಾಧಿಸುವುದಲ್ಲ. ಶಿಕ್ಷಣ ಮತ್ತು ಅಕ್ಷರ ಜ್ಞಾನಕ್ಕೆ ತಳಹದಿಯಾದ ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆ ಅಥವಾ ರಾಜ್ಯ ಭಾಷಾ ಮಾಧ್ಯಮ ಮತ್ತು ಒಂದು ವಿಷಯವಾಗಿ ಇಂಗ್ಲಿಷ್ ಕಲಿಕೆಯ ಏಕರೂಪತೆಯಿಂದ ಸಮಾನತೆ ಸಾಧಿಸಬೇಕು.

ಒಟ್ಟಾರೆ, ಸಂವಿಧಾನ ಮತ್ತು ಕಡ್ಡಾಯ ಶಿಕ್ಷಣ ಕಾಯಿದೆಗೆ ತಿದ್ದುಪಡಿ ತರುವುದರಿಂದ ಅಂತಿಮ ಪರಿಹಾರ ಸಾಧ್ಯವಾಗಬಹುದು- ಇದನ್ನೂ ನ್ಯಾಯಾಲಯಗಳು ನಿರಾಕರಿಸುವ ಅಧಿಕಾರ ಇಲ್ಲದಿದ್ದರೆ; ಅಧಿಕಾರವಿದ್ದರೂ ನಿರಾಕರಿಸುವ ಮನಸ್ಸು ಇಲ್ಲದಿದ್ದರೆ!

ಬರಗೂರು ರಾಮಚಂದ್ರಪ್ಪ



ಪರಿಸರದಲ್ಲಿ ಪ್ರತಾಪ ಸಿಂಹರು





ಗೆಯರಾದ ಪರಿಸರ ಶಿವರಾಂ ಕಳೆದ ಶತಮಾನದ ಅಂತ್ಯಭಾಗದಲ್ಲಿ ಏನೋ ಜ್ಞಾನೋದಯವಾದಂತೆ ಸಿನಿಮಾರಂಗ ತ್ಯಜಿಸಿ ಭದ್ರಾವತಿಯ ಬಂಕ್ಷಿನ್ನಿನ ಪ್ರದೇಶಕ್ಕೆ ಬಂದು ನೆಲ ಹಿಡಿದರು. ಸುಮಾರು ಹತ್ತು ಎಕರೆ ಜಾಗದ ನಡುವೆ ಗುಡಿಸಲು ಹಾಕಿ ತೋಟ ಮಾಡುವ ತಯಾರಿ ನಡೆಸಿದರು. ಆವರ ಸಾಹಸ ಮತ್ತು ಆ ಗುಡಿಸಲನ್ನು ನೋಡಿದವರು "ಒಂದಲ್ಲ ಒಂದು ದಿನ ಭೂಮಿ ಮಾರಿ ಈತ ಇಲ್ಲಿಂದ ಕಾಲ್ಕೀಳುವುದು ಗ್ಯಾರಂಟಿ" ಎಂದು ಆಡಿಕೊಂಡರು. ಸ್ವತಃ ಶಿವರಾಂ ತಂದೆಯೇ "ಕಾಡು ಹೆಣ ಆಯ್ತಿಯಲ್ಲೋ ನೀನು. ಯಂಗಾರ ಸಾಯಿ, ನನ್ನ ಮೊಮ್ಮಕ್ಕಳನ್ನ ನನ್ನ ಜೊತೆ ಕಳುಸು" ಎಂದು ಕರೆದುಕೊಂಡು ಹೋದರು. ಆದರೆ ಶಿವರಾಂಗೆ ಭೂಮಿ ಬಿಟ್ಟರೆ ಬೇರೆ ಗತಿಯೇ ಇರಲಿಲ್ಲ, ಆದ್ದರಿಂದ ಸಹೋದರರಿಂದ ಧನಸಹಾಯ ಪಡೆದು ಬೋರ್‌ವೆಲ್ ತೆಗೆಸಿದರು. ನೀರು ಬಂತು. ಆನಂತರ ತೆಂಗು, ಮಾವು, ಸಪೋಟ, ಸೀಬೆ, ಅಡಕೆ ಹೀಗೆ ಎಲ್ಲಾ ಗಿಡಗಳನ್ನು ತಂದು ಹನಿ ನೀರಾವರಿ ವ್ಯವಸ್ಥೆ ಮಾಡಿದರು. ನೋಡನೋಡುತ್ತಿದ್ದಂತೆ ತೋಟ ನಳನಳಿಸತೊಡಗಿತು. ಆಗ ಆಡಿಕೊಂಡವರೆಲ್ಲಾ ಹತ್ತಿರ ಬಂದು ನೂರಾರು ಸಲಹೆ ಕೊಡತೊಡಗಿದರು. ಆದರಲ್ಲಿ ಸಹಜ ಕೃಷಿ, ಸಾವಯವ ಕೃಷಿ, ಹೈನುಗಾರಿಕೆ, ಮೀನು ಸಾಕಣೆ ಸಲಹೆಗಳು ಬಹು ಸರಾಗವಾಗಿ ಹರಿದುಬಂದವು. ಸ್ವತಃ ಶಿವರಾಂ ತಂದೆಯೇ "ಇನ್ನು ಒಂದಿಷ್ಟು ಜಾಸ್ತಿ ತೆಂಗು, ಮಾವು, ಸಪೋಟ ನೆಡು ಅಂತ ಬಡಕಂಡೆ. ನನ್ನ ಮಾತನ್ನೇ ಕೇಳಲಿಲ್ಲ ಅವನು" ಎಂದು ಕಂಡವರೆ ದುರು ಹೇಳತೊಡಗಿದರು. ಅಚ್ಚರಿಗೊಂಡ ಶಿವರಾಂ "ಇದೇನಪ್ಪ ವರಸೆ ಬದಲಾಯಿಸಿದ್ದಿ?" ಎಂದಾಗ "ನಾನಂಗೆ ಬೈದೆಯಿದ್ರೆ ತೋಟ ಮಾಡತಿದ್ದ ನೀನು?" ಎಂದರು!

ಆ ತೋಟದ ನಡುವೆ ಸೋಗೆ ಗರಿಯಿಂದಲೇ ಬಯಲು ರಂಗಮಂದಿರ ಮಾಡಿ, ಪುಸ್ತಕ ಬಿಡುಗಡೆ, ವಿಚಾರ ಸಂಕಿರಣವನ್ನೂ ಮಾಡಿದರು. ನಮ್ಮ ಎಡತೊರೆ ರಾಜಣ್ಣನ ಪುಸ್ತಕ ಬಿಡುಗಡೆಯಾದದ್ದು ಇಲ್ಲಿಯೇ. ಕುವೆಂಪು ವಿ.ವಿಗೆ ಬಂದು ಬೇಸರಗೊಂಡವರು, ರಾಜಕಾರಣದಲ್ಲಿ ಸುಸ್ತಾದವರು, ರೌಡಿ ಕೆಲಸದಲ್ಲಿ ಬಸವಳಿದವರೆಲ್ಲಾ ಇಲ್ಲಿ ಬಂದು ಎಳನೀರು ಕುಡಿದು ಸುಧಾರಿಸಿಕೊಂಡು ಹೋದದ್ದೂ ಇದೆ.

ತಮ್ಮ ಮಕ್ಕಳನ್ನು ತೋಟದಲ್ಲಿ ನೆಲೆಗೊಳಿಸಲೋಸ್ಕರ ಶಿವರಾಂ ಗೆಳೆಯರನ್ನು ಕರೆಸಿ, ಕೃಷಿ ಕೆಲಸದಿಂದ ಸಿಗುವ ಸುಖ ನೆಮ್ಮದಿ ಬಗ್ಗೆ ಕೊರೆಸಿದ ಉದಾಹರಣೆಗಳೂ ಇವೆ. ತಮ್ಮ ಇಬ್ಬರು ಗಂಡು ಮಕ್ಕಳ ಜೊತೆಗೆ ತಮ್ಮಲ್ಲೇ ಕೆಲಸ ಮಾಡುತ್ತಿದ್ದ ಕೂಲಿಕಾರರ ಮಗುವನ್ನೂ ಕಾನೂನುರೀತಿ ದತ್ತು ತೆಗೆದುಕೊಂಡು ದಕ್ಕಿಸಿಕೊಂಡರು. ಏಕೆಂದರೆ ಶಾಸಕ ಮತ್ತವನ ಬೆಂಬಲಿಗರು ಈ ಬಗ್ಗೆ ಕೇಸು ಮಾಡಿ ರಾದ್ಧಾಂತ ಮಾಡಿದ್ದರು. ಅದರಲ್ಲೂ ಶಿವರಾಂ ಗೆದ್ದರು. 'ಪರಿಸರ' ಎಂಬ ಪತ್ರಿಕೆಯ ಸಂಪಾದಕರೂ ಆಗಿರುವುದರಿಂದ ಶಿವರಾಂ ಮೇಲೆ ಕೇಸುಗಳೂ ಇವೆ. ಪತ್ರಿಕೆ ಎಂದಮೇಲೆ ಆ ಬದುಕಿನ ಅವಿಭಾಜ್ಯ ಅಂಗವೆನ್ನುವಂತೆ ಕೇಸುಗಳನ್ನು ನಡೆಸುತ್ತಿರುವ ಶಿವರಾಂಗೆ ಹೋರಾಟಗಳಿಲ್ಲದಿದ್ದರೆ ಜೀವನವೇ ಬೋರಂತೆ.

ಮಕ್ಕಳ ಜೊತೆಯಲ್ಲೇ ಅವರು ತುಂಬಾ ಕಾಳಜಿಯಿಂದ ನೋಡಿಕೊಳ್ಳುತ್ತಿರುವ ನಾಯಿ ಬೆಕ್ಕುಗಳದ್ದೂ ಒಂದೊಂದು ಕತೆಯಿದೆ. ಈ ಪೈಕಿ ಮೂರನೇ ಮಹಡಿಯ ಅಪಾರ್ಟುಮೆಂಟಿನಿಂದ ಇಳಿದು ಬಂದು ತೋಟ ತುಡಿಕೆಯಿಂದ ಗಾಬರಿಗೊಂಡು ಸದಾ ಮೂಲೆಯಲ್ಲಿ ಅವಿತಿರುವ ಮುನ್ನಿ ಎಂಬ ಬೆಕ್ಕಿನದೇ ಒಂದು ಕತೆ.

ಶಾಂತ ಮತ್ತು ಸ್ವರ್ಣ ಎಂಬ ತಾಯಿ ಮಗಳು ಬೊಂಬಾಯಿಯ ಫುಟ್‌ಪಾತ್‌ನಲ್ಲಿ ನಡೆದುಹೋಗುತ್ತಿದ್ದಾಗ ಚರಂಡಿಯಿಂದ ಹತ್ತಿ ಉಂಡೆಯಂತಹ ಮತ್ತು ಚುಮ್ಮಿ ಬಂತು. ನೋಡಿದರೆ ಮುದ್ದಾದ ಬೆಕ್ಕಿನ ಮರಿ. ಅದನ್ನು ಮನೆಗೆ ತೆಗೆದುಕೊಂಡು ಹೋಗಿ ಸಾಕಿದರು. ಸ್ವರ್ಣಳಿಗೆ ಮದುವೆಯಾಗಿ ಬೆಂಗಳೂರಿಗೆ ಬರಬೇಕಾಯ್ತು, ಆಗ ಬೆಕ್ಕಿನ ಮರಿ ಬಟ್ಟು ಬರಲಾಗದೆ ವೆಟರ್‌ನರಿ ಡಾಕ್ಟರ್ ಕಂಡು, ಅದಕ್ಕೆ ಅನಿಸ್ತೆಷಿಯಾ ಕೊಡಿಸಿ, ವಿಶೇಷವಾದ ಕಿಟ್‌ನಲ್ಲಿ ಬೆಂಗಳೂರಿಗೆ ತರಲಾಯ್ತು. ಆದರೆ ಇಲ್ಲಿನ ಮೂರನೇ ಮಹಡಿ ಕಿಟಕಿಯಿಂದ ಕೆಳಗೆ ಬಿದ್ದ ಮುನ್ನಿಯ ಸೊಂಟ ಮುರಿದುಹೋಯ್ತು. ಸ್ವರ್ಣ ದಂಪತಿಗಳು ಪ್ರಾಣಿ ವೈದ್ಯರಲ್ಲಿ ತೋರಿಸಿದಾಗ "ಸೈಸಲ್ ಕಾರ್ಡ್ ಮುರಿದಿದೆ. ಆಪರೇಷನ್ ಆಗಬೇಕು. ಐವತ್ತೈದು ಸಾವಿರವಾಗುತ್ತೆ" ಎಂದರು. ಅಷ್ಟೂ ಹಣವನ್ನು ತೆತ್ತು ಮುನ್ನಿ ಉಳಿಸಿಕೊಂಡು ಮನೆಗೆ ಬಂದರು. ಬರುವಾಗ ವೈದ್ಯರು "ಆಕೆ ಗರ್ಭಿಣಿಯಾಗದಂತೆ ನೋಡಿಕೊಳ್ಳಿ" ಎಂದರು. ಆದರೆ ಯಾವುದೋ ಕಳ್ಳಬೆಕ್ಕು ಬಂದು ಮುನ್ನಿಗೆ ಗರ್ಭಧಾರಣೆ ಮಾಡಿ ಹೋಗಿತ್ತು, ಡಲ್ಲಾದ ಮುನ್ನಿಯನ್ನು ತೆಗೆದುಕೊಂಡು ಹೋಗಿ ಮತ್ತೆ ವೈದ್ಯರಲ್ಲಿ ತೋರಿಸಿದಾಗ "ಸರಾಗ ಹೆರಿಗೆ ಕಷ್ಟ. ಸಿಜೇರಿಯನ್ ಮಾಡಿ ಮರಿ ತೆಗೆಯಬೇಕು" ಎಂದರು. "ಅದಕ್ಕೆಷ್ಟು?" ಎಂದಾಗ "ನಲವತ್ತೈದು ಸಾವಿರ ಆಗುತ್ತೆ" ಎಂದರು. ಸ್ವರ್ಣ ದಂಪತಿಗಳು ಅಷ್ಟೂ ಹಣ ಕಟ್ಟಿ ಮುನಿಗೆ ಸಿಜೇರಿಯನ್ ಮಾಡಿಸಿದರು. ಎರಡು ಮರಿಗಳಿಗೂ ಹತ್ತಿಯಿಂದ ಹಾಲೂಡಿಸಿ ಸಾಕುತ್ತಿರಬೇಕಾದರೆ ಒಂದು ಮರಿ ಸತ್ತು ಹೋಯಿತು. ಉಳಿದ ಒಂದು ಮರಿಗೆ ಕೂಜೆ ಎಂದು ಹೆಸರಿಟ್ಟು, ತಾಯಿ ಮಗ ಬೆಂಗಳೂರಿನ ಮೂರನೇ ಮಹಡಿಯಲ್ಲಿ ಬದುಕುಳಿಯುವುದು ಕಷ್ಟ ಎಂದು ಪರಿಸರ ಶಿವರಾಂಗೆ ಒಪ್ಪಿಸಿ ಹೋದರು. ಆದರೆ ಅನ್ನ, ಹಾಲು, ಮುದ್ದೆ ತಿನ್ನದೆ ಬರಿ ಮೀನಿನಿಂದ ಮಾಡಿದ್ದ ರೆಡಿಮೇಡ್ ಖಾದ್ಯ ತಿಂದು ಜೀವಿಸಿದ್ದ ಆ ಬೆಕ್ಕುಗಳಿಗೆ ಆಹಾರ ತಂದು ಹಾಕುವಲ್ಲಿ ಶಿವರಾಂ ಸುಸ್ತಾಗಿದ್ದಾರೆ. ಆದರೆ ಪ್ರಾಣಿಗಳನ್ನು ಪ್ರೀತಿಸುವವರು ಇದನ್ನೆಲ್ಲ ಲೆಕ್ಕ ಹಾಕುವುದಿಲ್ಲ.

ಶಿವರಾಂ ಬಳಿ ನಾಟಕೋಳಿ, ಚೀಕಾಕೋಳಿ, ಬಾತುಕೋಳಿ ಮತ್ತು ನಾಲ್ಕಾರು ನಾಯಿಗಳೂ ಇವೆ. ಈ ಪೈಕಿ ಜುಮ್ಮಿ ಎಂಬ ನಾಯಿ ಒಂದೇ ಸಲಕ್ಕೆ ಆರು ಮರಿ ಹಾಕಿದಳು. ಈ ರೀತಿ ಮರಿ ಹಾಕಿದರೆ ತೋಟದ ತುಂಬ ಬರೀ ನಾಯಿಗಳೇ ಆಗುತ್ತವೆಂದು ಹೆದರಿದ ಶಿವರಾಂ ಆಕೆಗೆ ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡಿಸಲು ವೆಟರ್‌ನರಿ ಡಾಕ್ಟರನ್ನು ಕಂದರು. ನಿಜಕ್ಕೂ ಅವರೊಬ್ಬ ಅದ್ಭುತ ವೈದ್ಯರು. ಸಲ್ಲ ಪ್ರಾಣಿಗಳ ಚಲನವಲನ ಅಧ್ಯಯನ ಮಾಡಲು ಸದಾ ಟಿವಿ ಮುಂದೆ ಕುಳಿತು ಆನಿಮಲ್ ಪ್ಲಾನೆಟ್ ಚಾನಲ್ ನೋಡುತ್ತಾರೆ. ಬಿಡುವಾದಾಗ ಪಾನ್‌ಪರಾಗ್ ಮುಕ್ಕುತ್ತಾರೆ. ಇವರಡೇ ಕೆಲಸದಲ್ಲಿ ಮುಳುಗಿರುವ ಆ ವೈದ್ಯರು ಎಂದೂ ನಾಯಿಗೆ ಸಂತಾನಹರಣದ ಶಸ್ತ್ರಚಿಕಿತ್ಸೆ ಮಾಡಿಲ್ಲವಂತೆ. ಹಾಗೆಂದು ಹೇಳಿಕೊಳ್ಳುವಂತಿಲ್ಲ ವೃತ್ತಿ ಮರ್ಯಾದೆ ಪ್ರಶ್ನೆ. ಅದಕ್ಕಾಗಿ ತಮ್ಮ ಕೈಯಿಂದಲೇ ಹಣ ಖರ್ಚು ಮಾಡಿ ತಜ್ಞ ವೈದ್ಯರನ್ನು ಕರೆಸಿ ಆಪರೇಷನ್ ಮಾಡಿಸಿದರು. ಆದರೇನು ಜುಮ್ಮಿ ಹೊಟ್ಟೆ ಕುಯ್ದಾಗ ಚಿಮ್ಮಿದ ರಕ್ತ ನೋಡಿದ ಪಾನ್‌ಪರಾಗ್ ವೈದ್ಯರು ಜ್ಞಾನತಪ್ಪಿ ಬಿದ್ದುಬಿಟ್ಟರು. ಜುಮ್ಮಿ ಬದಲು ವೈದ್ಯರ ತಲೆಗೆ ನೀರುತಟ್ಟಿ ಬದುಕಿಸಿಕೊಂಡ ನಂತರ ಜುಮ್ಮಿಗೆ ಆಪರೇಷನ್ ಮಾಡಿ ಮುಗಿಸಿದ್ದಾಯ್ತು!

ಅಂತೂ ವೈದ್ಯರು ಮತ್ತು ಜುಮ್ಮಿ ಇಬ್ಬರೂ ಚೇತರಿಸಿಕೊಂಡರು. ಆಗ ಅವಳ ಮರಿಗಳೆಲ್ಲಾ ಖಾಲಿಯಾಗಿ ಒಬ್ಬ ಮಗ ಮಾತ್ರ ಇದ್ದ. ಆತನ ಹೆಸರು ಕುಳ್ಳ. ಈ ಕುಳ್ಳನ ಕಣ್ಣಿನ ಸುತ್ತ ಕಾಡಿಗೆ ಬಳಿದಂತೆ ಕಾಣುವುದರಿಂದ ಹುಲಿ ಕಣ್ಣಿನಂತೆ ಕಾಣುತ್ತವೆ. ಇವನೆಂತಹ ಮೇಧಾವಿ ಎಂದರೆ ನಾವು ಚಿಕನ್, ಮಟನ್ ತಿನ್ನುತ್ತಿದ್ದರೂ ಕೂಡ ಈ ಕಡೆ ತಿರುಗಿಯೂ ನೋಡುವುದಿಲ್ಲ. ಆತನ ಮುಂದಕ್ಕೆ ಎಸೆದ ಮೂಳೆಕನ್ನು ಗಬಕ್ಕನೆ ತಿನ್ನದೆ ತಾತ್ಸಾರದಿಂದ ನೋಡುತ್ತಾನೆ. ತನ್ನ ಭಾಗದ ಊಟವನ್ನು ಕೂಡ ತನಗಿಷ್ಟ ಬಂದಾಗ ಮಾಡುತ್ತಾನೆ. ಮಾಂಸವೆಂದರೆ ಮೈಲಿಗಟ್ಟಲೆ ನಡೆಯುವ, ಸದಾ ಬೀಗರೂಟ, ಬಾಡೂಟ ಎಂದು ಅಲೆಯುವ ಬಾಡುಬಕ್ಕರು ಈತನಿಂದ ಕಲಿಯುವುದು ತುಂಬಾ ಇದೆ.

ಇನ್ನ ರೂಬಿ ಎಂಬ ಪೊಮೇರಿಯನ್ ಕ್ರಾಸ್ ಕ್ಯಂದಿ ಜಗಳಗಂಟಿ. ತನ್ನ ಆಕಾರ ನೋಡಿಕೊಂಡಾದರೂ







ಮುಸ್ಲಿಮರು ಮತ್ತು ಜಾನುವಾರುಗಳು

ಅಕ್ಕ ಗೌರಿ ಲಂಕೇಶ್ ಅನುವಾದಿಸಿದ್ದ ಬೆಂಗಾಳಿ ಭಾಷೆಯ ಪ್ರಸಿದ್ಧ ಸಾಹಿತಿ ಶರತ್‌ಚಂದ್ರ ಚಟರ್ಜಿಯವರ 'ಕ್ಷಮಾ' ಕತೆಯನ್ನು ಇತ್ತೀಚೆಗೆ ಮತ್ತೊಮ್ಮೆ ಓದಿದೆ. ಮುಸ್ಲಿಮರೆಂದರೆ ಜಾನುವಾರುಗಳ ಹಾಲಿನ ರಾಕ್ಷಸರು ಎಂದು ಕೋಮುವ್ಯಾಧಿಗ್ರಸ್ಥ ಮನಸ್ಸುಗಳು ಬಂಬಿಸಿ, ದ್ವೇಷ ಬಿತ್ತುವ ರಾಜಕಾರಣ ಮಾಡುವ ಇಂದಿನ ವಿಷ(ಮ) ಕಾಲಘಟ್ಟದಲ್ಲಿ ಆ ಕತೆ ಅತ್ಯಂತ ಪ್ರಸ್ತುತ. (ಕಪ್ಪು ಮಲ್ಲಿಗೆ ಮತ್ತು ಇತರ ಅನುವಾದಿತ ಕತೆಗಳು: ಗೌರಿ ಲಂಕೇಶ್)

ಕಾಶೀಪುರ ಎಂಬ ಪುಟ್ಟ ಹಳ್ಳಿಯಲ್ಲಿ ಗಫೂರ ಎಂಬ ಬಡ ಮುಸಲ್ಮಾನ ತನ್ನ ಮಗಳು ಆಮಿನಾಳ ಜೊತೆ ಮುರುಕಲು ಗುಡಿಸಲಲ್ಲಿ ವಾಸವಾಗಿದ್ದ. ಅವರ ಮನೆಯ ಮೂರನೇ ಸದಸ್ಯ ಮಹೇಶ ಎಂಬ ಅವರ ಎತ್ತು. ಗಫೂರನ ಪಾಲಿಗೆ ಮಹೇಶ ಒರ್ವ ಮಗನಂತಿದ್ದ. ಊರಿಡೀ ಬರಗಾಲದಿಂದ ತತ್ತರಿಸುತ್ತಿದ್ದಾಗ ಎಲ್ಲ ಬಡವರಂತೆ ಗಫೂರ, ಆಮಿನಾ ಮತ್ತು ಅವರ ಎತ್ತು ಮಹೇಶ ಹಸಿವಿನಿಂದಲೇ ದಿನಗಳೆಯುತ್ತಿದ್ದರು. ಮಹೇಶನನ್ನು ಕಸಾಯಿಖಾನೆಗೆ ಕೊಟ್ಟರೆ ಗಫೂರ ಮತ್ತು ಆಮಿನಾ ಕೆಲವು ದಿನ ಊಟ ಮಾಡಬಹುದಿತ್ತು. ಆದರೆ ಗಫೂರನಿಗೆ ಆಮಿನಾ ಬೇರೆಯಲ್ಲ, ಮಹೇಶ ಬೇರೆಯಲ್ಲ. ಗಫೂರ ಮತ್ತು ಆಮಿನಾ ಹಸಿವಿನಿಂದ ನರಳುತ್ತಲೇ ಆಕಾಶದತ್ತ ದಿಟ್ಟಿ ಹಾಯಿಸುತ್ತಾ ಮಳೆಯನ್ನು ನಿರೀಕ್ಷಿಸುತ್ತಿದ್ದರು. ಅವರ ಗುಡಿಸಲಿನ ಮಣ್ಣಿನ ಗೋಡೆಗೆ ಹೊದಿಸಿದ್ದ ಮುಳಿಹುಲ್ಲಿನ ಮೇಲ್ಛಾವಣಿ ಕುಸಿಯುವ ಹಂತಕ್ಕೆ ತಲುಪಿತ್ತು. ಹಸಿವಿನಿಂದ ಕಂಗಾಲಾದ ತನ್ನ ಮಹೇಶನ ನರಳಾಟ ಗಫೂರನನ್ನು ಸುಮ್ಮನಿರಗೊಡಲಿಲ್ಲ. ಆತ ತನ್ನ ಗುಡಿಸಲಿನ ಮೇಲ್ಛಾವಣಿಯಲ್ಲಿ ಉಳಿದಿದ್ದ ಅಲ್ಪಸ್ವಲ್ಪ ಹುಲ್ಲನ್ನು ಕಿತ್ತು ಮಹೇಶನಿಗೆ ಹಾಕುತ್ತಾನೆ. ಆ ಊರಿನ ಬ್ರಾಹ್ಮಣ ಪುರೋಹಿತ ತರ್ಕರತ್ನನ ಕೋಮುವ್ಯಾಧಿಗ್ರಸ್ಥ ಮನಸ್ಸು ಬಡ ಗಫೂರನನ್ನು ಹಸಿವಿನಿಂದ ನರಳುತ್ತಾ ಬದುಕಲೂ ಬಿಡುವುದಿಲ್ಲ. ಗಫೂರನ ಬಡಕಲು ಎತ್ತು ಮಹೇಶ ಊರಿ ಬಸಿಲಿಗೆ ಒಣಗುವುದನ್ನೇ ದೊಡ್ಡ ಸಂಗತಿ ಮಾಡಿ, ಗಫೂರ ಪವಿತ್ರ ಗೋವನ್ನು ಶೋಷಿಸುತ್ತಿದ್ದಾನೆ ಎಂಬ ಹುಯಿಲೆಬ್ಬಿಸುತ್ತಾನೆ. ಆದರೆ ಆ ಬಡಕಲು ಗೋವಿಗೆ ಒಂದು ಹಿಡಿ ಹುಲ್ಲು ನೀಡುವ ದೊಡ್ಡ ಮನಸ್ಸು ಮಾಡುವುದಿಲ್ಲ. ಗಫೂರ ತನ್ನಲ್ಲಿ ಉಳಿದಿರುವ ಏಕೈಕ ಹಿತ್ತಾಳೆಯ ಬಟ್ಟಲನ್ನು ಲೇವಾದೇವಿಗಾರನಲ್ಲಿ ಅಡವಿಟ್ಟು ಅಲ್ಪ ದುಡ್ಡು ತಂದು ತನ್ನ ಮತ್ತು ತನ್ನವರ ಹೊಟ್ಟೆ ಒಂಚೂರು ತಂಪು ಮಾಡಿದ. ಒಮ್ಮೆ ಮಹೇಶ ಜಮೀನ್ದಾರ ಶಿವಬಾಬುವಿನ ತೋಟಕ್ಕೆ ನುಗ್ಗಿ ಒಣಗಲು ಹಾಕಿದ್ದ ಜೋಳ ಮತ್ತು ಗಿಡಗಳಲ್ಲಿದ್ದ ಹೂವನ್ನು ತಿಂದಿದ್ದ. ಅದು ದೊಡ್ಡ ರಂಪವಾಗಿ ಗಫೂರ ತನ್ನ ಎತ್ತು ಮಹೇಶನ ತಪ್ಪಿಗಾಗಿ ಶಿಕ್ಷೆಯನ್ನೂ ಅನುಭವಿಸಿದ್ದ.

ಕತೆಯ ಪ್ರಮುಖ ಘಟ್ಟದಲ್ಲಿ ಗಫೂರ ತನ್ನ ಸೇರಿಲಿನ ದಂಡದಿಂದ ಮಹೇಶನ ತಲೆಗೆ ಹೊಡೆದು ಸಾಯಿಸುತ್ತಾನೆ. ಆ ಬಳಿಕ ಪಶ್ಚಾತ್ತಾಪ ಪಡುತ್ತಾನೆ. ಆಗ ಆತನ ಬಾಯಿಂದ ಬರುವ ಪ್ರಾರ್ಥನೆ "ಅಲ್ಲಾಹೂ, ನನಗೆ ಎಷ್ಟು ಬೇಕಾದರೂ ಶಿಕ್ಷೆ ನೀಡು. ನನ್ನ ಮಹೇಶ ಮೇಯಲು ಯಾರೂ ಅವನಿಗೆ ಒಂಚೂರು ಜಾಗ ನೀಡಲಿಲ್ಲ. ಜಮೀನ್ದಾರ ಮಾಡಿದ ಪಾಪಕ್ಕೆ ಅವನನ್ನೆಂದೂ ಕ್ಷಮಿಸಬೇಡ. ನೀನು ಕೊಟ್ಟ ಹುಲ್ಲು ಮತ್ತು ನೀರನ್ನೂ ಕೊಡದಿದ್ದ ಪಾಪಿ ಆ ಜಮೀನ್ದಾರ."

ಈ ಕತೆ ಕೋಮುವಾದವನ್ನು ಒಪ್ಪದ ಮಾನವೀಯ ಅಂತಃಕರಣವಿರುವವನಿಗೆ ನಾಟಲೇಬೇಕು. ಸಾಧು ಪ್ರಾಣಿ ದನ ಕೆಲವರಿಗೆ ಪವಿತ್ರವೆಂಬ ಕಾರಣಕ್ಕೆ ಪ್ರಿಯವಾದರೆ ಮತ್ತೆ ಕೆಲವರಿಗೆ ಅದರೊಂದಿಗಿನ ಅವಿನಾಭಾವ ಸಂಬಂಧದ ಕಾರಣಕ್ಕಾಗಿ ಪ್ರಿಯವಾಗುತ್ತದೆ. ಇಂದು ನಮ್ಮ ನಾಡಿನಲ್ಲಿ ಮುಸ್ಲಿಮರು ಗೋವಿನ ರಾಜಕೀಯದಿಂದಾಗಿ ಅನುಭವಿಸುತ್ತಿರುವ ಸಂಕಟ ಅಷ್ಟಿಷ್ಟಲ್ಲ. ಮುಸ್ಲಿಮರು ಮತ್ತೆ ಮತ್ತೆ "ಇಲ್ಲ ನಾವು ಹಿಂದೂಗಳ ಭಾವನೆಗಳನ್ನು ಘಾಸಿಗೊಳಿಸಲು ದನದ ಮಾಂಸವನ್ನು ತಿನ್ನುತ್ತಿಲ್ಲ. ಅದು ನಮ್ಮ ಆಹಾರ ಮತ್ತು ಕಡಿಮೆ ಕ್ರಯಕ್ಕೆ ಲಭ್ಯವಿರುವ ಪೌಷ್ಟಿಕಾಂಶಯುಕ್ತ ಆಹಾರ ಎಂಬ ಕಾರಣಕ್ಕೆ ನಾವು ದನದ ಮಾಂಸ ತಿನ್ನುತ್ತೇವೆ" ಎಂದು ಸ್ಪಷ್ಟೀಕರಣ ಕೊಡುತ್ತಿದ್ದಾರೆ. ಅದಾಗ್ಯೂ ಗೋ-ರಾಜಕೀಯ ಪ್ರಭೃತಿಗಳು ವಾಸ್ತವ ತಿಳಿದೂ ಮುಸ್ಲಿಮರನ್ನು ನಂಬುತ್ತಿಲ್ಲ. ಭಾರತದಲ್ಲಿ ದನದ ಮಾಂಸ ತಿನ್ನುವ ಸಮುದಾಯದಲ್ಲಿ ಮುಸ್ಲಿಂ ಸಮುದಾಯವೂ ಒಂದು ಎಂಬುವುದನ್ನು ಬಿಟ್ಟರೆ ದನದ ಮಾಂಸ ಭಕ್ಷಕರೆಲ್ಲರೂ ಮುಸ್ಲಿಮರಲ್ಲ. ಎ.ಕೆ. ಫಾರೀಖ್ ಎಂಬ ವಿದ್ವಾಂಸ ತನ್ನ **cow slaughter the culprit behind** ಎಂಬ ಸಂಶೋಧನಾತ್ಮಕ ಕೃತಿಯಲ್ಲಿ ದಾಖಲಿಸಿದಂತೆ ಭಾರತದಲ್ಲಿ ದನದ ಮಾಂಸ ತಿನ್ನುವವರಲ್ಲಿ ಮುಸ್ಲಿಮರ ಪಾಲು 1% ಕ್ಕಿಂತಲೂ ಕಡಿಮೆ ಎಂದು ಅಂಕಿಅಂಶಗಳ ಸಮೇತ ದಾಖಲಿಸಿದ್ದಾರೆ. ದನದ ಮಾಂಸ ಸೇವಿಸುವವರಲ್ಲಿ ಬಹುಪಾಲು ಕ್ರೈಸ್ತರು, ಬೌದ್ಧರು, ನೇಪಾಲಿ ಗೂರ್ಖಾಗಳು, ದಲಿತರು, ಆದಿವಾಸಿಗಳು, ಪಾರ್ಸಿಗಳು, ಚರ್ಮಾರರು, ಲಮಾಣಿಗಳು, ಭಂಗಿಗಳು, ಕೊರಕೊಗಳು, ಗೊಂಡರು, ಬನವಾಸಿಗಳು ಮತ್ತು ಅನೇಕ ಅಲೆಮಾರಿ ಜನಾಂಗಗಳಿದ್ದಾರೆ. ಆದರೆ ಗೋ ರಾಜಕೀಯಕ್ಕೆ ಅತೀ ದೊಡ್ಡ ಬಲಿಪಶುಗಳು ಮುಸ್ಲಿಮರು. ಈ ನಿಟ್ಟನಲ್ಲಿ ನಾನು ನನ್ನ ಸುತ್ತಮುತ್ತಲು ಕಂಡ ಮುಸ್ಲಿಮರ ಗೋಪ್ರೇಮದ ಕತೆಗಳಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಲೇಬೇಕಿದೆ. ಇವುಗಳ್ಯಾವುವೂ ನನ್ನ ಕಲ್ಪನೆಯ ಮೂಸೆಯಲ್ಲಿ ಅರಳಿದ್ದಲ್ಲ. ನಾನು ಕಂಡ, ಕಾಣುತ್ತಿರುವ ಕೆಲವು ಸತ್ಯ ಘಟನೆಗಳು.

ಯಾವುದೇ ಮಾಂಸಕ್ಕಿಂತಲೂ ದನದ ಮಾಂಸವನ್ನೇ ಹೆಚ್ಚಾಗಿ ಇಷ್ಟಪಡುವ ನನಗೆ ನನ್ನ ಮನೆಯಲ್ಲಿ ದನದ ಮಾಂಸ ತಿನ್ನುವ ಭಾಗ್ಯ ಸಿಗುವುದು ಬಲು ಅಪರೂಪ. ಯಾವತ್ತೂ ದನದ ಮಾಂಸವನ್ನು ತಿಂದಿರದ ನನ್ನಮ್ಮ ನನಗೆ ದನದ ಮಾಂಸದ ಖಾದ್ಯ ಮಾಡಿ ಬಡಿಸುವುದೂ ಇಲ್ಲ, ಹಾಗೊಮ್ಮೆ ನನಗೆ ಶುಚಿ-ರುಚಿಯಾದ ದನದ ಮಾಂಸದ ಖಾದ್ಯ ತಿನ್ನಬೇಕೆಂದರೆ ನನ್ನ ವಿವಾಹಿತ ತಂಗಿ ಮನೆಗೆ ಬರಬೇಕಷ್ಟೆ.

* * *

ಸೂಫಿ ಸಂತರುಗಳ ಬಗ್ಗೆ ವಿಪರೀತವೆನ್ನುವಷ್ಟು ಅಭಿಮಾನವಿಟ್ಟುರುವ ನನ್ನಮ್ಮ, ಸೂಫಿಗಳ ರಾಜನೆಂದೇ ಪ್ರಸಿದ್ಧಿ ಹೊಂದಿದ ಬಗ್ದಾದ್‌ನ ಗೌಸುಲ್ ಆಲಂ ಮುಹ್ಯುದ್ದೀನ್ ಶೇಖ್‌ರ ದಾರ್ಷನಿಕ ಪುಣ್ಯತಿಥಿಯ ಬಳಿಕ ಮಸೀದಿಯಲ್ಲಿ ಹಂಚುವ ತಬರುಕ್ (ಪ್ರಸಾದ) ದನದ ಮಾಂಸದ್ದಾದರೆ ಅದರೊಂದಿಗೆ ಸಿಗುವ ಆಕ್ಕಿ ರೊಟ್ಟಿಯಿಂದ ಒಂದು ತುಂಡನ್ನು ಮಾತ್ರ ಸೇವಿಸಿ ಪದಾರ್ಥ (ಸುಕ) ದನ್ನು ಹಾಗೇ ಬಡುತ್ತಾರೆ. ತಿನ್ನುವುದು ಬಡುವುದು ಅವರವರಿಗೆ ಬಿಟ್ಟ ವಿಚಾರ. ದನದ ಮಾಂಸ ತಿನ್ನುವುದರಿಂದ ಅವರು ಹೇಗೆ ಸನ್ಯಸ್ತ ತಡೆಯುವುದಿಲ್ಲವೋ ಅಂತೆಯೇ ತಿನ್ನಬೇಕೆಂದು ಜಾನುವರನ್ನು ಒತ್ತಾಯಿಸುವುದೂ ಇಲ್ಲ. ಇದು ಕೇವಲ ನನ್ನ ಮನೆಯ ಕತೆಯಲ್ಲ, ಕರಾವಳಿಯ 40-45ರ ಹರೆಯಕ್ಕೆ ಮೇಲ್ಪಟ್ಟ ಬಹುತೇಕ ಮುಸ್ಲಿಮರು ದನದ ಮಾಂಸ ತಿನ್ನುವುದಿಲ್ಲ.

* * *

ನಾನು ಶಾಲಾ ಬಾಲಕನಾಗಿದ್ದಾಗ ನಮ್ಮ ಮನೆಯ ಕುಂಟ ಪೈ (ಕುಳ್ಳಿ ಹಸು) ಕಾಣೆಯಾದದ್ದಕ್ಕೆ, ನನ್ನಜ್ಜಿ ಉಳ್ಳಾಲದ ಸೂಫಿ ಸಂತ ಸಯ್ಯದ್ ಮದನಿಯವರ ದರ್ಗಾಕ್ಕೆ ಹರಕೆ ಹೊತ್ತಿದ್ದು ನನಗಿನ್ನೂ ಚೆನ್ನಾಗಿ ನೆನಪಿದೆ. ಆಗ ನನ್ನಜ್ಜಿ ಉದಯವಾಣಿ ಪತ್ರಿಕೆಯಲ್ಲಿ ಹಸು ಕಾಣೆಯಾದ ಬಗ್ಗೆ ಜಾಹೀರಾತು ನೀಡಿದ್ದರು. ಕೆಲ ದಿನಗಳ ಬಳಿಕ ಕಾಣೆಯಾದ ನಮ್ಮ ಕುಂಟ ಪೈ (ಕುಳ್ಳಿ ಹಸು) ಮರಳಿ ಬಂದಾಗ ನನ್ನಜ್ಜ-ಅಜ್ಜಿ ಮನೆಬಿಟ್ಟು ಹೋದ ಮಗ ಮರಳಿ ಬಂದಂತೆ ಸಂಭ್ರಮಿಸಿದ್ದು ಹಸುವಿಗೆ ಕುರ್ದಿ ಮಾಡಿದ್ದು (ದೃಷ್ಟಿ ನಿವಾರಿಸಲು, ಭೂತ, ಪ್ರೇತದ ಭಾದೆಯಿಂದ ತಡೆಯಲು ನೀರಿಗೆ ಸ್ವಲ್ಪ ಕಾದ ಕಬ್ಬಿಣದ ಪುಂಡನ್ನು ಹಾಕಿ, ಅದಕ್ಕೆ ಒಂದಿಷ್ಟು ಅರಿಶಿನ ಹಾಕಿ ಮುಖ, ಕೈಕಾಲು ತೊಳೆಯುವುದು) ನನಗಿನ್ನೂ ಚೆನ್ನಾಗಿ ನೆನಪಿದೆ.

* * *

ನನ್ನ ಹತ್ತಿರದ ಸಂಬಂಧಿ ಅಜ್ಜಿಯೊಬ್ಬರಿಗೆ ದನಗಳೆಂದರೆ ಅವರು ಹೊತ್ತು ಹೆತ್ತ ಮಕ್ಕಳಷ್ಟೇ ಪ್ರೀತಿ. ಅವರೊಮ್ಮೆ ತೀವ್ರ ಅನಾರೋಗ್ಯಪೀಡಿತರಾಗಿದ್ದಾಗ ದನದ ಹಟ್ಟಿಯತ್ತ ಹೋಗಲು ಸಾಧ್ಯವಾಗದೇ ಚಡಪಡಿಸುತ್ತಿದ್ದರಂತೆ. ಅವರ ಚಡಪಡಿಕೆಯ ಕಾರಣವರಿತ ಅವರ ಮಕ್ಕಳು ಹಟ್ಟಿಯಲ್ಲಿದ್ದ ದನಗಳನ್ನು ಹೊರ ತಂದು ಅವರು ಮಲಗಿದ್ದ ಕೊಠಡಿಗೆ ಕಾಣುವಂತೆ ಕಟ್ಟಿದ ಬಳಿಕ ಅವರ ಚಡಪಡಿಕೆ ನಿಂತಿತ್ತಂತೆ. ಆ ಅಜ್ಜಿ ಯಾವ ಕಾರಣಕ್ಕೂ ತಾನು ಸಾಕಿದ ಜಾನುವಾರುಗಳನ್ನು ಕಸಾಯಿಗಳಿಗೆ ಕೊಡಲಾರರು. ಅನಿವಾರ್ಯ ಕಾರಣಕ್ಕೆ ದನಗಳನ್ನು ಮಾರಬೇಕೆಂದರೆ ತನ್ನ ಮನೆಯ ಅಕ್ಕಪಕ್ಕದವರಿಗೇ ಮಾರುತ್ತಾರೆ. ಹಾಗೆ ಮಾರಿದರೆ ಅವರಿಗೆ ಅವರ ಹಸುಗಳೊಂದಿಗಿನ ಪ್ರೀತಿ, ಅನುಬಂಧ ಮುರಿಯುವುದಿಲ್ಲ, ಅವರು ಆಗಾಗ ಹೋಗಿ ತಾನು ಮಾರಿದ ದನಗಳನ್ನು ನೋಡಿ, ಅವುಗಳ ಯೋಗಕ್ಷೇಮ ವಿಚಾರಿಸಿ ಬರುವುದಿದೆ. ಹಾಗೆ ತಾನು ಮಾರಿದ ಜಾನುವಾರುಗಳನ್ನು ನೋಡಲು ಹೋಗುವಾಗೆಲ್ಲಾ ಒಂದಿಷ್ಟು ಹಸಿ ಹುಲ್ಲು ಹಿಡಿದುಕೊಂಡು ಹೋಗಿ ಅವುಗಳಿಗೆ ತಿನ್ನಿಸಿ ಬರುವುದು ವಾಡಿಕೆ. ಅವರು ತಮ್ಮ ಜಾನುವಾರುಗಳನ್ನು ಮಾರುವಾಗ "ನನ್ನ ಮಗುವಿಗೆ ಹೊಡೆಯಬೇಡಿ" "ಎನ್ನ ಬಾಲೆ ಎಂಚುಂಡು?" (ನನ್ನ ಮಗು ಹೇಗಿದೆ?) ಎಂದು ಪ್ರಶ್ನಿಸುವುದಿದೆ.

* * *

ನನ್ನ ಮನೆಯ ಪಕ್ಕದ ಹಲೀಮದಾದರಿಗೆ ಸಂತಾನಭಾಗ್ಯವಿಲ್ಲ, ಆದರೆ ಅವರು ಅದಕ್ಕೆ ಕೊರಗದೇ ತನ್ನ ಹಟ್ಟಿಯ ತುಂಬಾ ಇರುವ ಜಾನುವಾರುಗಳನ್ನು ಮಕ್ಕಳಂತೆ ಸಾಕುತ್ತಾರೆ. ವರ್ಷದ ಹಿಂದೆ ಅವರ ಪತಿ ಅಬ್ಬು ಇಬ್ರಾಯಿಚ್ಚ ಹೃದಯಾಘಾತದಿಂದ ತೀರಿಹೋದರು. ಅಬ್ಬು ಇಬ್ರಾಯಿಚ್ಚ - ಹಲೀಮದಾದ ದಂಪತಿಗಳ ಮೇಯಲು ಬಿಟ್ಟ ಹಸುಗಳಲ್ಲಿ ಒಂದು ಎಂದಿನ ಸಮಯಕ್ಕೆ ಹಿಂದಿರುಗದೇ ಇದ್ದಾಗ ಕಾದು ಕಾದು ಸುಸ್ತಾದ ದಂಪತಿಗಳು ಬೇರೆ ಬೇರೆ ದಾರಿಗಳಲ್ಲಿ ಹಸುವನ್ನು ಹುಡುಕುತ್ತಾ ಹೋದರು. ಸಾಮಾನ್ಯವಾಗಿ ಫಜೀರು ಚರ್ಚ್‌ನ ಆಕ್ಕಪಕ್ಕದಲ್ಲೇ ಮೇದು ಸಂಜೆ ನಾಲ್ಕು ಗಂಟೆಯ ಹೊತ್ತಿಗೆ ಹಿಂದಿರುಗುವ ಹಸು ಐದೂವರೆಯವರೆಗೆ ಹಿಂದಿರುಗಿ ಬರಲಿಲ್ಲ, ಕಂಗಾಲಾದ ಅಬ್ಬು ಇಬ್ರಾಯಿಚ್ಚ ಕೈಯಲ್ಲಿ ಹಗ್ಗ ಹಿಡಿದು ಫಜೀರು ಚರ್ಚ್‌ನಿಂದ ಸುಮಾರು 4 ಕಿಲೋ ಮೀಟರ್ ದೂರವಿರುವ ಇನೋಳಿಯವರೆಗೆ ಹುಡುಕುತ್ತಾ ಹೋದರು. ಕೊನೆಗೂ ಅವರ ಹಸು ಅವರಿಗೆ ಮರಳಿ ಸಿಕ್ಕಿತು. ಹಾಗೆ ಸಿಕ್ಕ ಹಸುವಿನ ಕೊರಳಿಗೆ ಹಗ್ಗ ಕಟ್ಟಿ ಹಗ್ಗದ ಒಂದು ತುದಿಯನ್ನು ಕೈಯಲ್ಲಿ ಹಿಡಿದು ನಡೆಯುತ್ತಾ ಬರಬೇಕಾದರೆ ಹಸು ಓಡತೊಡಗಿತು. ಸುಮಾರು 65ರ ಹರೆಯದ ಅಬ್ಬು ಇಬ್ರಾಯಿಚ್ಚ ಹಸುವಿನ ಕೊರಳ ಹಗ್ಗ ಹಿಡಿದು ಅದರ ಹಿಂದೆ ಓಡತೊಡಗಿದರು. ಮೊದಲೇ ಹೃದ್ರೋಗಿಯಾಗಿದ್ದ ಅಬ್ಬು ಇಬ್ರಾಯಿಚ್ಚ ಹಸುವಿನ ಎಳೆದಾಟ, ಓಡಾಟ, ಕೆನೆದಾಟದಿಂದ ಹೈರಾಣಾದರು. ಏನೇ ಆದರೂ ಹಸುವನ್ನು ಬಿಡುವಂತಿರಲಿಲ್ಲ, ಹಾಗೂ ಹೀಗೂ ಹಸುವಿನ ಹಿಂದೆ ಓಡುತ್ತಾ ಮನೆ ತಲುಪಿದವರು ಅಲ್ಲೇ ಕುಸಿದರು. ಆಲ್ಲಿಂದ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಅಬ್ಬು ಇಬ್ರಾಯಿಚ್ಚ ಹಲೀಮದಾದರಿಗೆ ಮಕ್ಕಳಾಗಿಲ್ಲ ಎಂಬ ಕಾರಣಕ್ಕೆ ಎರಡನೇ ಮದುವೆಯಾಗಿದ್ದರು. ಎರಡನೇ ಹೆಂಡತಿಯಲ್ಲಿ ಅಬ್ಬು ಇಬ್ರಾಯಿಚ್ಚರಿಗೆ ಸಂತಾನ ಭಾಗ್ಯ ದಕ್ಕಿತ್ತು. ಅಬ್ಬು ಇಬ್ರಾಯಿಚ್ಚ ಮನೆ ತಲುಪಿ ಕುಸಿದವರು ತಮ್ಮ ಇಬ್ಬರು ಹೆಂಡಂದಿರನ್ನು ಕರೆದು ಉಯಿಲು ಹೇಳಿದ್ದರು. (ಬಹುಶಃ ಅಬ್ಬು ಇಬ್ರಾಯಿಚ್ಚರಿಗೆ ತನ್ನ ಮರಣ ಸನ್ನಿಹಿತವಾದದ್ದು ತಿಳಿದಿರಬೇಕು). ಹಲೀಮಾ, ನಾನು ಮರಣ ಹೊಂದಿದರೆ ನೀನು ಮರೆಯಲ್ಲಿ (ಇದ್ದತ್) ಕೂರಬೇಡ. ನೀನು ಮರೆಯಲ್ಲಿ ಕೂತರೆ ನಮ್ಮ ಜಾನುವಾರುಗಳು ಅನಾಥವಾದೀತು (ಇದ್ದತ್ ಅಥವಾ ಮರೆಯಲ್ಲಿ ಕೂರುವುದೆಂದರೆ ಗಂಡ ತೀರಿಹೋದರೆ ಹೆಂಡತಿ ತನ್ನ ಆಭರಣಗಳನ್ನೆಲ್ಲಾ ಕಳಚಿ, ಶ್ವೇತ ವಸ್ತ್ರಧಾರಿಣಿಯಾಗಿ ನಾಲ್ಕು ತಿಂಗಳು ಹತ್ತು ದಿನ ಹೊರಗಿನ ಗಂಡಸರನ್ನು ನೋಡದೇ ಶೋಕಾಚರಣೆ ಮಾಡುವುದು). ಹೀಗೆ ಉಯಿಲು ಮಾಡಿದ ಅಬ್ಬು ಇಬ್ರಾಯಿಚ್ಚ ಮೂರು ದಿನಗಳ ಬಳಿಕ ಆಸ್ಪತೆಯಿಂದ ಮರಳಿದ್ದು ಕೋಮಾ ಸ್ಥಿತಿಯಲ್ಲಿ. ಕೆಲ ಗಂಟೆಗಳ ಬಳಿಕ ಅಬ್ಬು ಇಬ್ರಾಯಿಚ್ಚ ಇಹದ ಪಯಣ ಮುಗಿಸಿ ಹೊರಟಿದ್ದರು. ಅವರ ಮರಣದ ಬಳಿಕ ಆಟೋ ಓಡಿಸುತ್ತಿದ್ದ ಅವರ ಪುತ್ರ ಆಶ್ರಫ್ ತನ್ನ ಆಟೋ ಚಾಲನೆ ವೃತ್ತಿ ತೊರೆದು ಕೃಷಿ ಮತ್ತು ತನ್ನ ತಂದೆಯ ಹುಬಾಲನೆಯ ವೃತ್ತಿಯನ್ನು ಮುಂದುವರಿಸುತ್ತಿದ್ದಾನೆ.

ಇವುಗಳನ್ನು ಬರೆದಿದ್ದು ಯಾರನ್ನೋ ಖುಷಿಪಡಿಸಲಲ್ಲ.
ನನ್ನ ಜನರ ಭಾವನೆಗಳಿಗೆ ಧ್ವನಿ ನೀಡಲಷ್ಟೆ.....

● ಇಸ್ಮತ್ ಫಜೀರ್

ಮಿನಿರುವುದಿಲ್ಲ, ದೊಡ್ಡ ನಾಯಿಗಳನ್ನೇ ಕೆಣಕಿ ತನ್ನ ತೆಯಿದ್ದವರು ಹೋಗಿ ಜಗಳಕ್ಕೆ ಬೀಳುವಂತೆ ಡುತ್ತಾಳೆ. ಶಿವರಾಂ ತೋಟದ ಎದುರು ಮತ್ತೊಂದು ಟವಿದೆ. ಮಧ್ಯೆ ರಸ್ತೆ ಹಾದುಹೋಗಿದೆ. ತೋಟದ ಯಲ್ಲಿ ಕುಳಿತ ಇವಳು ಆ ಕಡೆಯಿರುವ ಎರಡು ಯಿಗಳನ್ನು ಆಗಾಗ್ಗೆ ಜಗಳಕ್ಕೆ ಕರೆಯುತ್ತಾಳೆ. ಇದಕ್ಕೆ ದನ ಎದುರು ತೋಟದ ನಾಯಿಗಳು ಗಂಡಹೆಂಡಿರು.

ಅದರ್ಶ ದಂಪತಿಗಳ ಅನ್ಯೋನ್ಯತೆಯನ್ನು ಸಹಿಸದ ಳು ಜಗಳಕ್ಕೆ ಕರೆಯದ ದಿನವೇ ಇಲ್ಲ, ಅವರೂ ವತ ತಮ್ಮ ಗಡಿಯಲ್ಲಿ ನಿಂತು ಬಾಯಿಗೆ ಬಂದಂತೆ ್ರವು ಸಾಕಾಗಿಹೋಗುತ್ತಿದ್ದರು. ಇದು ಬಹಳ ನಗಳಿಂದಲೂ ನಡೆದುಕೊಂಡು ಬರುತ್ತಿರುವ ಗಡಿ ಗಳವಾಗಿತ್ತು.

ಎದುರು ತೋಟದವರಿಗೂ ಕೂಡ ಶಿವರಾಂ ಮತ್ತು ವಾರ ಕಂಡರೆ ಆಪ್ಯಕ್ಯವೆ. ಜಾತಿಯೂ ಇದಕ್ಕೆ ದನವಿರಬಹುದು. ಈ ಬಗ್ಗೆ ಶಿವರಾಂರ ಅಸಹನೆಯನ್ನು ಬಿ ಮತ್ತವಳ ಪಟಾಲಂ ಗ್ರಹಿಸಿದ್ದಾರೆ. ಎದುರುಗಡೆ ನ ನಮಗಷ್ಟೇ ಅಲ್ಲ ನಮ್ಮ ಯಜಮಾನರಿಗೂ ವೈರಿಗಳು ಬುದನ್ನು ಎಂದೋ ತಿಳಿದುಕೊಂಡಿದ್ದರು. ಆದರೇನು ಘಾ ಗಡಿಯಂತಹ ಸುಭದ್ರ ಗೇಟನ ಗಡಿಯಿದ್ದುದರಿಂದ ದನ್ನು ಮೀರಿ ತಮ್ಮ ಶೌರ್ಯ ತೋರಲಾಗಿರಲಿಲ್ಲ.

ಹೀಗಿರಲಾಗಿ ಒಂದು ದಿನ ರೂಬಿ ವಿಕಾಪಿಕೆ ಗಡಿದಾಟಿ ೋಗಿ ಎದುರು ತೋಟದ ನಾಯಿಗಳನ್ನು ಜಗಳಕ್ಕೆ ದಿದ್ದಾಳೆ. ಅವಳ ಈ ಧೈರ್ಯಕ್ಕೆ ಕಾರಣ ತನ್ನ ಪರಿವಾರದ ಮ್ಮಿ, ಪಿಂಕಿ, ಕುಳ್ಳ ಬರುತ್ತಾರೆ ಎಂಬುದಾಗಿತ್ತು. ಆದರೆ ಹಳ ದೂರದಲ್ಲಿದ್ದ ಅವರಾರೂ ಬರಲಾಗಲಿಲ್ಲ. ರೂಬಿ ಕಾಗುವಷ್ಟು ಕದಿಸಿಕೊಂಡು ಬಂದಳು.

ಅವಳು ನರಳುತ್ತಾ, ಕುಂಟುತ್ತಾ, ನೋವಿನಿಂದಲೇ ಣು ಹೇಳಿದ್ದನ್ನು ಗ್ರಹಿಸಿದ ಇತರರು ರೂಬಿಯ ಎಲ್ಲ ಾಗಗಳನ್ನೂ ಮೂಸಿ ನೋಡಿ, ಗಾಯದ ಪ್ರಮಾಣವನ್ನು ಂಸಿ, ಪರಸ್ಪರ ಮುಖ ನೋಡಿಕೊಂಡರು. ಪ್ರತೀಕಾರಕ್ಕಾಗಿ ೋದರೆ ಗಡಿಯಿದೆ. ಆದ್ದರಿಂದ ಗಡಿಗೇ ಹೋಗಿ ಕುಳಿತು ಮಧು ತೋಟದ ನಾಯಿಗಳ ಚಲನೆಯನ್ನು ಸುಮಾರು ೂರು ತಾಸು ಗ್ರಹಿಸಿ ಬಂದರು.

ಅಷ್ಟರಲ್ಲಿ ಶಿವರಾಂ ಡಾಕ್ಟರನ್ನು ಕರೆಸಿ ರೂಬಿಗೆ ಚಿಕಿತ್ಸೆ ಾಡಿಸಿ ಮಲಗಿಸಿದ್ದರು. ಎಲ್ಲರೂ ಬಂದು ಸಾಂತ್ವನ ಹೇಳಿ ಸ್ಟ ಹೋಗಿ ಗಡಿಯಲ್ಲಿ ತಮ್ಮ ವೈರಿಗಳ ಚಲನವಲನ ಂಸಿ ಬರತೊಡಗಿದರು.

ಚೇತರಿಸಿಕೊಂಡ ರೂಬಿ ಪುನಃ ಜಗಳಕ್ಕೆ ರೆಡಿಯಾದಳು. ವರೆ ಒಬ್ಬಳೇ ಗಡಿಭಾಗಕ್ಕೆ ಹೋಗಿ ಕಾದಾಟಕ್ಕೆ ಕರೆಯಲು ಳೆಯ ಗಾಯಗಳು ನೆನಪಾದವು. ಹೀಗೆ ಅವಳ ಒಳಗುದಿ ದಿಗಾಗಿ ಕಾಯುತ್ತ

ಕೃಷ್ಣಾಚಾರಿಯ ಭಾಷಾಭಿಮಾನ



I

ಆಸ್ಥಾನ ಗಾಯಕ, ಸಂಗೀತ ವಿದ್ವಾನ್ ಎಂದೆಲ್ಲ ಪ್ರಖ್ಯಾತನಾಗಿದ್ದ ಕೃಷ್ಣಾಚಾರಿಗೆ ಈ ದಿನ ಕೋಪ ನೆತ್ತಿಗೇರಿತ್ತು. ಜ್ವಾಲಾಮುಖಿಯಂತೆ ಬುಸುಗುಡುತ್ತಿದ್ದ. ಕೋಪದ ಭರದಲ್ಲಿ ಕೈ ಕಾಲುಗಳು ತರತರ ನಡುಗತೊಡಗಿದವು. ಇದಕ್ಕೆ ಎರಡು ಕಾರಣಗಳಿದ್ದವು. ಮೊದಲನೆಯದು ನಟ್ಟುವಾರ್ ನಾಗರತ್ನಮ್ಮ ಇತ್ತೀಚೆಗೆ ಏನೇನೋ ಸುಖಾಬುಗಳನ್ನು ಹೇಳಿ ಕೃಷ್ಣಾಚಾರಿಗೆ ರಾತ್ರಿ-ಸೇವೆಯನ್ನು ಮಾಡಲು ಒಲ್ಲೆ ಅಂದಿದ್ದು ಒಂದು ಕಾರಣವಾದರೆ, ಆದನ್ನ ವೈರಿಯಾದ ಮತ್ತೋರ್ವ ಆಸ್ಥಾನ ಗಾಯಕ ವಾಸುದೇವ ದೀಕ್ಷಿತನ ಜೊತೆಗೆ ಆಕೆ ಸಮಯ ಕಳೆಯುತ್ತಿದ್ದುದು ಮತ್ತೊಂದು ಕಾರಣವಾಯಿತು. ತನಗಾಗಿ ಮೀಸಲಾಗಿದ್ದ ಹಾಸಿಗೆಯಲ್ಲಿ ವಾಸುದೇವ ಪವಡಿಸಿದ್ದು ತನ್ನ ಜೀವನದಲ್ಲುಂಟಾದ ಘೋರ ಅವಮಾನಗಳ ಅಂತಿಮಘಟ್ಟವೆಂದು ಕೃಷ್ಣಾಚಾರಿ ಕೊನೆಗೂ ನಿರ್ಧರಿಸಿಬಿಟ್ಟ. ಈ ನಿರ್ಧಾರಕ್ಕೆ ಅಂತಿಮ ಚರಮ ಗೀತೆಯನ್ನು ಹಾಡಿ, ನಾಗರತ್ನಮ್ಮ ಮತ್ತು ವಾಸುದೇವರ ಮೇಲೆ ಸೇಡನ್ನು ತೀರಿಸಿಕೊಳ್ಳಬೇಕೆಂದು ಕಾಯುತ್ತಿದ್ದ ಕೃಷ್ಣಾಚಾರಿಗೆ ಆ ಘಳಿಗೆ ಅತಿ ಶೀಘ್ರವಾಗಿ ದೊರೆಯುತ್ತದೆಂದು ನಿರೀಕ್ಷಿಸಿರಲಿಲ್ಲ.

II

ನಾಗರತ್ನಮ್ಮ ನಟ್ಟುವಾರ್ ಜಾತಿಗೆ ಸೇರಿದ ದೇವದಾಸಿ. ಚತುರ್ಮಾರ್ಗದಿಂದ ವಲಸೆ ಬಂದು ಮೈಸೂರಿನಲ್ಲಿ ತನ್ನ ಸೌಂದರ್ಯ ಮತ್ತು ನೃತ್ಯದ ನಿಪುಣತೆಯಿಂದ ಮೈಸೂರು ಆಸ್ಥಾನ ಗಾಯಕರ ಮತ್ತು ನೃತ್ಯಗಾರರ ತನು, ಮನ ಮತ್ತು ಧನವನ್ನು ಗೆದ್ದಿದ್ದಳು. ಅವಳಲ್ಲಿ ಅನುರಕ್ತರಾದ ಅನೇಕ ಗಾಯಕರಲ್ಲಿ ಕೃಷ್ಣಾಚಾರಿ ಒಬ್ಬ. ಮಹಾರಾಜರ ಆಸ್ಥಾನದಲ್ಲಿ 'ಗಾಯಕ ಶಿಖಾಮಣಿ'ಯೆಂದು ಪ್ರಸಿದ್ಧಿ ಪಡೆದಿದ್ದ ಕೃಷ್ಣಚಾರಿ ತ್ಯಾಗರಾಜರ ಕೃತಿಗಳನ್ನು ಹಾಡಲು ಶುರು ಮಾಡಿದರೆ ಎಲ್ಲರೂ ಮಂತ್ರಮುಗ್ಧರಾಗಿ ಬಿಡುತ್ತಿದ್ದರು. ಸಂಸ್ಕೃತದ ಕೃತಿಗಳನ್ನು ಸಂಗೀತಕ್ಕೆ ಅಳವಡಿಸಿಕೊಂಡ ಅವರ ನೈಪುಣ್ಯತೆಗೆ ಸ್ವತಃ ಮಹಾರಾಜರೆ ತಲೆದೂಗಿದ್ದರು. ಆಸ್ಥಾನದಲ್ಲಿದ್ದ ಇತರ ಎಲ್ಲಾ ಗಾಯಕರುಗಳಿಗೆ ಅವನೇ ಗುರುವರ್ಯ. ಹೀಗಿದ್ದ ಕೃಷ್ಣಾಚಾರಿಗೆ ನಾಗರತ್ನಮ್ಮನನ್ನು ಒಲಿಸಿಕೊಳ್ಳಲು ಕಷ್ಟ ಪಡಬೇಕಾಗಿರಲಿಲ್ಲ. ಹಣ, ಖ್ಯಾತಿಯ ಜೊತೆಗೆ ಮಹಾರಾಜ ಮತ್ತು ದಿವಾನರ ಸ್ನೇಹ ಬೆಳೆಸಿ ಪ್ರಭಾವಶಾಲಿಯಾಗಿದ್ದ ಕೃಷ್ಣಾಚಾರಿಗೆ ನಾಗರತ್ನಮ್ಮ ಸಹಜವಾಗಿಯೇ ತನ್ನ ತನುವನ್ನು ಅರ್ಪಿಸಿ, ಧನವನ್ನು ಗೆದ್ದಿದ್ದಳು. ಕೃಷ್ಣಾಚಾರಿಯ ಸಂಗದಿಂದಲೇ ನಾಗರತ್ನಮ್ಮಳಿಗೆ ಆಸ್ಥಾನದಲ್ಲಿ ಗೌರವ, ಮರ್ಯಾದೆಗಳು ಸಲ್ಲುತ್ತಿದ್ದವು. ಎಲ್ಲವೂ ಸುಗಮವಾಗಿ ಸಾಗುತ್ತಿರಬೇಕಾದರೆ ಕೃಷ್ಣಾಚಾರಿಯ ಸ್ಥಾನಕ್ಕೆ ಪಾಂಡಿತ್ಯಕ್ಕೆ ಮತ್ತು ಸಂಗೀತಕ್ಕೆ ಸವಾಲೆಸೆಯುವಂತೆ ವಾಸುದೇವ ದೀಕ್ಷಿತನ ಆಗಮನವಾಯಿತು. ವಾಸುದೇವ 'ಮ್ಯೂಸಿಕ್ ಅಕಾಡೆಮಿ ಆಫ್ ಮದ್ರಾಸ್' ಶಾಲೆಯಲ್ಲಿ ಕರ್ನಾಟಕ ಸಂಗೀತವನ್ನು ಕಲಿತಿದ್ದ. ಅಲ್ಲಿನ ಪ್ರಸಿದ್ಧ ಮುತ್ತುಸ್ವಾಮಿ ಜೋಯಿಸರ ಶಿಷ್ಯನಾಗಿ, ಅನೇಕ ಸಂಗೀತ ಕಛೇರಿಗಳಲ್ಲಿ ಸುಶ್ರಾವ್ಯವಾಗಿ ಹಾಡುತ್ತಿದ್ದ. ಆಷ್ಟೇ ಅಲ್ಲ, ಅಲ್ಲಿ ಸಂಗೀತದ ಅನೇಕ ಸಂಘ, ಸಂಸ್ಥೆಗಳನ್ನು ಹುಟ್ಟುಹಾಕುವಲ್ಲಿ ಅವನು ಪ್ರಮುಖ ಪಾತ್ರವಹಿಸಿದ್ದ.

ಒಮ್ಮೆ ಮದ್ರಾಸಿನ ಪ್ರವಾಸದಲ್ಲಿದ್ದಾಗ 'ರಾಮೋತ್ಸವ'ದಂದು ಮಹಾರಾಜರು ವಾಸುದೇವನ ಸಂಗೀತವನ್ನು ಕೇಳುವ ಸಂದರ್ಭ ಒದಗಿಬಂತು. ಈಗಾಗಲೇ ವಾಸುದೇವನ ಖ್ಯಾತಿಯನ್ನು ಕೇಳಿದ್ದ ಮಹಾರಾಜರು ಅವನ ಕಂಠ ಮಾಧುರ್ಯಕ್ಕೆ ಮಾರುಹೋಗಿ ಅವನನ್ನು ಮದ್ರಾಸಿನಿಂದ ಕರೆಯಿಸಿ ತಮ್ಮ ಆಸ್ಥಾನದಲ್ಲಿ ರಾಜಾಶ್ರಯ ನೀಡಿದರು. ಕೃಷ್ಣಾಚಾರಿಗಳಿಗಿಂತ ವಯಸ್ಸಿನಲ್ಲಿ ಕಿರಿಯವನಾಗಿದ್ದ ವಾಸುದೇವ ಆಸ್ಥಾನ ಗಾಯಕರುನೇಕರಲ್ಲಿ ಒಬ್ಬನಾಗಿ ಇರುತ್ತಾನೆಂದು, ತಮ್ಮ ಖ್ಯಾತಿ, ಸ್ಥಾನಕ್ಕೆ ಧಕ್ಕೆಯಾಗುವುದಿಲ್ಲವೆಂದು ಕೃಷ್ಣಾಚಾರಿ ಮೊದಮೊದಲು ಯೋಚಿಸಿದ್ದ. ಆದರೆ ಕಾಲಕ್ರಮೇಣ ವಾಸುದೇವ ತನ್ನನ್ನು ಮೀರಿಸುತ್ತಿದ್ದಾನೆಂದು ತಿಳಿಯಲು ಕೃಷ್ಣಾಚಾರಿಗೆ ಹೆಚ್ಚು ಹೊತ್ತು ಬೇಕಾಗಲಿಲ್ಲ. ಸಂಗೀತ ಕ್ಷೇತ್ರದಲ್ಲಿ ವಾಸುದೇವ ತನಗಿಂತ ಶ್ರೇಷ್ಠನಲ್ಲದಿದ್ದರೂ, ಸರಿಸಮನಾಗಿ ನಿಲ್ಲುವ ಅಂಶ ಕೃಷ್ಣಾಚಾರಿಗೆ ಎಚ್ಚರಿಕೆಯ ಗಂಟೆಯಾಗಿ ಬಾರಿಸಿತು. ಹೀಗೆ ಮುಂದುವರೆದರೆ ತನ್ನನ್ನು ವಾಸುದೇವ ಮೀರಿಸುವನೆಂದು ಅರಿವಾಗತೊಡಗಿತು. ವಾಸುದೇವ ಮಹಾರಾಜರಿಗೆ ಹತ್ತಿರವಾಗುತ್ತಿರುವುದು ಕೃಷ್ಣಾಚಾರಿಗೆ ತಡೆಯದಾಯಿತು. ಇತರ ಗಾಯಕರು ಕೂಡ ಇವನ ಹೊಟ್ಟೆಕಿಚ್ಚಿಗೆ ತುಪ್ಪವನ್ನೆರೆದರು. ಆರಮನೆಯ ಸಂಗೀತಾ ಸಭಾದ ಮುಖ್ಯಸ್ಥ ಸ್ಥಾನಕ್ಕೆ ವಾಸುದೇವನೇ ಮುಂದಿನ ವಕ್ತಿ ಎಂಬಂತೆ ದಿವಾನರು ಮಾತನಾಡಿಕೊಳ್ಳುತ್ತಿದ್ದ ಅಂಶ ಕೃಷ್ಣಾಚಾರಿಗೆ ಸಹಿಸದಾಯಿತು. ಸಂಗೀತ ಕ್ಷೇತ್ರದಲ್ಲಿ ಅವನ ಪ್ರಾಮುಖ್ಯತೆಯನ್ನು ಕಡಿಮೆ ಮಾಡಲು ಆಸಾಧ್ಯವೆಂದು ಅರಿತ ಕೃಷ್ಣಾಚಾರಿ ವಾಸುದೇವನನ್ನು ತಡೆಯಲು ಬೇರೆ ರೀತಿಯ ಉಪಾಯ ಕೈಗೊಳ್ಳಬೇಕೆಂದು ಯೋಜಿಸಿದ. ಈ ಪರಿಸ್ಥಿತಿಯ ಬೆಂಕಿಗೆ ತುಪ್ಪ ಸುರಿಯುವಂತೆ ಆಗಿದ್ದು ಮಹಾರಾಜರು ಹೊರಡಿಸಿದ 'ಗಾಯಕರ ಸಂಬಳ' ಆದೇಶ.

III

"ನೋಡಿದಿರಾ ಕೃಷ್ಣಾಚಾರಿಗಳೆ, ಹಾಡ ಪಳಬರಾಗಿದ್ದರೂ, ಹೊಸಬರಿಗೆ ಮಹಾರಾಜರು ಹೇಗೆ ಮಣೆ ಹಾಕುತ್ತಿದ್ದಾರೆ?!"

ಹಣೆಯ ಮೇಲೆ ಚಿಂತೆಯ ಗೆರೆಗಳನ್ನು ಹೊತ್ತ ಕೃಷ್ಣಾಚಾರ್ಯರು "ಯಾವ ವಿಚಾರದ ಬಗ್ಗೆ ನೀವು ಇಷ್ಟೊಂದು ತಲೆ ಕೆಡಿಸಿಕೊಂಡಿದ್ದೀರಾ, ನರಸಿಂಹರಾಯರೆ?"

"ಅದೇ ಮಹಾರಾಜರ ಹೊಸ ಸಂಬಳದ ನೀತಿ. ತಮ್ಮ ಕಿವಿಗೆ ಬೀಳಲಿಲ್ಲವೇ?"

"ಹೌದು. ನನ್ನ ಕಿವಿಗೂ ಬಿತ್ತು"

"ನಿನ್ನೆ, ಮೊನ್ನೆ ಬಂದು ವಕ್ಕರಿಸಿಕೊಂಡ ಆ ವಾಸುದೇವ ಮಹಾರಾಜರಿಗೆ ಮುಖ್ಯವಾಗಿ ಬಿಟ್ಟ. ಅವನು ಏನು ಹಾಡುತ್ತಾನೆಂದು ಅವನ ಸಂಬಳವನ್ನು ಹೆಚ್ಚಿಸಿದ್ದಾರೆ ಆ ಬ್ರಹ್ಮನಿಗೇ ಗೊತ್ತು? ಅವನ ಕಂಠದ ದನಿಯಂತೂ ಕೊರಳಿಗೆ ಹಗ್ಗ ಸುತ್ತಿದಾಗ ಯಾವ ದನಿ ಹೊರಡುತ್ತದೆಯೋ ಹಾಗೆ ಇದೆ. ನಾವು ಅವನಿಗಿಂತ ಏನು ಕಡಿಮೆ ಅಂತಿನಿ?"

"ಅಂದರೆ, ಅವನಿಗಿಂತ ಕೆಟ್ಟದಾಗಿ ನಾವು ಹಾಡುತ್ತೀವೆಂದು ತಮ್ಮ ಭಾವನೆಯೆ?"

"ಇಲ್ಲ! ಇಲ್ಲ! ತಾವು ಹಾಸ್ಯ ಮಾಡುತ್ತಿದ್ದೀರಿ. ಮೂವತ್ತು ವರ್ಷಗಳಿಂದ ನಾವು ಇಲ್ಲಿ ಇರುವವರು. ಕರ್ನಾಟಕ ಸಂಗೀತಕ್ಕೆ ನಮ್ಮ ಜೀವನವನ್ನು ಮುಡಿಪಾಗಿಸಿದ್ದೇವೆ. ತಾವಂತು ಮೈಸೂರಿನ ಘನತೆವೆತ್ತ ಮಹನೀಯರು. ನಿಮ್ಮ ಕಂಠವಂತೂ ಮೈಸೂರಿನ ಮುಸುಟ್ಟ ನಿಮ್ಮನು ಪಡೆಗುನೆಪಿ, ನಿನ್ನೆಮೊನ್ನೆ ಎಲ್ಲಿಂದಲೋ ಬಂದ ಪರದೇಸಿಗೆ ಮಣೆ ಹಾಕುತ್ತಿರುವುದು ನನಗೆ ಸರಿ ಕಾಣುತ್ತಿಲ್ಲ."

ನರಸಿಂಹರಾಯರ ಒಂದೊಂದು ಮಾತುಗಳು ಕೃಷ್ಣಾಚಾರಿಗಳ ಎದೆಯನ್ನು ಗರಗಸದಂತೆ ಕೊರೆಯತೊಡಗಿತು. ಅತ್ತ ಕಡೆ ವಾಸುದೇವನ ಕಾರ್ಯಕ್ಷೇತ್ರ ಕೃಷ್ಣಾಚಾರ್ಯನ ನಿದ್ದೆ ಕೆಡಿಸಿತ್ತು. ಮದ್ರಾಸಿನಲ್ಲಿರುವಂತೆ ಅನೇಕ ಸಂಗೀತದ ಶಾಲೆ, ಸಂಘ-ಸಂಸ್ಥೆಗಳನ್ನು ಆತ ಮೈಸೂರಿನಲ್ಲಿ ಸ್ಥಾಪಿಸಿದ. ಮಹಾರಾಜರ ಕೈನಿಂದಲೇ ಈ ಎಲ್ಲಾ ಕಾರ್ಯಗಳನ್ನು ಮಾಡಿಸಿದ. ಕರ್ನಾಟಕ ಸಂಗೀತದಲ್ಲಿ ಪಾಶ್ಚಾತ್ಯ ಸ್ಪರ್ಶವನ್ನು ಮೊಟ್ಟ ಮೊದಲ ಬಾರಿಗೆ ಶುರುಮಾಡಿದಾಗ ಮಹಾರಾಜರು ಅವನ ಕುಶಲತೆಯನ್ನು, ಕಲಾನೈಪುಣ್ಯತೆಯನ್ನು ಹೊಗಳಿದ್ದೇ ಹೊಗಳಿದ್ದು. ಶಂಕರಾಭರಣ ರಾಗವನ್ನು ಪಾಶ್ಚಾತ್ಯ ನೋಟುಗಳ ಮೂಲಕ ಹಾಡಿದ್ದು ಮಹಾರಾಜರ ವಿಶೇಷ ಪ್ರಶಂಸೆಗೆ ಪಾತ್ರವಾಯಿತು. ಕೃಷ್ಣಾಚಾರಿಗಳ 'ಸಿಂಹನಂದನ' ಎಂಬ ಕಠಿಣವಾದ ತಾಳವೇ ಇದುವರೆಗೂ ಮೈಸೂರಿನಲ್ಲಿ ಪ್ರಸಿದ್ಧವಾದ ದಾಖಲೆಯಾಗಿತ್ತು ಆದರೆ ಈಗ ವಾಸುದೇವನ ಶಂಕರಾಭರಣ ರಾಗವು ಸಿಂಹನಂದನ ತಾಳವನ್ನು ಹಿಂದಕ್ಕೆ ಹಾಕಿತ್ತು.

ನಿಧಾನವಾಗಿ ಕೃಷ್ಣಾಚಾರಿ, ನರಸಿಂಹರಾಯ ಮತ್ತು ಇತರರು ವಾಸುದೇವನ ಮೇಲೆ ಕಿಡಿಕಾರಲು ಶುರು ಮಾಡಿದರು. ಅವನು 'ಹೊರಗಿನವನು', 'ಪರಕೀಯ' ಎಂದು ಎಲ್ಲರೆದುರಿಗೆ ಹೇಳತೊಡಗಿದರು. ಒಮ್ಮೆ ಕೃಷ್ಣಾಚಾರಿ ಮಹಾರಾಜರಿಗೆ ಮೂಗರ್ಜಿ ಬರೆದು, ವಾಸುದೇವ ದೀಕ್ಷಿತನಿಗೆ ಹೆಚ್ಚು ಸಂಬಳ, ವಿಶೇಷ ರಿವಾಜುಗಳನ್ನು ನೀಡಿರುವುದರ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸಿದ. ಸ್ಥಳೀಯರನ್ನು ಬದಿಗಿಟ್ಟು ಹೊರಗಿನವನನ್ನು ಹೀಗೆ ವಿಶೇಷವಾಗಿ ಗೌರವದಿಂದ ಕಾಣುವುದು ಸರಿಯೇ, ಇದೊಂದು ಪಕ್ಷಪಾತದ ಅಂಶವಲ್ಲವೇ ಎಂದು ಕೇಳಿದ. ಆದರೆ ಈ ಪತ್ರದ ಪರಿಣಾಮ ಏನೂ ಆಗಲಿಲ್ಲ. ಯಾರು ಬರೆದದ್ದು ಎಂದು ಗೊತ್ತಾಗದೇ ಇದ್ದರಿಂದ ಮಹಾರಾಜರು ಮೂಗರ್ಜಿಯನ್ನು ಕಸದಬುಟ್ಟಿಗೆ ಎಸೆದರು.

IV

ಕೃಷ್ಣಾಚಾರಿ ಮತ್ತು ನರಸಿಂಹರಾಯರ ಬಿಸಿ ವಾಸುದೇವನನ್ನು ತಟ್ಟದೆ ಬಿಡಲಿಲ್ಲ. ಅವನೂ ಕೂಡ ಬ್ರಹ್ಮ ಪಿಂಡನಲ್ಲವೇ! ಕೃಷ್ಣಾಚಾರಿಯ ಯೋಜನೆಗಳಿಗೆ ಪ್ರತಿತಂತ್ರ ಹೂಡಲು ಶುರು ಮಾಡಿದ. ಮೊದಲಿಗೆ ಅವನು ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳುವಲ್ಲಿ ನಿರತನಾದ. ಮದ್ರಾಸಿನಿಂದ ತನ್ನ ಅನೇಕ ಸಂಬಂಧಿಕರು, ಸ್ನೇಹಿತರು ಮತ್ತು ಹಿತೈಷಿಗಳನ್ನು ಮೈಸೂರಿಗೆ ಕರೆಯಿಸಿ ತಾನು ಶುರು ಮಾಡಿದ ಸಂಗೀತದ ಸಂಘ, ಸಂಸ್ಥೆಗಳಿಗೆ ನೇಮಕ ಮಾಡಿದ. ಅನೇಕ ತಮಿಳು ಕೃತಿಗಳನ್ನು ಸಂಗೀತಕ್ಕೆ ಅಳವಡಿಸಿ ಹಾಡತೊಡಗಿದ. ಪರಿಚಿತ ಕಾಲಕ್ಷೇಪಗಳನ್ನು ನಡೆಸುತ್ತಿರುವಾಗ ಸೂರಾರು ಜನ ಜಮಾಯಿಸಲು ಶುರುವಾದರು. ತಂಜಾವೂರಿನ ಸರಸ್ವತಿ ಮಹಲ್‌ನಲ್ಲಿ ದೊರಕಿದ ಅನೇಕ ಗ್ರಂಥಗಳನ್ನು ಅರಮನೆಯ ಆಜ್ಞೆ ಮೇರೆಗೆ ಮನೆಯಿಂದಲೇ ಪ್ರಕಟಿಸಿದ್ದರಿಂದ ಅವನ ಖ್ಯಾತಿ ಇಮ್ಮಡಿಯಾಯಿತು. ಮೈಸೂರಿನ ಎಲ್ಲಾ ಸಂಗೀತ ಸಭೆಗಳಲ್ಲಿ ವಾಸುದೇವನ ಮಾತೆ. ಎಲ್ಲರ ಬಾಯಲ್ಲೂ ಅವನ ಸಂಗೀತವೇ?! ತನ್ನ ಸ್ಥಾನ ಸಂಪೂರ್ಣವಾಗಿ ಭದ್ರಗೊಳಿಸಿಕೊಂಡ ಮೇಲೆ, ವಾಸುದೇವ ಕೃಷ್ಣಾಚಾರಿಯ ಮೇಲೆ ಕಣ್ಣು ಹಾಕಿದ.

"ಮಹಾಪ್ರಭುಗಳಿಗೆ ವಂದನೆ"

ಯಾವುದೋ ಆಡಳಿತ ವಿಷಯದಲ್ಲಿ ದಿವಾನರ ಜೊತೆಗೆ ಚರ್ಚಿಸುತ್ತಿದ್ದ ಮಹಾರಾಜರು ದನಿ ಬಂದ ಕಡೆಗೆ ತಿರುಗಿದಾಗ ವಾಸುದೇವ ದೀಕ್ಷಿತ ಎದುರಿಗೆ ನಿಂತಿದ್ದಾನೆ. ದಿವಾನರನ್ನು ಬೀಳ್ಕೊಟ್ಟು ವಾಸುದೇವನನ್ನು ಪಕ್ಕದಲ್ಲಿ ಕುಳ್ಳಿರಿಸಿ, "ಏನು ವಾಸುದೇವರೆ? ಏನು ಬಂದದ್ದು? ಎಲ್ಲಾ ಕ್ಷೇಮವೆ?"

"ಮಹಾಪ್ರಭುಗಳ ಆಶ್ರಯದಲ್ಲಿ ಎಲ್ಲವೂ ಕ್ಷೇಮವೆ. ಅದರ ಚಿಂತೆ ನಮಗಿಲ್ಲ. ಈಗ ಬಂದದ್ದು ತಮ್ಮ ಹತ್ತಿರ ಒಂದು ವಿಷಯವನ್ನು ಅರಿಕೆ ಮಾಡಿಕೊಳ್ಳಲು."

"ಏನದು? ಸಂಗೀತಕ್ಕೆ ಸಂಬಂಧಿಸಿದ್ದೆ?"

"ಹೌದು, ಪ್ರಭು. ಮೈಸೂರಿನ ಸಂಗೀತಕ್ಕೆ ಸಂಬಂಧಿಸಿದ್ದು. ಇಲ್ಲಿ ಸಂಗೀತ ಕೇವಲ ಆಸ್ಥಾನಕ್ಕೆ ಮಾತ್ರ ಸೀಮಿತವಾಗಿದೆ. ಅದನ್ನು ಇನ್ನೂ ಹೆಚ್ಚು ಜನಪ್ರಿಯಗೊಳಿಸುವ ಅವಶ್ಯಕತೆ ಇದೆ. ಜನಸಾಮಾನ್ಯರಿಗೆ ಅದು ತಲುಪಬೇಕಾಗಿದೆ. ಅದಕ್ಕಾಗಿ ಸಂಗೀತೋತ್ಸವವನ್ನು ನಡೆಸುವ ಆಪೇಕ್ಷೆ ನನ್ನದು. ತಂಜಾವೂರು ಮತ್ತು ಮದ್ರಾಸಿನಿಂದ ಗಾಯಕರನ್ನು ಕರೆಯಿಸಿ, ಅವರಿಂದ ಸಂಗೀತ ಕಛೇರಿಯನ್ನು ಸಂಗೀತೋತ್ಸವಗಳಲ್ಲಿ ನಡೆಸಿದರೆ ತಮ್ಮ ಸಂಗೀತಾಶ್ರಯಕ್ಕೆ ಹೊಸ ಮೆರಗು ಕೊಟ್ಟಂತಾಗುತ್ತದೆ. ಇದಕ್ಕೆ ತಮ್ಮ ಅಪ್ಪಣೆ ಮತ್ತು ಸಹಕಾರ ಬೇಕು."

"ವಾಸುದೇವರೆ, ನಿಮ್ಮ ಯೋಜನೆ ಸೂಕ್ತವಾಗಿಯೇ ಇದೆ. ನಾವು ಯಾವಾಗಲು ಸಂಗೀತಪ್ರಿಯರು. ಸಂಗೀತಕ್ಕೆ ನಮ್ಮ ಸಹಕಾರ ಯಾವಾಗಲು ಇದ್ದದ್ದೆ ಆದರಲ್ಲಿ ಎಳ್ಳಷ್ಟು ಸಂಶಯ ಬೇಡ. ಈ ಕಾರ್ಯಕ್ರಮಕ್ಕೆ ಬೇಕಾಗುವ ಸಾಮಾನ್ಯ ಮತ್ತು ಇತರ ವಿಷಯಗಳ ಬಗ್ಗೆ ದಿವಾನರ ಹತ್ತಿರ ಚರ್ಚೆ ಮಾಡಿ ಮುಂದುವರೆಯಬಹುದು."

"ನನ್ನ ಎಣಿಕೆ ಸುಳ್ಳಾಗಲಿಲ್ಲ ಪ್ರಭುಗಳೆ. ತಾವು ನನ್ನ ಯೋಜನೆಯನ್ನು ಪುಷ್ಕೀಕರಿಸುತ್ತೀರೆಂದು ತಿಳಿದಿದ್ದೆ. ತಮ್ಮ ಘನತೆಗೆ ತಕ್ಕ ಹಾಗೆ ನಡೆದುಕೊಂಡಿದ್ದೀರಿ. ನಿಮ್ಮ ಮಾತಿನಿಂದ ನನ್ನ ಉತ್ಸಾಹ ಇಮ್ಮಡಿಸಿದೆ."

"ಈ ಯೋಜನೆಯನ್ನು ತಾವು ಒಂದು ಸಲ ಕೃಷ್ಣಾಚಾರಿಯವರ ಜತೆ ಚರ್ಚಿಸಿ. ಅವರ ಸಹಕಾರವೂ ಬೇಕಲ್ಲವೇ?"

"ಪ್ರಭೂ...."

"ಏನು? ಆಕ್ಷೇಪಣೆಯು ದನಿಯಂತೆ ತೋರುತ್ತಿದೆಯಲ್ಲ! ಏನು ವಿಷಯ?"

"ಈ ನನ್ನ ಯೋಜನೆ ಮೈಸೂರಿನಲ್ಲಿ ಹೊಸದು. ಈ ವಿಷಯ ಕೃಷ್ಣಾಚಾರಿಗಳಿಗೆ ರುಚಿಸದು ಅಂತ ನನ್ನ ಭಾವನೆ. ಅವರು ಹಳೆಯ ಕಾಲದ ಸಂಪ್ರದಾಯಸ್ಥರು. ಹೊಸ, ಹೊಸ ವಿಚಾರಗಳು ಅವರಿಗೆ ಆಗದು. ಹಾಗಾಗಿ...."

"ಹಾಗಂತ ಅವರನ್ನು ಕೈ ಬಿಡಲು ಆಗುವುದಿಲ್ಲವಲ್ಲ?!"

"ಕೈ ಬಿಡಬೇಕೆಂದು ನಾನು ಹೇಳುತ್ತಿಲ್ಲ. ಅವರು ಈ ಹೊಸ ಯೋಜನೆಯನ್ನು ಸ್ವೀಕರಿಸುತ್ತಾರೆಂಬುದರ ಬಗ್ಗೆ ನನಗೆ ಅನುಮಾನ. ಆದ್ದರಿಂದ...."

"ಹಾಗಾದರೆ, ಇದನ್ನು ಹೇಗೆ ನಿಭಾಯಿಸುತ್ತೀ ಅನ್ನೋದು ನಿಮಗೆ ಬಿಟ್ಟದ್ದು. ಯಾವುದೇ ವಿವಾದಗಳು ಆಗಬಾರದು. ಏನಂತೀರ?"

"ತಮ್ಮ ಚಿತ್ತ ಪ್ರಭು. ತಮ್ಮ ಹತ್ತಿರ ಯಾವುದೆ ಫಿರ್ಯಾದು ಬರದ ಹಾಗೆ ನೋಡಿಕೊಳ್ಳುವುದು ನನ್ನ ಜವಾಬ್ದಾರಿ."

V

ಸಂಗೀತೋತ್ಸವದ ಯಶಸ್ಸು ಮೈಸೂರಿಗರ ಕಣ್ಣು ಕುಕ್ಕುವಂತಿತ್ತು. ಮಹಾರಾಜರಂತೂ ವಾಸುದೇವನನ್ನು 'ಗಾನ ಕೋಗಿಲೆ' ಎಂದು ಬಿರುದನಿತ್ತು ವಿಶೇಷವಾಗಿ ಸನ್ಮಾನಿಸಿದರು. ಕೃಷ್ಣಾಚಾರಿಗೆ ದಿಕ್ಕೇ ತೋಚದಂತಾಯಿತು. ಗಾಯದ ಮೇಲೆ ಬರೆ ಎಳೆದಂತೆ ಆಯಿತು

ೀಗಂತೂ ಸಖಿ ನಾಗರತ್ನಮ್ಮ ತನ್ನನ್ನು ದೂರ
ಮಾಡುತ್ತಿರುವುದು ಅವರಿಗೆ ತಲೆ ಕೆಡುವಂತೆ ಮಾಡಿತು.
ರತ್ನಮ್ಮ ಈಗ ಸಂಪೂರ್ಣವಾಗಿ ವಾಸುದೇವನ
ರಂಗದ ಸಖಿಯಾಗಿದ್ದಳು. ಅವನ ಸೇವೆಯಲ್ಲಿ ಸದಾಕಾಲ
ಾಗಿದ್ದಳು. ಒಂದು ದಿನ ಸಲುಗೆಯಿಂದ ತನ್ನ ಮಗಳನ್ನು
ದೊಡ್ಡ ಸಂಗೀತ ಮತ್ತು ನೃತ್ಯಗಾರ್ತಿಯನ್ನಾಗಿ
ಿಸಬೇಕೆಂದು ವಾಸುದೇವನನ್ನು ಕೇಳಿಕೊಂಡಳು. ಇವ್ಳು
ತನ್ನ ಹಾಸಿಗೆಯನ್ನು ಹಂಚಿಕೊಂಡ ನಾಗರತ್ನಮ್ಮಳ
ಲೆ ವಾಸುದೇವ ಅನುಕಂಪ ತೋರಿಸಿದ. 'ಮ್ಯೂಸಿಕ್
ಡಿಮಿ ಆಫ್ ಮದ್ರಾಸ್'ನಲ್ಲಿ ನಾಗರತ್ನಮ್ಮನ ಮಗಳನ್ನು
ಿಸಿದ. ಭರತ ನಾಟ್ಯ ಕಲಿಯುವ ವ್ಯವಸ್ಥೆಯನ್ನು ಮಾಡಿದ.
ಳು ತರಬೇತಿ ಪಡೆದುಕೊಂಡ ಬಂದ ಮೇಲೆ
ುಯನ್ನು ಬಿಟ್ಟು ಮಗಳನ್ನು ಹಾಸಿಗೆಯ ಸಖಿಯನ್ನಾಗಿ
ಿಕೊಳ್ಳುವ ಎಣಿಕೆ ವಾಸುದೇವನ ಅನುಕಂಪದ
ಯಾಗಿತ್ತು.

ಆದರೆ ವಾಸುದೇವನ ಎಣಿಕೆ ತಲೆಕೆಳಗಾಯಿತು.
ಪ್ರಿಯೆ ತನಗೆ ಒದಗಿದ ಸದವಕಾಶವನ್ನು ಅತ್ಯಂತ
ಪ್ತವಾಗಿ ಉಪಯೋಗಿಸಿಕೊಂಡಳು. ಭರತ ನಾಟ್ಯ ಮತ್ತು
ಾಟಕ ಸಂಗೀತದಲ್ಲಿ ಆಕೆ ಉತ್ತಮ ಪಟುವಾದಳು.
ೀತಿ ಮುಗಿಯುವ ಸಂದರ್ಭದಲ್ಲಿ ಆಕೆ ನೀಡಿದ
ರ್ಯನಮಂತೂ ಅತ್ಯಂತ ಯಶಸ್ಸು ಕಂಡಿತು. ಆಕೆ ಹಾಡುವ
ಗರಾಜರ ರಚನೆಗಳಂತೂ ಯಾವುದೇ ಪ್ರಸಿದ್ಧ ಗಾಯಕ
ಚುವಂತೆ ಮಾಡಿದವು. ಆಕೆ ಎಷ್ಟೊಂದು ಮನೆ
ಾದಳೆಂದರೆ, ಆಕೆಯ ಪ್ರಸಿದ್ಧಿ ಮತ್ತು ಸೌಂದರ್ಯದ
ು ಮಹಾರಾಜರ ಕಿವಿಗೆ ಬಿತ್ತು. ಸುದ್ದಿ ತಿಳಿದಿದ್ದೆ ತಡ
ುದೇವನ ಮಸ್ತಕ ಚುರುಕಾಯಿತು. ಶಿವಪ್ರಿಯ ತನ್ನ
ನದ ಸಖಿಯಾಗಲು ಈಗ ಸಾಧ್ಯವಿಲ್ಲದ ಮಾತೆಂದು,
ಳು ಪ್ರಸಿದ್ಧಳಾಗಬೇಕೆಂಬ ಮಹದಾಸೆಯನ್ನು
ುತ್ತುಕೊಂಡು ಮೈಸೂರಿಗೆ ಬರುತ್ತಿದ್ದಾಳೆಂದು, ಅವನ
ಕ್ಷ್ಮ ಬುದ್ಧಿ ತಿಳಿಹೇಳಿತು. ಮಹಾರಾಜರು ಅವಳನ್ನು
ಿಸುವ ಮೊದಲೆ ತಾನು ಅವಳ ಪೋಷಕನಂತೆ
ೀರಿಸಿಕೊಳ್ಳಬೇಕೆಂದು ಹವಣಿಸಿದ. ಆಕೆಯಲ್ಲದಿದ್ದರೂ
ಯಂತವರು ನೂರಾರು ಸಿಕ್ಕಾರು ಎಂದು ಅವನು
ೀಚಿಸಿದ. ಆಕೆ ಮೈಸೂರಿಗೆ ಬಂದದ್ದೆ ತಡ ಅವಳನ್ನು
ುನಿಸಿ ಅವಳ ಮುಂದಿನ ಸ್ಥಾನ-ಮಾನ ಅರಮನೆಯೆಂದು
ಿದುಂಬಿಸಿದ. ಒಂದು ಗೊತ್ತಾದ ದಿನದಂದು ತಾನೆ

ುತುವರ್ಜಿ ವಹಿಸಿ ಶಿವಪ್ರಿಯಳನ್ನು ಮಹಾರಾಜರಿಗೆ
ಚಯಿಸಿ, ಅವಳಿಂದ ಒಂದು ಸಂಗೀತ ಕಛೇರಿಯನ್ನು
ಿಸಬೇಕೆಂದು ಯೋಚಿಸಿದ.

ಮಹಾರಾಜರ ಕೃಪಾಕಟಾಕ್ಷವನ್ನು ಮತ್ತಷ್ಟು
ಗೊಳಿಸಿಕೊಳ್ಳುವ ವಾಸುದೇವನ ಚಾಣಕ್ಯತನವನ್ನು
ಯಲು ಕೃಷ್ಣಾಚಾರಿಗೆ ಕಷ್ಟವಾಗಲಿಲ್ಲ. ಆದರೆ ಏನು
ಡಬೇಕೆಂದು ಅವನ ಮನಸ್ಸಿಗೆ ಹೊಳೆಯಲೇ ಇಲ್ಲ.
ರತ್ನಮ್ಮ ಕೈ ಬಿಟ್ಟು ಹೋದಳು. ತನ್ನ ಸ್ಥಾನ ಭದ್ರವಿಲ್ಲ.
ೂಲಿಗುಂಪಾಗುವ ದುಸ್ಥಿತಿ. ಹೀಗೆ ಮುಂದುವರೆದರೆ
ಹಾರಾಜರ ಕೃಪಾಕಟಾಕ್ಷ ಸಂಪೂರ್ಣವಾಗಿ
ರಿಯಾಗುವುದೆಂದು ಚಿಂತಿಸಿದ. ಆಕಾಶವೇ ತಲೆಯ
ಲೆ ಬಿದ್ದು ಏಂತ ನೆಲವೇ ಅದುರುತ್ತಿದೆ ಎಂದು
ುಸುತ್ತಿರುವ ಕ್ಷಣದಲ್ಲಿ ಕೃಷ್ಣಾಚಾರಿಯ ಗಮನ ಆ
ದ ಪತ್ರಿಕೆಯಲ್ಲಿ ಪ್ರಕಟಗೊಂಡ ಸುದ್ದಿಯ ಕಡೆಗೆ
ಯಿತು. ಓದುತ್ತಿದ್ದಂತೆ ಕಣ್ಣುಗಳು ಅರಳಿದವು.

ಮೈಸೂರು, ಏಪ್ರಿಲ್ 10, 1927: ನಿನ್ನೆ ಮೈಸೂರಿನ
ಲ್‌ನಲ್ಲಿ ನಡೆಯುತ್ತಿದ್ದ ರಾಮಸೇವಾ ಸಂಗೀತ
ರಿಯಲ್ಲಿ ಕೆಲವು ಪ್ರತಿಭಟನಾಕಾರರು ನಡೆಸಿದ
ಧಲೆಯಿಂದ ಸಂಗೀತ ಕಾರ್ಯಕ್ರಮವನ್ನು ತತ್‌ಕ್ಷಣ
ಗೊಳಿಸಲಾಯಿತು. ಪೊಲೀಸರು ಸಭಾಲದಲ್ಲಿ ಬಂದು
ಾಗಬಹುದಾದ ಅಪಾಯವನ್ನು ತಪ್ಪಿಸಿದರು. ಆದಾಗ್ಯೂ
ಿಭಟನಾಕಾರರು ಕಛೇರಿಯ ಹೆಂಡಾಲ್‌ಗೆ ಬೆಂಕಿ ಹಚ್ಚಿ

ಗಾಯಕರ ಕಡೆಗೆ ಧಾವಿಸಲು ಪ್ರಯತ್ನಿಸಿದರು. ಇದನ್ನು ತಪ್ಪಿಸಲು ಪೊಲೀಸರು ಪ್ರತಿಭಟನಾಕಾರರ ಮೇಲೆ ಲಾಠಿ ಚಾರ್ಜ್ ಮಾಡಿ ಅವರನ್ನು ಚದುರಿಸಿದರು. ಪರಿಸ್ಥಿತಿ ಈಗ ತಿಳಿಯಾಗಿದೆ. ಕೆಲವು ಪ್ರತಿಭಟನಕಾರರನ್ನು ಬಂಧಿಸಿ, ಪ್ರಶ್ನಿಸಿದಾಗ ಅವರು ನಡೆಸಿದ ದಾಂಧಲೆಯ ಕಾರಣ ತಿಳಿಯಿತು. ರಾಮಸೇವಾ ಮಂಡಳಿಯವರು ಪ್ರತಿ ವರ್ಷ ಹೊರ ಊರಿನ ಮತ್ತು ಪರಭಾಷೆಯ ಗಾಯಕರಿಂದ ಸಂಗೀತ ಕಛೇರಿ ನಡೆಸುತ್ತಿದ್ದಾರೆಂದು, ಕನ್ನಡದ ಬಗ್ಗೆ ನಿರ್ಲಕ್ಷ್ಯ ಧೋರಣೆ ತಾಳುತ್ತಿದ್ದಾರೆಂದು, ಇದರ ಬಗ್ಗೆ ರಾಮಸೇವಾ ಮಂಡಳಿಯವರಿಗೆ ತಮ್ಮ ಅಸಮಾಧಾನ ವ್ಯಕ್ತಪಡಿಸಿದರೂ ಅವರು ಕಿವಿಗೆ ಹಾಕಿಕೊಳ್ಳದೆ ತಮಿಳು, ತೆಲುಗಿನ ಸಂಗೀತವನ್ನು ಬಲವಂತವಾಗಿ ಹೇರುತ್ತಿರುವುದನ್ನು ತಪ್ಪಿಸಲು ತಾವು ಈ ಪ್ರತಿಭಟನೆಯನ್ನು ಮಾಡಬೇಕಾಯಿತೆಂದು ಹೇಳಿದರು. ಮೈಸೂರಿನಲ್ಲಿ ಕನ್ನಡ ಸಂಗೀತ ಮತ್ತು ಕನ್ನಡ ಗಾಯಕರಿಗೂ ಮನ್ನಣೆ, ಪ್ರಾಶಸ್ತ್ಯ ದೊರಕುವವರೆಗೂ ತಮ್ಮ ಪ್ರತಿಭಟನೆ ಮುಂದುವರೆಯುವದೆಂದು ಎಚ್ಚರಿಸಿದರು. ನಗರದ ಮತ್ತೆರಡು ಸ್ಥಳಗಳಲ್ಲಿ ಇದೇ ತೆರನಾದ ಪ್ರತಿಭಟನೆಗಳಾದವು ಎಂದು ವರದಿ ಬಂದಿದೆ.

ಸುದ್ದಿಯನ್ನು ಓದಿ ಮುಗಿಸುವ ಹೊತ್ತಿಗೆ ಕೃಷ್ಣಾಚಾರಿಗೆ ಏನೋ ಹೊಳೆದಂತಾಗಿ ಎದ್ದು ನಿಂತ. ತಕ್ಷಣ ಕಾರ್ಯೋನ್ಮುಖನಾದ. ವಾಸುದೇವ, ನಾಗರತ್ನಮ್ಮ ಮತ್ತು ಶಿವಪ್ರಿಯಾಳ ಮೇಲೆ ಸೇಡು ತೀರಿಸಿಕೊಳ್ಳಲು; ಮತ್ತೊಮ್ಮೆ ಮಹಾರಾಜರೆ ಕೃಪಾಕಟಾಕ್ಷವನ್ನು ಮರಳಿ ಪಡೆಯಲು.

VI

"ಮಹಾಪ್ರಭುಗಳಿಗೆ ನಮಸ್ಕಾರ"

"ನಮಸ್ಕಾರ ಕೃಷ್ಣಾಚಾರಿಗಳೆ. ಆಶ್ಚರ್ಯ? ಬಹಳ ದಿನಗಳ ನಂತರ ನಮ್ಮ ನೆನಪಾಯಿತೆ?"

"ಹಾಗೆನಿಲ್ಲ ಪ್ರಭು. ತಮಗೆ ವೃಥಾ ತೊಂದರೆ ಆಂತ ಭೇಟಿಯಾಗಿರಲಿಲ್ಲ. ಜೊತೆಗೆ ಇತ್ತೀಚೆಗೆ ತಮ್ಮ ಗಮನ ನಮ್ಮಂತವರ ಕಡೆಗೆ ವಿರಳವಾಗುತ್ತಿದೆ..."

"ನಿಮ್ಮ ಮಾತಿನ ಮೊಣಚು ಯಾವತ್ತು ಮೊಂಡಲ್ಲ ಕೃಷ್ಣಾಚಾರಿಗಳೆ" ಎಂದು ಸ್ವಲ್ಪ ಬಿರುಸಿನಿಂದ ಹೇಳಿದ ಮಹಾರಾಜರು ಮುಂದುವರೆಯುತ್ತಾ "ಏನು ಬಂದದ್ದು?"

"ಪ್ರಭು, ನಿಮಗೆ ನಾಲ್ಕು ದಿನಗಳ ಹಿಂದೆ ನಗರದಲ್ಲಿ ನಡೆದ ಘಟನೆ ಬಗ್ಗೆ ತಿಳಿದಿರಬಹುದು ಅಲ್ಲವೇ? ಅದರ ಬಗ್ಗೆ ಚರ್ಚಿಸಲು ಬಂದೆ."

"ಯಾವ ಘಟನೆ? ಈ ನಗರದಲ್ಲಿ ನೂರಾರು ಘಟನೆಗಳು ನಡೆಯುತ್ತವೆ? ಯಾವುದರ ಬಗ್ಗೆ ಮಾತನಾಡುತ್ತಿದ್ದೀರಿ?"

"ಅದೇ ಪ್ರಭು. ಟೌನ್‌ಹಾಲ್‌ನಲ್ಲಿ ನಡೆದ ಘಟನೆ!"

"ಓ ಅದಾ!"

"ಹೌದು ಪ್ರಭು. ರಾಮಸೇವಾ ಸಂಗೀತ ಕಛೇರಿಯ ದಾಂಧಲೆ."

"ಅದರ ಬಗ್ಗೆ ಏನು ಚರ್ಚಸೋದು? ನಮ್ಮ ಕಡೆಯವರು ಆ ಘಟನೆಯ ಬಗ್ಗೆ ತನಿಖೆ ನಡೆಸುತ್ತಿದ್ದಾರಲ್ಲ? ಅದರ ಬಗ್ಗೆ ನಿಮಗೇನು ಬೇಕಾಗಿದೆ?"

"ಪ್ರಭು, ನನಗೆ ಏನು ಬೇಕಾಗಿಲ್ಲ ಘಟನೆಯ ಸೂಕ್ಷ್ಮತೆಯ ಬಗ್ಗೆ ಮಾತನಾಡಲು ಬಂದಿದ್ದೇನೆ."

"ಏನದು?"

"ಆ ದಿನ ದಾಂಧಲೆ ನಡೆದದ್ದು ಕನ್ನಡದ ಸಂಗೀತಕ್ಕಾಗಿ. ದಾಂಧಲೆ ನಡೆಸಿದವರ ಪೈಕಿ ಕೆಲವರು ನನ್ನಲ್ಲಿ ಬಂದು

'ಸಂಗೀತದಲ್ಲಿ ಹೊರಗಿನವರು ಹೆಚ್ಚಾಗಿದ್ದಾರೆ; ಕನ್ನಡವನ್ನು ಕಡೆಗಣಿಸಲಾಗಿದೆ;. ಕನ್ನಡದ ಗಾಯಕರಿದ್ದರೂ ಅವರಿಗೆ ಸರಿಯಾಗಿ ಮನ್ನಣೆ ಸಿಗುತ್ತಿಲ್ಲ; ದಾಸರ ಪದಗಳು, ಶಿವಶರಣರ ವಚನಗಳಿದ್ದರೂ ತೆಲುಗು, ತಮಿಳಿನ ಕೃತಿಗಳನ್ನೇ ಹಾಡಲಾಗುತ್ತಿದೆ. ಇದು ಸರಿಯಲ್ಲ' ಎಂದು ನನ್ನಲ್ಲಿ ದೂರಿದರು."

"ನೀವು ದೂರು ಸ್ವೀಕರಿಸುವ ಕೆಲಸವನ್ನೂ ಮಾಡುತ್ತೀರ? ಸಂಗೀತದ ಅಭ್ಯಾಸವನ್ನು ಬಿಟ್ಟೇದ್ದೀರ ಅನಿಸುತ್ತೆ?"

"ಪ್ರಭು ಪರಿಸ್ಥಿತಿಯ ಗಾಂಭೀರ್ಯತೆಯನ್ನು ಅರ್ಥಮಾಡಿಕೊಳ್ಳಿ. ಅವರು ನನ್ನಲ್ಲಿ ಬಂದದ್ದು ಅವರ ಪರವಾಗಿ ನಾನು ತಮ್ಮಲ್ಲಿ ಮಾತನಾಡುವಂತೆ ಅರಿಕೆ ಮಾಡಿಕೊಳ್ಳಲು. ಸಂಗೀತ ಕ್ಷೇತ್ರದಲ್ಲಿ ಆಗುತ್ತಿರುವ ತಾರತಮ್ಯವನ್ನು ಹೋಗಲಾಡಿಸಲು ವಿನಂತಿಸಿಕೊಂಡರು. ಅವರು ತಮ್ಮನ್ನು ನೋಡಲು ಅಸಾಧ್ಯವಿರುವದರಿಂದ ನನ್ನಲ್ಲಿ ಬಂದು ಭಿನ್ನವಿಸಿಕೊಂಡರು."

"ಯಾವ ತರದ ತಾರತಮ್ಯ ಇದೆ ಸಂಗೀತದಲ್ಲಿ. ನಾವು ಎಲ್ಲರನ್ನು ಸಮನಾಗಿ ನೋಡಿಕೊಳ್ಳುತ್ತಿದ್ದೇವಲ್ಲ? ಯಾರ್ಯಾರು ಸಂಗೀತ ವಿದ್ವಾನರು ಇದ್ದಾರೊ ಅವರೆಲ್ಲರಿಗು ಸಾಧ್ಯವಾದ ಮಟ್ಟಗೆ ಮನ್ನಣೆಯನ್ನು ನೀಡಿದ್ದೇವೆ. ನಿಮಗೂ ಅದು ಗೊತ್ತಿದೆ. ಇಲ್ಲಿ ತಾರತಮ್ಯದ ಪ್ರಶ್ನೆಯೇ ಬರುವುದಿಲ್ಲ."

"ಪ್ರಭು ನೀವು ಹೇಳುತ್ತಿರುವುದು ಅಕ್ಷರಶಃ ಸತ್ಯ. ತಮ್ಮ ರಾಜಾಶ್ರಯದಿಂದಲೇ ನಮ್ಮ ಮೈಸೂರಿನಲ್ಲಿ ಸಂಗೀತ ಸೊಗಸಾಗಿ ಬೆಳೆದು, ಮುಂದುವರೆದಿದೆ. ಸಮಸ್ಯೆ ಇರುವುದು ಹೊರಗಿನವರು ಹೆಚ್ಚಾಗಿರುವುದರ ಬಗ್ಗೆ."

"ಸಂಗೀತದಲ್ಲಿ ಹೊರಗಿನವರು, ಒಳಗಿನವರು ಅಂತ ಭೇದಭಾವ ಎಣಿಸಬಾರದು ಅಲ್ಲವೆ? ಕಲೆ ಇದೆಲ್ಲವನ್ನು ಮೀರಿದ್ದು."

"ಸಂಗೀತಕ್ಕೆ ಭೇದ-ಭಾವ ಇಲ್ಲದಿರಬಹುದು. ಆದರೆ ಸಂಗೀತಗಾರರಿಗೆ ಇರಬಹುದಲ್ಲ!"

"ಏನು ಹಾಗೆಂದರೆ?"

"ವಾಸುದೇವ ಬಂದಾಗಿನಿಂದ ಅವನ ಜನ, ಬಂಧು-ಬಳಗದವರು, ಸ್ನೇಹಿತರು ಮತ್ತು ಅವನ ಸಂಗೀತಗಾರರು ಹೆಚ್ಚಾಗಿದ್ದಾರೆ. ಸಂಗೀತಕ್ಕೆ ಸೇರಿದ ಕ್ಷೇತ್ರಕ್ಕೆ ಅವನದೇ ಪಾರುಪತ್ಯ. ಅವನ ನಿರ್ಧಾರವೇ ಅಂತಿಮ ನಿರ್ಧಾರವಾಗಿದೆ. ಇವೆಲ್ಲವನ್ನು ತಮ್ಮ ಗಮನಕ್ಕೆ ತರದೇ ನಡೆಸಲಾಗುತ್ತಿದೆ. ಸಂಗೀತದಲ್ಲಿ ತಮಿಳು, ತೆಲುಗು ಮತ್ತು ಸಂಸ್ಕೃತದ ಕೃತಿಗಳನ್ನೇ ಹಾಡಲಾಗುತ್ತಿದೆ. ಹಾಡುವವರೂ ಕೂಡ ಹೊರಗಿನವರೆ. ಕನ್ನಡದ ಸಂಗೀತ ವಿದ್ವಾಂಸರು ಇದ್ದರೂ ಅವಕಾಶವಿಲ್ಲದೆ ಅವರ ಕಲೆ ಕಮರಿಹೋಗುತ್ತಿದೆ. ಹಾಗಾಗಿ ನಮಗೂ ಅವಕಾಶ ಕೊಡಿ ಎಂದು, ಸಂಗೀತದಲ್ಲಿ ಕನ್ನಡ ಕೃತಿಗಳನ್ನು ಆಳವಡಿಸಿಕೊಳ್ಳಬೇಕೆಂದು ಈ ಪ್ರತಿಭಟನಾಕಾರರು ಒತ್ತಾಯಿಸುತ್ತಿದ್ದಾರೆ."

"ನಿಮಗೆ ಯಾವತ್ತಿನಿಂದ ಕನ್ನಡದ ಪ್ರೇಮ ಹುಟ್ಟಿಕೊಂಡಿತೋ! ತಾವು ಕೂಡ ಒಮ್ಮೆಯೂ ಕನ್ನಡದಲ್ಲಿ ಹಾಡಿದ್ದಿಲ್ಲ, ಕನ್ನಡ ಕೃತಿಗಳನ್ನು ರಚಿಸಿಲ್ಲ, ನಿಮಗೆ ಯಾಕೆ ಈ ಕನ್ನಡದ ಉಸಾಬರಿ ಈಗ."

"ಪ್ರಭು, ನಾನು ಕನ್ನಡದಲ್ಲಿ ಹಾಡದಿದ್ದರೂ ಮೂಲತಃ ಮೈಸೂರಿನವನು. ಕನ್ನಡದವನು. ಇದು ತಮಗೆ ತಿಳಿಯದ ವಿಷಯವಲ್ಲ."

"ಹಾಗಾದರೆ ಮೈಸೂರಿನ ಸಂಗೀತ ಮೈಸೂರಿನವರಿಗೆ ಮಾತ್ರ ಅಂತ ಹೇಳುತ್ತಿದ್ದೀರ ನೀವು?"

"ನಾನಲ್ಲ ಪ್ರಭು. ಪ್ರತಿಭಟನಾಕಾರರು."

"ಹಾಗಾದರೆ ತೆಲುಗಿನ ಕೃತಿಗಳನ್ನು ಬುಟ್ಟಿಗೆ ಎಸೆಯಬೇಕೆ? ಆ ಕೃತಿಗಳು ಸಂಗೀತದ ಪರಂಪರೆಗೆ ಸೇರಿರುವಂತವು? ಹಾಗೆ ಮಾಡುವುದರಿಂದ ನಮ್ಮ ಪೂರ್ವಜರಿಗೆ ಅಪಚಾರವೆಸಗಿದಂತೆ ಆಗುವುದಿಲ್ಲವೇ?"

"ಪ್ರಭು, ಕನ್ನಡದಲ್ಲಿ ಹಾಡುವುದು ಎಂದರೆ ತಮಿಳು ಅಥವಾ ತೆಲುಗಿನ ವಿರುದ್ಧವಿಲ್ಲ. ಸಂಗೀತದಲ್ಲಿ ಕನ್ನಡದ ಕಂಪು ಇರಬೇಕೆಂದು ಪ್ರತಿಭಟನಾಕಾರರ ಅಭಿಲಾಷೆ."

"ಸರಿ. ಇದರ ಬಗ್ಗೆ ನಾವು ಸೂಕ್ತವಾಗಿ ಯೋಚಿಸಿ ಒಂದು ನಿರ್ಧಾರಕ್ಕೆ ಬರುತ್ತೇವೆ. ಈ ಪ್ರತಿಭಟನಾಕಾರರಿಗೆ ನೀವು ಬುದ್ಧಿ ಹೇಳಿ. ಪರಿಸ್ಥಿತಿ ಮಿತಿ ಮೀರಬಾರದು."

"ತಮ್ಮ ಚಿತ್ತ ಪ್ರಭು."

ಹೊರಬರುತ್ತಿದ್ದಂತೆ ಕೃಷ್ಣಾಚಾರಿಯ ವದನದ ಮೇಲೆ ಮುಗುಳ್ನಗುವನ್ನು ನರಸಿಂಹರಾಯ ಗಮನಿಸಿದ.

VII

ಕೃಷ್ಣಾಚಾರಿಯ ಮುಗುಳ್ನಗೆ ಒಂದೇ ಕಲ್ಲಿನಲ್ಲಿ ಮೂರು ಹಣ್ಣುಗಳನ್ನು ಉದುರಿಸಿದ ಜಯಘೋಷದ ಹಾಗೆ ಇತ್ತು. ಕನ್ನಡ ಸಂಗೀತಕ್ಕೆ ಪ್ರಾಶಸ್ತ್ಯ ಕೊಡಬೇಕೆಂದು ಇನ್ನು ಅನೇಕ ಕಡೆ ಗಲಭೆಗಳಾದವು. ಪ್ರತಿಭಟನೆಗಳು ನಡೆದವು. ಆಗೋಚರವಾಗಿ ಈ ಎಲ್ಲಾ ಪ್ರತಿಭಟನೆಗಳ ಹಿಂದೆ ಕೃಷ್ಣಾಚಾರಿ ಬೆನ್ನೆಲುಬಾಗಿ ನಿಂತ. ವಾಸುದೇವನ ವಿರುದ್ಧ ಅನೇಕ ದೂರುಗಳು ಮಹಾರಾಜರಿಗೆ ತಲುಪಿದವು. ಅವನ ದುಂದುವೆಚ್ಚ ವಿಲಾಸ-ಜೀವನದ ಬಗ್ಗೆ ಅನೇಕ ಟೀಕೆಗಳು ಕೇಳಿಬಂದವು. ಅವನು ತನ್ನ ಅಧಿಕಾರವನ್ನು ದುರುಪಯೋಗಗೊಳಿಸುತ್ತಿದ್ದಾನೆಂದು ಮಹಾರಾಜರಿಗೆ ದೂರಿತ್ತರು. ತನ್ನ ಅಂತಃಪುರದ ಸಖಿಯರಿಗೆ ಸಂಗೀತ ಕಲಿಸಿಕೊಡುತ್ತಿದ್ದಾನೆಂದು, ಅವನಿಂದ ಸಂಗೀತದ ಪಾವಿತ್ರತೆ ಮಲಿನವಾಗುತ್ತಿದೆಯೆಂದು ಕೆಲವು ಸಂಪ್ರದಾಯಸ್ಥರು ಬಲವಾಗಿ ವಿರೋಧಿಸಿದರು. ಇವೆಲ್ಲವು ಮಹಾರಾಜರಿಗೆ ಕಿರಿಕಿರಿಯನ್ನುಂಟು ಮಾಡಿತು. ಹೀಗೆ ಮುಂದುವರೆದರೆ ಪರಿಸ್ಥಿತಿ ಹದಗೆಡಬಹುದೆಂದು ಮಹಾರಾಜರಿಗೆ ಗುಪ್ತ ಮಾಹಿತಿಗಳು ಬಂದವು. ಪರಿಸ್ಥಿತಿಯ ಸೂಕ್ಷ್ಮತೆಯನ್ನು ಅರಿತ ಮಹಾರಾಜರು ಮೊದಲಿಗೆ ಶಿವಪ್ರಿಯಾಳ ಸಂಗೀತ ಕಛೇರಿಯನ್ನು ತಾತ್ಕಾಲಿಕವಾಗಿ ತಡೆಹಿಡಿದರು. ಎರಡನೇ ಹೆಜ್ಜೆಯಾಗಿ ಆಸ್ಥಾನದ ಎಲ್ಲಾ ಗಾಯಕರಿಗೆ ಮತ್ತು ನೃತ್ಯ ಪಟುಗಳಿಗೆ ಕನ್ನಡದಲ್ಲಿ ಕೃತಿ ರಚಿಸಿ, ಹಾಡುವಂತೆ ಆದೇಶ ನೀಡಿದರು. ಜೊತೆಗೆ ಈ ರಚನೆಗಳಿಗೆ ಪ್ರೋತ್ಸಾಹಧನವನ್ನೂ ಘೋಷಿಸಿದರು. ಮೂರನೆಯದಾಗಿ ಮೈಸೂರಿನ ಸಂಗೀತ ಸಂಘ, ಸಂಸ್ಥೆಗಳಿಗೆ ಮಹಾರಾಜರೇ ಖುದ್ದಾಗಿ ಪದಾಧಿಕಾರಿಗಳನ್ನು ನೇಮಿಸುವ ಅಧಿಕಾರವನ್ನು ಪಡೆದುಕೊಂಡರು. ಇದೇ ತಕ್ಕನಾದ ಸಮಯವೆಂದು ಕೃಷ್ಣಾಚಾರಿ ತನ್ನವರ ಕಡೆಯಿಂದ ಮಹಾರಾಜರ ಮೇಲೆ ಒತ್ತಡ ತಂದು ಅರಮನೆಯ ಸಂಗೀತಾ ಸಭಾದ ಮುಖ್ಯಸ್ಥನಾದ. ಮಹಾರಾಜರ ಆದೇಶವನ್ನು ಪಾಲಿಸಲಾಗದೆ ವಾಸುದೇವ ಕ್ರಮೇಣ ಗಂಟು-ಮೂಟೆ ಕಟ್ಟುವ ಹಾಗೆ ಆಯಿತು. ಅರಮನೆಯಲ್ಲಿ ನೆಲೆಯೂರಬೇಕೆಂಬ ಶಿವಪ್ರಿಯಾಳ ಆಸೆ ನನಸಾಗಲಿಲ್ಲ. ತನ್ನ ತಾಯಿಯ ಜೊತೆಗೂಡಿ ತಂಜಾವೂರಿಗೆ ವಲಸೆ ಹೋದಳು.

ಡಾ.ವಿಜಯಕುಮಾರ್ ಎಂ.ಬೋರಟ್ಟಿ

ಸಹಾಯಕ ಪ್ರಾಧ್ಯಾಪಕರು, ಮೈಸೂರು ವಿ.ವಿ

ನಾಲ್ಕು ನೆಲೆಗಳಲ್ಲಿ ಹಾಲಗೇರಿ ಕತೆಗಳು

ಹನುಮಂತ ಹಾಲಗೇರಿ ಅವರ ಮಠದ ಹೋರಿ ಕಥಾ ಸಂಕಲನದ ಕುರಿತು ಪ್ರೊ.ಶಿವರಾಮಯ್ಯನವರು ಬರೆದ ಪುಸ್ತಕ ವಿಮರ್ಶೆ



ನಮ್ಮ ನಡುವೆ ಹನುಮಂತ ಹಾಲಗೇರಿ ಒಬ್ಬ ಭರವಸೆಯ ಕಥೆಗಾರನಾಗಿ ಬೆಳೆಯುತ್ತಿರುವುದು ಖುಷಿಕೊಡುವ ಸಂಗತಿ. ಅವರು ಈ ಮೊದಲ 2010ರಲ್ಲಿ 'ಕತ್ತಲ ಗರ್ಭದ ಮಿಂಚು' ಎನ್ನುವ ಕಥಾಸಂಕಲನ, 2013ರಲ್ಲಿ 'ಕೆಂಗುಲಾಬ' ಕಾದಂಬರಿಯನ್ನು ಹೊರತಂದವರು. ಪ್ರಸ್ತುತ 'ಮಠದ ಹೋರಿ' ಎಂಬ ಹತ್ತು ಕಥೆಗಳ ಸಂಕಲನವನ್ನು ತುದಿರುತ್ತಾರೆ. ಇವರ ಕಥೆಗಳು ಕನ್ನೆ ನೆಲದ ಬೆಳಸಿನಂತೆ ಕಂಡುಬರುತ್ತವೆ. ವರ್ತಮಾನ ಬದುಕಿನ ಸಾಮಾಜಿಕ, ಆರ್ಥಿಕ, ರಾಜಕಾರಣದ ಹಾಗೂ ಹುಸಿ ಧಾರ್ಮಿಕತೆ ಇವು ಇವರ ಕಥೆಗಳ ಮಸ್ತು. ನವೋದಯ ಕನಸುಗಾರಿಕೆ, ಪ್ರಗತಿಪರ ಸುಧಾರಣೆಯ ಭಾವ ತೀವ್ರತೆ ಹಾಗೂ ದಲಿತ ಬಂಡಾಯದ ಇಕ್ಕಟ್ಟು-ಬಿಕ್ಕಟ್ಟು ಇವರ ಕಥೆಗಳಲ್ಲಿ ಹಾಸುಹೊಕ್ಕು ಹನುಮಂತ ಹಾಲಗೇರಿ ಅವರ ಸಂಕಲನದ ಕಥೆಗಳನ್ನು ನಾಲ್ಕು ನೆಲೆಗಳಲ್ಲಿ ಅವಲೋಕಿಸಬಹುದು.

ಮೊದಲನೆಯದು ಕಾಮ, ಪ್ರೇಮ, ಪ್ರಣಯಕ್ಕೆ ಸಂಬಂಧಿಸಿ, ಎರಡನೆಯದು ಜಾತಿ ಹಾಗೂ ವರ್ಗಕ್ಕೆ ಸಂಬಂಧಿಸಿ, ಮೂರನೆಯದು ಅಭಿವೃದ್ಧಿ ರಾಜಕಾರಣಕ್ಕೆ ಸಂಬಂಧಿಸಿ ಹಾಗೂ ನಾಲ್ಕನೆಯದಾಗಿ ದೇವರು, ಧರ್ಮ, ಜಾತಿ, ಮತ ಇತ್ಯಾದಿ ಸಂಬಂಧಿಸಿ, ಈ ವರ್ಗೀಕರಣ ಕೇವಲ ಸ್ಥೂಲವಾದುದು- ಯಾಕೆಂದರೆ ಇವು ಒಂದರೊಳಗೊಂದು ಥಳಕುಹಾಕಿಕೊಂಡಿರಬಹುದು.

ಭಾಗವ್ವ ಡೈರಿ ಹಾಲಿಗೆ ಹುಳಿ ಬತ್ತು ಗೆಲ್ಲುವೆನೆಂಬುದು ಸೋಲುವ ಮಾತು ಇವು ಮೊದಲ ಗುಂಪಿಗೆ ಉದಾಹರಣೆ. ಮದುವೆಯಾಗಿ ಸಂಸಾರಸ್ಥರಾದವರು ಸಹ ಕೆಲವೊಮ್ಮೆ ಹೊರಗಿನ ಸಂಬಂಧವನ್ನಿಟ್ಟುಕೊಂಡಿರುತ್ತಾರೆ. ಅದನ್ನು ಸಮಾಜವು ಕೂಡ ಮಾನ್ಯಮಾಡುವುದುಂಟು ಎಂಬ ಉದಾರ ನಿಲುವು ಭಾಗವ್ವ ಎಂಬ ಕಥೆಯದು. ಡೈರಿ ಹಾಲಿಗೆ ಹುಳಿ ಬತ್ತು ಎಂಬುದು ಅಂತರ್ ಜಾತಿ ವಿವಾಹವನ್ನು ಕೈವಾರಿಸುವ ಕಥೆ. ಕಾಮುಕನಿಗೆ ಲಜ್ಜೆಯಾಗಲೀ, ಭಯವಾಗಲೀ ಇಲ್ಲ ಎಂಬುದನ್ನು ಗೆಲ್ಲುವೆನೆಂಬುದು ಸೋಲುವ ಮಾತು ಎಂಬ ಕಥೆಯದು.

ಕೇರಿಗಾಯಕ್ಕ ಕೆಂಡದ ಮುಲಾಮು, ಹಾದರ ಕಾಯಕದ ಪುಣ್ಯ ಸ್ತ್ರೀ-ಇವು ಎರಡನೆಯ ಗುಂಪಿಗೆ ಉದಾಹರಣೆ. ಜಾತಿ ಮತ್ತು ವರ್ಗದ ಸಮಸ್ಯೆಗಳು ಇಲ್ಲಿ ಸದಾ ತೆಕ್ಕೆ ಬಿದ್ದಿರುತ್ತವೆ. ದಲಿತರನ್ನು ದಲಿತರೇ ಶೋಷಿಸುವುದು ಒಂದೆಡೆಯಾದರೆ, ಬಡ ಮತ್ತು ಕೆಳ ಜಾತಿಯ ಹೆಣ್ಣು ಮಕ್ಕಳು ಯಾವತ್ತೂ ಶೋಷಿತರೆಂಬುದನ್ನು ಈ ಕಥೆಗಳು ಸಾದರಪಡಿಸುತ್ತವೆ. ದೇವದಾಸಿಯ ಪುಂಗಳೊಬ್ಬಳು ಸ್ವಾಭಿಮಾನದಿಂದ ಬದುಕಲು ಸಾಧ್ಯವೆಂಬುದನ್ನು ಪುಣ್ಯ ಸ್ತ್ರೀಯ ಕಥೆ ಧ್ವನಿಸುತ್ತದೆ. ಯಾರನ್ನು ಈ ಸಮಾಜ ಪುಣ್ಯ ಸ್ತ್ರೀ ಎಂದು ಪಟ್ಟ ಕಟ್ಟಿಕೊಟ್ಟಿದೆಯೋ ಅದಕ್ಕೆ ವಿರುದ್ಧವಾಗಿ ಕಥೆಗಾರ ಆಕೆಯನ್ನು ಪುಣ್ಯ ಸ್ತ್ರೀ ಎಂದು ಸಂಬೋಧಿಸುತ್ತಾನೆ. ಇರುವ ಕೊಂಚ ಹೊಲವನ್ನು ಸಾಲಗಾರನಿಂದ ರಕ್ಷಿಸಿಕೊಳ್ಳಲು ಮೈಮಾರಿ ಹಣಗಳಿಸುವ ಈಕೆ ಸ್ವಾಭಿಮಾನಿಯೇ ಸರಿ. ಹನ್ನೆರಡನೆಯ ಶತಮಾನದ ಸೂಳೆ ಸಂಕವ್ವನನ್ನು ನೆನಪಿಸಿ ತರುತ್ತಾಳೆ. ಹನುಮಂತ ಹಾಲಗೇರಿ ಅವರ ಕೆಂಗುಲಾಬ ಕಾದಂಬರಿಯ ಕಥಾಮಸ್ತುವೂ ಇದೇ ಮಾದರಿಯದ್ದಾಗಿದೆ.

ಗುಡ್ಡ ಹತ್ತಿ ಉರಿದೆದೆ, ಕಾಂಕ್ರೀಟ್ ಹಕ್ಕಿಯ ಮಟ್ಟಿಗಳು, ಬೆಂಕಿ ಉಗುಳುವ ಪಂಕಾ ಇವು ಮೂರನೆಯ ಗುಂಪಿಗೆ ಸೇರಿದ ಕಥೆಗಳು. ಅಭಿವೃದ್ಧಿ ಮಂತ್ರವನ್ನು ಜಪಿಸುವ ನಮ್ಮ ರಾಜಕೀಯ ಪಕ್ಷಗಳು ಅಧಿಕಾರದ ಗದ್ದುಗೆಯನ್ನು ಹಿಡಿದ ಮೇಲೆ ಬಡವರ ಬದುಕನ್ನು ಇನ್ನಷ್ಟು ದಾರುಣಮಾಡುವುದು. ಬಹುರಾಷ್ಟ್ರೀಯ ಕಂಪನಿಗಳು ಕೊಡುವ ದಲ್ಲಾಳಿ ಕಾಸಿಗೆ ಕೈ ಒಡ್ಡುವ ರಾಜಕಾರಣಿಗಳು ವಿಶೇಷ ಆರ್ಥಿಕ ವಲಯ (ಎಸ್‌ಇಜೆಡ್)ಗಳಿಗೆಂದು ರೈತರು ಬುದಕಟ್ಟುಗಳ ಜಮೀನುಗಳನ್ನು ಕೊಡಮಾಡಿ ಒಕ್ಕಲೆಬ್ಬಿಸುವ ಕೌರ್ಯ ಈ ಕಥೆಗಳ ವಸ್ತು ಪಕ್ಷ ಸರಕಾರಗಳ ಪ್ರಣಾಳಿಕೆಗಳ ಪ್ರಕಾರ ಯಾರ ಅಭಿವೃದ್ಧಿ ಆಗಬೇಕಾಗಿತ್ತೋ ಅವರೇ ಈಗ ನಿರಾಶ್ರಿತರಾಗಿ ನಗರಗಳಿಗೆ ವಲಸೆ ಬರಬೇಕಾಗಿದೆ ಎಂಬ ಕಟುಸತ್ಯ ಈ ಕಥೆಗಳ ಮೂಲಕ ಅಭಿವ್ಯಕ್ತಪಡಿಸುತ್ತದೆ.

ಮೂಕ ದ್ಯಾವ್ರು, ಮಠದ ಹೋರಿ ಇವು ಹುಸಿ ಜಾತಿ ಮತಗಳ ಡಾಂಭಿಕತೆಗಳನ್ನು ಅನಾವರಣ ಮಾಡುತ್ತವೆ. ಹಿಂಸೆಯೇ ಧರ್ಮದ ಮೂಲವೆಂಬಂತೆ ಮೂಢನಂಬಿಕೆ, ಮೂಕ ಮೌಢ್ಯ ಅಂಧಶ್ರದ್ಧೆ ಇಲ್ಲಿ ತುಂಬ ತುಳುಕುತ್ತಿವೆ. ವಿದ್ಯುನ್ಮಾನ ಯುಗದಲ್ಲೂ ಇವು ಇನ್ನು ನಂಜಾಗಿ ಹಬ್ಬುತ್ತಿರುವುದು ಅಸಹನೀಯ. ಉತ್ತಮ ಕುಲ ಎನಿಸಿಕೊಂಡವರು ತಮ್ಮ ಸ್ವಾರ್ಥ ಸಾಧನೆಗಾಗಿ ಇಂಥ ವಿಷ ಬೆಳೆಯನ್ನು ಬಿತ್ತಿ ಬೆಳೆಯುತ್ತಿದ್ದಾರೆ. ನಮ್ಮ ದಿನ ಪತ್ರಿಕೆಗಳು, ಟಿ.ವಿ.ಮಾಧ್ಯಮಗಳು ಇವುಗಳನ್ನೇ ರೋಚಕವಾಗಿ ತೋರಿಸುತ್ತವೆ. ದೇವರು, ಧರ್ಮ, ಶಾಸ್ತ್ರ ಪುರಾಣಗಳೆಲ್ಲ ಶೋಷಕರ ಪರಿಕರಗಳಾಗಿವೆ. ಈ ನಿಟ್ಟಿನಲ್ಲಿ ಹಾಲಗೇರಿ ಅವರ ಮೂಕ ದ್ಯಾವ್ರು, ಮಠದ ಹೋರಿಕಥೆಗಳು ವಿದಂಬನೆಯನ್ನು ಸಾಧಿಸುತ್ತವೆ. ದನ, ಎಮ್ಮೆ ಮುಂತಾದ ಮೂಕ ಪ್ರಾಣಿಗಳ ಮನೋವಲಯದಿಂದ ಹಾದುಬರುವ ಈ ಕಥೆಗಳು ಕಥೆಗಾರನ ಸಮಕ್ಕ ದೃಷ್ಟಿಗೆ ಸಾಕ್ಷಿಯಂತಿವೆ. ಪಂಚತಂತ್ರದ ಕಥೆಗಳಲ್ಲಿ ಪ್ರಾಣಿಗಳು ಮನುಷ್ಯನ ಗುಣಾವಗುಣಗಳಿಗೆ ನೀಡಿದ ದೃಷ್ಟಾಂತ ಪಾತ್ರಗಳಂತೆ ಕಂಡುಬರುತ್ತವೆ. ಹಾಗೆಯೇ 'ಮಠದ ಹೋರಿ' ಕಥೆಯನ್ನು ಓದುತ್ತಿದ್ದರೆ ಅಧುನಿಕ ಕನ್ನಡಕ್ಕೊಬ್ಬ ಪಂಚತಂತ್ರದ ಕಥೆಗಾರ ಹುಟ್ಟಿ ಬರುತ್ತಿದ್ದಾನೆಯೇ ಎಂದು ಕೇಳಬೇಕೆನಿಸುತ್ತದೆ.

ಹನುಮಂತ ಹಾಲಗೇರಿ ಅವರ ಭಾಷೆಯ ತನಿ ಬನಿ, ಬಾಗು ಬಳಕು, ಬೇಗು ಕೊಗು, ಕಾಕು ಕಾಮುಕತೆ ಮುಂತಾಗಿ ಆಪ್ಯಾಯಮಾನ. ಹಾಲಮಟ್ಟಿಯ ಹಿನ್ನೀರಿನಲ್ಲಿ ಮುಳುಗಿಹೋಗುತ್ತಿರುವ ಬಾಗಲಕೋಟೆಯಂತೆ, ಅತ್ತಣ ಜವಾರಿ ಕನ್ನಡವೂ ಮುಳುಗಿಹೋಗದಂತೆ ಇವರು ಅಭಿವ್ಯಕ್ತಿ ಕೊಡುತ್ತಿರುವುದು ಅಭಿನಂದನಾರ್ಹ. ಆದರು ಇವರ ಕಥೆಗಳು ಇನ್ನಷ್ಟು ಮಾಗಿ ಹದವಾಗಿ, ಮಿದುವಾಗಿ, ತಿದ್ದಿ ತೀಡಿ ರೂಪ ಪಡೆಯಬೇಕಾಗಿದೆ. ಲೇಖಕನಿಗೆ ಭಾವಾವೇಳವೇ ಅತಿಯಾದರೆ ಕಲೆಗಾರಿಕೆಗೆ ಮಿತಿ ಬಂದುಬಡುತ್ತದೆ.

● ಪ್ರೊ.ಶಿವರಾಮಯ್ಯ, ಬೆಂಗಳೂರು

ಪುಸ್ತಕ ವಿಮರ್ಶೆ

ಕಾಮ್ರೇಡ ಬಸವಣ್ಣ

ಕೋಟ ಕೋಟ ವಂದನೆ ಅಣ್ಣಾ ಬಸವಣ್ಣ ನಿನಗೆ
ಕ್ರಾಂತಿಕಾರಿ ವಂದನೆ ಕಾಮೇಡ್ ಬಸವಣ್ಣ ನಿನಗೆ
ಕೋಟ ಕೋಟ ಕೋಟ ಕೋಟ ಹಾ....

ಕಲ್ಯಾಣದ ನಾಡಿನಲ್ಲಿ
ಕರುನಾಡ ಬೀಡಿನಲ್ಲಿ ನೊಂದ ಜನರ ನೋವಿನಲ್ಲಿ
ದುಡಿವ ಜನರ ದುಃಖದಲ್ಲಿ ಜನರ ಶ್ರಮದ ಸುಲಿಗೆಯಲ್ಲಿ...
ಮರುಗಿಹೋದ ಮಮತೆಯೇ ಅಣ್ಣಾ ಬಸವಣ್ಣ ನೀನು
ದುಡಿವ ಜನರ ಶಕ್ತಿಯೇ ಕಾಮೇಡ್ ಬಸವಣ್ಣ ನೀನು

ಜಾತಿ ಪಾತಿ ಟೊಳ್ಳು ಮುರಿದು
ಪ್ರೀತಿಯಾ ಮಳೆಯ ಕರೆದು, ಹಿರಿಕಿರಿಯರನೆಲ್ಲ ಬೆಸೆದು
ಅನುಭವ ಮಂಟಪವ ಹೊಸೆದು, ಭೇದಭಾವವನ್ನು ಜರಿದು...
ವಚನ ಸುಧೆಯ ಹರಿಸಿದೆ ಅಣ್ಣಾ ಬಸವಣ್ಣ ನೀನು
ಬಿದ್ದವನ ಎತ್ತಿದೇ ಕಾಮೇಡ್ ಬಸವಣ್ಣ ನೀನು

ಧರ್ಮ ಗೌಣವಾಗಿರಲು
ಕರ್ಮ ಪದವಗೆಟ್ಟರಲು, ಭಕ್ತಿಗೆ ಬರ ಬಂದಿರಲು
ಸ್ವರ್ಗದಾರಿ ತಪ್ಪಿರಲು, ಮುಕ್ತಿ ಕನಸು ಮುರಿದಿರಲು....
ಮುಕ್ತ ಮಾರ್ಗ ತೋರಿದೆ ಅಣ್ಣಾ ಬಸವಣ್ಣ ನೀನು
ಸತ್ಯ ಸ್ವರ್ಗವಾಗಿಸಿದೆ ಕಾಮೇಡ್ ಬಸವಣ್ಣ ನೀನು

ಕಾಯಕದ ಮನವ ಕೂಡಿ
ಅವಿವೇಕದಲಾಯಿ ಮಾಡಿ, ಹಿಂಡು ದೇವರನ್ನು ಕೂಡಿ
ಮಿಂಡದೇವರನ್ನು ದೂಡಿ, ಲಿಂಗದೇವರೆಂದು ಹಾಡಿ....
ಅಂಗ ದೇವರಾಗಿಸಿದೆ ಅಣ್ಣಾ ಬಸವಣ್ಣ ನೀನು
ಮಂಗ ಮನವನೋಡಿಸಿದೆ ಕಾಮೇಡ್ ಬಸವಣ್ಣ ನೀನು

ವೇದಕ್ಕೆ ಒರೆಯ ಕಟ್ಟ
ಚಾಂಡಾಲರನೆಲ್ಲ ಮುಟ್ಟ, ಹಿಂಡು ಶರಣ ಗಣವ ಕಟ್ಟ
ಬಂಧಾರವನೆಲ್ಲ ಬಿಟ್ಟ, ಕೊಂಡಾಡುವ ಕುಲವ ಬಿಟ್ಟ.....
ತ್ರಿಮಿಕ ಕುಲವ ಎತ್ತಿದೆ ಅಣ್ಣಾ ಬಸವಣ್ಣ ನೀನು
ಕಾಯಕ ಕೈಲಾಸವೆಂದೆ ಕಾಮೇಡ್ ಬಸವಣ್ಣ ನೀನು

ನೀರ ಕಂಡು ಮುಳುಗಲಿಲ್ಲ
ಮರಕೆ ನೀವು ಸುತ್ತಲಿಲ್ಲ, ಮಡಿಮಡಿಯೆಂದು ಹಾರಲಿಲ್ಲ
ಇವನಾರವ ಎನ್ನಲಿಲ್ಲ, ಅವನಾರವ ಎನ್ನಲಿಲ್ಲ...
ಹಾರುವ ನಾನಲ್ಲವೆಂದೆ ಅಣ್ಣಾ ಬಸವಣ್ಣ ನೀನು
ಮಾದಿಗನ ಮಗನು ಎಂದೆ ಕಾಮೇಡ್ ಬಸವಣ್ಣ ನೀನು

ಮಠ ಮೌಢ್ಯವ ನೀನು ಜರಿದೆ
ಕಂದಾಚಾರವನ್ನು ಹರಿದೆ, ಕಲ್ಲುದೇವರಲ್ಲವೆಂದೆ
ಕರೆದವನಾ ಮುಂದೆ ನಿಂದೆ, ಮಾತು ಜ್ಯೋತಿಯಾಗಲೆಂದೆ....
ದುಡಿವವಗೆ ಊಟವೆಂದೆ ಅಣ್ಣಾ ಬಸವಣ್ಣ ನೀನು
ದಾಸೋಹವ ಮಾಡಿನಿಂದೆ ಕಾಮೇಡ್ ಬಸವಣ್ಣ ನೀನು

ಬಡವರಾ ಬಸವ ನೀ
ಕರುಣೆಯ ಸಾಗರ ನೀ, ಅಲ್ಲಮನಾ ಪ್ರಾಣ ನೀ
ಅಕ್ಕನಾ ಮಾನ ನೀ, ನಡೆನುಡಿಯಾ ವಚನ ನೀ....
ಅಂತರಂಗ ಶುದ್ಧಿಯೇ ಅಣ್ಣಾ ಬಸವಣ್ಣ ನೀನು
ಸಮಸಮಾಜ ಸಿದ್ಧಿಯೇ ಕಾಮೇಡ್ ಬಸವಣ್ಣ ನೀನು

ಬೆವರ ಬಳ್ಳಿ ಚಿಗುರಿರಲು
ಬೆಂಕಿ ಹೂ ಅರಳಿರಲು, ಕೋಗಿಲೆಗಳು ಕೂಗಿರಲು
ವರ್ಣಸಂಕರ ನಡೆದಿರಲು, ಕ್ರಾಂತಿ ಹಾಡು ಹಾಡಿರಲು.....
ಕಲ್ಯಾಣ ನೆಲದ ಒಡಲಿಗೇ ಅಣ್ಣಾ ಬಸವಣ್ಣ ನೀನು
ಚಿಲ್ಲಿದೆ ಕೆಂಪು ಮಲ್ಲಿಗೇ ಕಾಮೇಡ್ ಬಸವಣ್ಣ ನೀನು

● ರಮೇಶ್ ಗಬ್ಬೂರ್

ಲಂಕೇಶ್ ಪ್ರಕಾಶನದ ಪುಸ್ತಕಗಳು

ಕರ್ನಾಟಕದ ಎಲ್ಲಾ ಪ್ರಮುಖ ಪುಸ್ತಕ ಮಳಿಗೆಗಳಲ್ಲಿ ಲಭ್ಯವಿದೆ.
ಹೆಚ್ಚಿನ ಮಾಹಿತಿಗಾಗಿ ಫೋನ್: 080-26676427

ನೀಲು ಕಾವ್ಯ -ಸಂಗ್ರಹ 1	150.00	ಉಲ್ಲಂಘನೆ	80.0
ನೀಲು ಕಾವ್ಯ -ಸಂಗ್ರಹ 2	150.00	ಪಾಪದ ಹೂಗಳು	60.0
ನೀಲು ಕಾವ್ಯ -ಸಂಗ್ರಹ 3	200.00	ಬಿರುಕು	40.0
ಚಿತ್ರ ಸಮೂಹ	90.00	ಸಂಕ್ರಾಂತಿ	45.0
ಅಕ್ಷರ ಹೊಸ ಕಾವ್ಯ	250.00	ತೆರೆಗಳು	50.0
ಮರೆಯುವಮನ್ನ-ಸಂಗ್ರಹ1	150.00	ಈಡಿಪಸ್ ಮತ್ತು ಅಂತಿಗೊನೆ	60.0
ಮರೆಯುವಮನ್ನ-ಸಂಗ್ರಹ2	150.00	ಟಿ. ಪ್ರಸನ್ನನ ಗೃಹಸ್ಥಾಶ್ರಮ	50.0
ಮರೆಯುವಮನ್ನ-ಸಂಗ್ರಹ3	150.00	ಗುಣಮುಖ	30.0
ಮನಕೆ ಕಾರಂಜಿಯ ಸ್ಪರ್ಶ	150.00	ಕ್ರಾಂತಿ ಬಂತು ಕ್ರಾಂತಿ	40.0
ಈ ನರಕ ಈ ಪುಲಕ	125.00	ಕಪ್ಪು ಮಲ್ಲಿಗೆ	75.0
ಆಟ-ಜೂಜು-ಮೋಜು!	150.00	ಕಂಡಹಾಗೆ ಭಾಗ-1	125.0
ಟೀಕೆ-ಟಿಪ್ಪಣಿ 1	200.00	ಕಂಡಹಾಗೆ ಭಾಗ-2	150.0
ಟೀಕೆ-ಟಿಪ್ಪಣಿ 2	200.00	ದರವೇಶಿ ಕತೆಗಳು	90.0
ಟೀಕೆ-ಟಿಪ್ಪಣಿ 3	200.00	ಬಸವರಾಜಮಾರ್ಗ	40.0
ಸಾಹಿತಿ-ಸಾಹಿತ್ಯ	300.00	ಬೆನಜೀರ್	25.0
ರೂಪಕ ಲೇಖಕರು	70.00	ಆವರಣ ಎಂಬ ವಿ-ಕೃತಿ	100.0
ಕಂಡದ್ದು ಕಂಡಹಾಗೆ	100.00	ಜೈಲೆಂಬ ಲೋಕದಲ್ಲಿ	75.0
ಪ್ರಸ್ತುತ	80.00	ವೇದಾಂತ ರೆಜಿಮೆಂಟ್	60.0
ಹುಳಿ ಮಾವಿನ ಮರ	250.00	ಕಳೆದುಕೊಂಡವಳು	45.0
ಮುಸ್ಸಂಜೆಯ ಕಥಾ ಪ್ರಸಂಗ	250.00	ನೂರುಸ್ವರ	60.0
ಬಿರುಕು	60.00	ಟ್ರೇಸ್ ಟು ಪಾಕಿಸ್ತಾನ್	125.0
ಅಕ್ಕ	80.00	ಮಿಡತೆಗಳ ಬರವಿಗೆ....	100.0
ಮಂಜು ಕವಿದ ಸಂಜೆ	85.00	ಡಿಸೆಂಬರ್ 13	150.0
ಉಮಾಪತಿ ಸ್ಕಾಲರ್‌ಶಿಪ್ ಯಾತ್ರೆ	70.00	ಮನುಸ್ಮೃತಿ	20.
ಕಲ್ಲು ಕರಗುವ ಸಮಯ	125.00	ಆರೋಗ್ಯ ಮತ್ತು ಜೀವನ	125.
ನಾನಲ್ಲ	60.00	ತೇಜಸ್ವಿ ನೆನಪು	100.
ಕೆರೆಯ ನೀರನು ಕೆರೆಗೆ ಚೆಲ್ಲಿ	50.00	ಜಬೀವುಲ್ಲಾ ಕೊಟ್ಟ ಕೋಳಿ	100.



ಯೋಗಿಜ್ ಮಾಸ್ಟರ್

ಪುರಾಣದ ಹೂರಣ

ಲಲಿತೆ: ದ ಪವರ್ ಆಫ್ ಸಬ್ ಕಾನ್ಷಿಯಸ್ ಮೈಂಡ್

ಜೋಸೆಫ್ ಮರ್ಫಿ ಎಂಬ ಅಮೆರಿಕದ ಮನಶಾಸ್ತ್ರಜ್ಞನ ಪುಸ್ತಕವು ನಮ್ಮ ಸುಪ್ತಚೇತನದ ಶಕ್ತಿ ಎಂತಹುದು ಎಂದು ತನ್ನ ಪುಸ್ತಕ 'ದ ಪವರ್ ಆಫ್ ಸಬ್ ಕಾನ್ಷಿಯಸ್ ಮೈಂಡ್'ನಲ್ಲಿ ವಿವರಿಸುತ್ತಾರೆ. ಸಿಗ್ಮಂಡ್ ಫ್ರಾಯ್ಡ್‌ರ ಮನಸ್ಸಿನ ಮೂಲ ವಿಭಾಗಗಳನ್ನು ಒಪ್ಪುವಂತೆ ಜಾಗೃತಿಚೇತನ ಮತ್ತು ಸುಪ್ತಚೇತನದ ಬಗ್ಗೆ ಅವರು ವಿವರಣೆಗಳನ್ನು ಕೊಡುತ್ತಾರೆ. ಜಾಗೃತಿ ಚೇತನವು ನಾವು ಮನವಿಟ್ಟು ಮತ್ತು ಉದ್ದೇಶಪೂರ್ವಕವಾಗಿ ಆಲೋಚನೆ ಮತ್ತು ಚಿಂತನೆಗಳನ್ನು ನಡೆಸುವ ಮನಸ್ಸಿನ ಪದರವಾದರೆ, ಸುಪ್ತ ಚೇತನವು ಜಾಗೃತಿ ಚೇತನದ ನಂತರದ ಪದರವಾಗಿದ್ದು, ಇದರ ಚಟುವಟಿಕೆಗಳು ಬಾಹ್ಯ ಗ್ರಹಿಕೆಗೆ ಸಿಗುವುದಿಲ್ಲ, ನಮ್ಮ ಅಂಕೆಗೆ ನಿಲುಕುವುದಿಲ್ಲ. ಆದರೆ, ಅದರ ಪ್ರಭಾವಶೀಲತೆ ಮಾತ್ರ ನಮ್ಮ ಜಾಗೃತಿ ಚೇತನದ ಮೇಲೂ ಮತ್ತು ಭೌತಿಕ ನಡಾವಳಿಗಳ ಮೇಲೂ ಪ್ರಭಾವ ಬೀರುತ್ತಿರುತ್ತದೆ. ನಾನೀಗ ಪತ್ರಿಕೆಯನ್ನು ಓದುತ್ತಿದ್ದೇನೆ. ಇದಾ ಲೇಖನವು ಇದು. ಇದು ಚೆನ್ನಾಗಿದೆ, ಅಥವಾ ಚೆನ್ನಾಗಿಲ್ಲ ಇತ್ಯಾದಿ ತಕ್ಷಣದ ಕ್ರಿಯೆ-ಪ್ರತಿಕ್ರಿಯೆಗಳನ್ನು



ಮಾಡಿಸುತಲಿದ್ದು ನಮ್ಮ ಗೋಚರದ ಪರಿಮಿತಿಯಲ್ಲಿಯೇ ಜಾಗೃತಿ ಚೇತನವು ಇರುತ್ತದೆ. ಆದರೆ, ಇಂದು ಯಾವುದೋ ವಿಷಯಕ್ಕೆ ಕೋಪಿಸಿಕೊಂಡಿದ್ದೇನೆ, ಯಾರೊಂದಿಗೋ ವಿರಸ ಕಂಡಿದ್ದೇನೆ ಅಥವಾ ಯಾವುದೋ ಆಸೆಯನ್ನು ಪಟ್ಟಿದ್ದೇನೆ. ಆದರೆ ಅದು ನೆರವೇರದೇ ನಿರಾಸೆಯಾಗಿದೆ ಇತ್ಯಾದಿ ಯಾವುದೋ ಭಾವನಾತ್ಮಕವಾದ ಮನಸ್ಥಿತಿ ಉಂಟಾಗಿದೆ. ಆದಿನ ಭೌತಿಕ ಘಟನೆಯನ್ನು ನಾನು ಮರೆತುಹೋದರೂ ಭಾವನಾತ್ಮಕವಾಗಿರುವ ಅದರ ತಲ್ಲಣ ಮತ್ತು ತುಮುಲಗಳು ಮರೆತು ಹೋಗಿರದೇ ಸುಪ್ತಚೇತನದಲ್ಲಿ ಅಡಕವಾಗಿರುತ್ತದೆ. ಯಾವಾಗಾದರೊಮ್ಮೆ ಜಾಗೃತಿಚೇತನವು ವಿಶ್ರಾಂತವಾಗಿದ್ದಾಗ ಅಥವಾ ದುರ್ಬಲವಾದಾಗ ಹುದುಗಿರುವ ಭಾವುಕತೆಯು ಪ್ರಭಾವಶೀಲವಾಗುತ್ತದೆ. ಅದು ಕೆಲವೊಮ್ಮೆ ಕನಸುಗಳಾಗಿಯೂ ಬಾಡ ವ್ಯಕ್ತವಾಗಬಹುದು. ಕೆಲವೊಮ್ಮೆ ನಡವಳಿಕೆಗಳಲ್ಲಿ ವ್ಯಕ್ತವಾಗಬಹುದು. ಮತ್ತೂ ಗಂಭೀರವಾದ ವಿಷಯವೆಂದರೆ, ಅದು ನಮಗೇ ಗೊತ್ತಿಲ್ಲದಂತೆ ನಮ್ಮ ವ್ಯಕ್ತಿತ್ವದ ಭಾಗವಾಗಿ ನಮ್ಮ ನಡವಳಿಕೆಗಳನ್ನು ರೂಪಿಸಿದ್ದಿರಬಹುದು. ಏನೇ ಆಗಲಿ, ಗುಪ್ತಗಾಮಿನಿಯಾಗಿ ಹರಿಯುವ ಭಾವತರಂಗಗಳು ಸುಪ್ತಚೇತನದಿಂದ ಎಂಬುದು ನಿರ್ವಿವಾದ.

ಇಷ್ಟೆಲ್ಲಾ ವಿಷಯಗಳನ್ನು ಜೋಸೆಫ್ ಮರ್ಫಿ ಒಪ್ಪುತ್ತಾರೆ ಮತ್ತು ಬೇರೊಂದು ರೀತಿಯಲ್ಲಿ ಪ್ರತಿಪಾದಿಸುತ್ತಾರೆ. ನಮ್ಮ ಅತಿಸುಪ್ತಚೇತನವೇ ನಮ್ಮ ಮೂಲಶಕ್ತಿ ನಮ್ಮಲ್ಲಿ ಶಕ್ತಿಯನ್ನು ಉಂಟುಮಾಡಲು ಮತ್ತು ಹೊರಗಿನ ಶಕ್ತಿಯನ್ನು ಆಕರ್ಷಿಸಲು ಈ ಮೂಲಶಕ್ತಿಯನ್ನು ನಾವು ಸಿದ್ಧಪಡಿಸಬೇಕೆಂದು, ಹದ ಮಾಡಬೇಕೆಂದು ಹೇಳುತ್ತಾರೆ. ಅವರ ಪ್ರಕಾರ, ದ ಸಬ್ ಕಾನ್ಷಸ್ ಮೈಂಡ್ ಬಹಳ ಶಕ್ತಶಾಲಿ. ಆದರೆ ಅದಕ್ಕೆ ವಿವೇಚನೆಯಿಲ್ಲ, ಅದಕ್ಕೆ ಉದ್ದೇಶಗಳಾಗಲಿ, ಲೆಕ್ಕಾಚಾರ-ತರ್ಕಗಳಾಗಲಿ ಇಲ್ಲ; ಬದಲಿಗೆ ಅದು ಬರಿಯ ಫಲವತ್ತಾದ, ಹದವಾದ ಭೂಮಿಯಂತೆ. ಅದರಲ್ಲಿ ಯಾವುದೇ ಬಗೆಯ ಬೀಜಗಳನ್ನು ನೀವು ಬಿತ್ತಿದ್ದರೂ ಅದರದೇ ಫಸಲನ್ನು ತೆಗೆಯುತ್ತೀರಿ. ಮಾವಿನ ಬೀಜವೋ, ಬೇವಿನ ಬೀಜವೋ ಅದು ನಿಮಗೇ ಬಿಟ್ಟದ್ದು, ಆಯ್ಕೆ ನಿಮ್ಮದು. ಬೇವು ಬಿತ್ತಿ ಮಾವು ಬೆಳೆಯೋ ತವಕವೇಕೆ ಮಾನವ - ಈ ಸಾಲು ಜಯತೇ ಜಯತೇ ಜಯತೇ ಸತ್ಯಮೇವ ಜಯತೇ, ವಂಶವೃಕ್ಷದ ಸಿನಿಮಾ ಹಾಡು ನೆನಪಾಗುತ್ತದೆ.

ಇರಲಿ, ಬೀಜವನ್ನು ಬಿತ್ತುವವರಾದರೂ ಯಾರು?



ಜಾಗೃತ ಚೇತನ. ಮನಸ್ಸಿನ ಈ ಪದರವು



ಶಾಂತಿಯಿಂದಲೂ ಗೆಲ್ಲುವಂತೆ ವಿತರ್ಕವಾಗಿರುವ ಭಾವನೆಯ

ಸಕಾರಾತ್ಮಕವಾದ ಬೀಜಗಳನ್ನು ಬಿತ್ತಿರಿ. ನಕಾರಾತ್ಮಕವಾದ ಬೀಜಗಳನ್ನು ಉದ್ದೇಶಪೂರ್ವಕವಾಗಿ ನಿರಾಕರಿಸಿ. ಹಾಗೊಂದು ವೇಳೆ ನಿಮ್ಮ ಮನಸ್ಸಿನಲ್ಲಿ ಈಗಾಗಲೇ ನಕಾರಾತ್ಮಕವಾದ ಬಿತ್ತನೆಯಾಗಿಬಿಟ್ಟಿದ್ದರೆ, ಚಿಂತೆ ಬೇಡ, "ವಿತರ್ಕ ಭಾವನೇ ಪ್ರತಿಪಕ್ಷ ಭಾವನಾಂ" ಎಂದು ಪತಂಜಲಿಯ ಯೋಗಸೂತ್ರದಲ್ಲಿ ಹೇಳುವಂತೆ, ಅದಕ್ಕೆ ವಿರುದ್ಧವಾದ -ಭಾವನೆಯನ್ನು ಅಂದರೆ ಸಕಾರಾತ್ಮಕವಾದ ಭಾವನೆಯನ್ನು ಉದ್ದೇಶಪೂರ್ವಕವಾಗಿ, ಪ್ರಯತ್ನಪೂರ್ವಕವಾಗಿ ಪ್ರತಿಷ್ಠಾಪಿಸಿ. ಬುದ್ಧನು ಹೇಳುವಂತೆ ದ್ವೇಷವನ್ನು ಪ್ರೇಮದಿಂದಲೂ, ಅಶಾಂತಿಯನ್ನು

ಪ್ರತಿಪಾದಿಸುತ್ತಾರೆ.

ಇದೇ ದೇವರ ಪರಿಕಲ್ಪನೆಯ ಶಕ್ತಿವಾದಿಗಳು ಜೋಸೆಫ್ ಮರ್ಫಿಯ ವಾದದ ಸರಣಿಗೆ ಬಂದರೆ ಕೊಂಚ ಸಮರ್ಥಿಸಿಕೊಳ್ಳಲು ಸಾಧ್ಯವಾಗುತ್ತದೆ. ಅದೇನೆಂದರೆ, ಶಕ್ತಿ ನಿಷ್ಪಕ್ಷಪಾತವಾದುದು. ನಿರುದ್ದೇಶವಾದದ್ದು. ಉದಾಹರಣೆಗೆ ಮಳೆಯೆಂಬ ಶಕ್ತಿ, ಅದು ತನ್ನ ಸುರಿಯುವ ಕ್ರಿಯೆಯಲ್ಲಿ ಭೂಮಿಗೆ ಬೀಳುತ್ತದೆ. ಮುಳ್ಳಿನ ಗಿಡಗಳಾಗಲಿ, ಹೂವಿನ ಗಿಡಗಳಾಗಲಿ ನೀರೆರೆಯುತ್ತದೆ. ಆ ಮಳೆಯನ್ನು ಪಡೆಯುವ ಹೂವಿನ ಗಿಡವೂ, ಮುಳ್ಳಿನ ಗಿಡವೂ ತಾನು ಸಮೃದ್ಧವಾಗಿ ಬೆಳೆಯುತ್ತದೆ. ಆದರೆ ಮಳೆ ಎಂಬ ಶಕ್ತಿ ಅಥವಾ ಮಳೆ ದೇವರು, "ಮುಳ್ಳು ಕೆಟ್ಟದ್ದು, ಅದು ಚುಚ್ಚುತ್ತದೆ. ಹೂವು ಒಳ್ಳೆಯದು, ಅದು ಸುಂದರವಾಗಿದೆ, ಅದು ಸುಗಂಧವನ್ನು ಕೊಡುತ್ತದೆ" ಎಂದು ಬರಿಯ ಹೂವಿನ ಗಿಡದ ಮೇಲೆ ಮಳೆಯನ್ನು ಸುರಿಸುವುದಿಲ್ಲ, ಅದು ನಿಷ್ಪಕ್ಷಪಾತ. ಅಂತೆಯೇ ಪ್ರಕೃತಿಯ ಎಲ್ಲಾ ಶಕ್ತಿಗಳೂ ಕೂಡ.

ಈ ವಿಚಾರವನ್ನು ದ ಪವರ್ ಆಫ್ ದ ಸಬ್ ಕಾನ್ಷಸ್ ಮೈಂಡ್‌ಗೆ ತಂದುಕೊಂಡರೂ ಸರಿಯೇ. ಆ ಶಕ್ತಿ ನಿಷ್ಪಕ್ಷಪಾತಿ, ಅದಕ್ಕೆ ತರ್ಕ, ಲೆಕ್ಕಾಚಾರ, ಆಲೋಚನೆ, ವಿಶ್ಲೇಷಣೆಗಳಿಲ್ಲ, ಅದು ತನ್ನಲ್ಲಿ ಬಂದಿದ್ದನ್ನು ಬರಿದೇ ಸ್ವೀಕರಿಸುತ್ತದೆ. ಹಾಗೆಯೇ ಅದನ್ನು ಪೋಷಿಸುತ್ತದೆ. ಫಲ ನೀಡುತ್ತದೆ.

ಬಯಲಾಟದ ಪಾತ್ರಗಳಂತಹ ದೇವರ ಉಡುಗೆ ತೊಡುಗೆಗಳನ್ನು ನಿರಾಕರಿಸಿ, ನಿರಾಕಾರ ಶಕ್ತಿ ಎಂದು ವಾದಿಸುವ ಆಸ್ತಿಕರು ದೇವರಿಗೆ ಆಲೋಚನೆಗಳಿಲ್ಲ, ಉದ್ದೇಶಗಳಿಲ್ಲ; ಋಷಿ ಬಂದಾಗ 'ಮಗನೇ ಬೇಕಾದ ವರ ಕೇಳಿಕೋ' ಎಂದು ವರ ಕೊಡುವಷ್ಟು ಅಹಂಕಾರಿಯಲ್ಲ, ಕೋಪ ಬಂದಾಗ ತಿಕ್ಕಲು ಹತ್ತಿ ಶಾಪ ಕೊಟ್ಟು ಹಾನಿಗೆಡವುವ ಕೂರಿಯಲ್ಲ ಎಂಬುದನ್ನು ಗಮನಿಸಬೇಕು. ನಿರುದ್ದೇಶವಾದ, ನಿಷ್ಪಕ್ಷಪಾತವಾದ, ಹೊಗಳಿದರೆ ಉಬ್ಬದ, ತೆಗಳಿದರೆ ಕುಗ್ಗದ ಅಥವಾ ರೇಗದ ಶಕ್ತಿಯೆಂದಷ್ಟೇ ನೋಡಿದರೆ, ಜೋಸೆಫ್ ಮರ್ಫಿಯ ಸುಪ್ತಚೇತನದ ಶಕ್ತಿಯ ಬಗ್ಗೆಯೂ ಅರ್ಥವಾಗುತ್ತದೆ.

ಸಕಾರಾತ್ಮಕ ಪದಬೀಜಗಳು

ಜೋಸೆಫ್ ಮರ್ಫಿ ಸುಪ್ತವಾಗಿರುವ ಶಕ್ತಿಗೆ ಪದಗಳ ಬೀಜಗಳನ್ನು ಬಿತ್ತುವಾಗ ಎಂತಹ ಕ್ರಮವನ್ನು ಅನುಸರಿಸಬೇಕು ಎಂದು ವಿವರಿಸುತ್ತಾರೆ. ಉದಾಹರಣೆಗೆ, ನಾನು ಪರೀಕ್ಷೆಯಲ್ಲಿ ಫೇಲ್ ಆಗಬಾರದು. ಪಾಸ್ ಆಗಬೇಕು. ಹಾಗಿರುವಾಗ, ನಕಾರಾತ್ಮಕವಾದ ಶಬ್ದವಾದ ಫೇಲ್ ಅನ್ನು ಉಪಯೋಗಿಸದಿರಲು ಸೂಚಿಸುತ್ತಾರೆ. ಬದಲಿಗೆ ನಾನು ಪಾಸ್ ಆಗಬೇಕು, ಅಥವಾ ಆಗುತ್ತೇನೆ, ಇನ್ನೂ ಮುಂದುವರಿದು ಆಗಿಬಿಟ್ಟೆ ಎಂದು ಭಾವಿಸಲು, ಕಲ್ಪಿಸಿಕೊಳ್ಳಲು ಸೂಚಿಸುತ್ತಾರೆ. ಅದೇ ರೀತಿಯಲ್ಲಿ ಯಾವುದೇ ವಿಷಯದಲ್ಲಿಯೂ ಕೂಡ ನಾವು ಬಯಸದೇ ಇರುವಂತಹ ವಿಚಾರಗಳನ್ನು ಪದಗಳ ಮೂಲಕವಾಗಿ ಜಾಗೃತ ಚೇತನದ ಮೂಲಕ ಸುಪ್ತ ಚೇತನಕ್ಕೆ ಹಾಯಲಿಕ್ಕೆ ಬಿಡಬೇಡಿ ಎಂದು ಸೂಕ್ಷ್ಮವಾಗಿ ತಿಳಿಸುತ್ತಾರೆ. ಅವರ ಪ್ರಕಾರ ಆ ಶಕ್ತಿಯು ಬಹಳ ಸಲಿಲತೆಯಿಂದ ಕೂಡಿರುವುದು. ಅದು ವಿಶ್ಲೇಷಣೆಯಿಂದ ಹೊರತಾಗಿರುವುದು, ಅದಕ್ಕೆ ತರ್ಕ ಮತ್ತು ಲೆಕ್ಕಾಚಾರಗಳಿಲ್ಲ, ಅದು ನೇರ ಮತ್ತು ಮುಗ್ಧ.

ಈ ಎಲ್ಲಾ ವಿಷಯಗಳು ಲಲಿತೆಯನ್ನು ಅರ್ಥ ಮಾಡಿಕೊಳ್ಳಲು ಒಂದು ಬಗೆಯ ಭೂಮಿಕೆಯನ್ನು ನಿರ್ಮಿಸುತ್ತದೆ.

ಲಲಿತೆಯ ಕಥೆಯಲ್ಲಿ ಎರಡು ಮುಖ್ಯವಾದ ಪಾತ್ರಗಳು ಕಾಣಬರುತ್ತವೆ. ಒಂದು ಲಲಿತೆಯಾದರೆ, ಮತ್ತೊಂದು ಭಂಡಾಸುರ. ಆದರೆ ಅವೆರಡರ ನಡುವಲ್ಲಿ ಮತ್ತೊಂದು ಪಾತ್ರ ಕಾಣದೇ ಇದ್ದರೂ ಆಸ್ತಿತ್ವದಲ್ಲಿ ಇರುತ್ತದೆ. ಅದು ಯಾರಾದರೂ ಆಗಿರಬಹುದು. ನಾನೆಂದರೆ ನಾನು, ನೀವೆಂದರೆ ನೀವು. ಇದು ಮನೋಜಗತ್ತಿನ ವಿಚಾರಗಳಿಗೆ ಸಂಬಂಧಪಟ್ಟಿರುವುದರಿಂದ ಯಾರಾದರೂ ತಮ್ಮನ್ನು ತಾವು ಅಲ್ಲಿ ಇರಿಸಿಕೊಳ್ಳಬಹುದು.

ಲಲಿತಾ ಸಹಸ್ರನಾಮದ ಸೂಕ್ಷ್ಮತೆಗಳನ್ನು ಗಮನಿಸುತ್ತಾ ಹೋದಂತೆ, ದ ಪವರ್ ಆಫ್ ಸಬ್‌ಕಾನ್ಷಸ್ ಮೈಂಡ್‌ನ ಗುಣ ಲಕ್ಷಣಗಳು ಅನಾವರಣವಾಗುತ್ತಾ ಹೋಗುತ್ತವೆ. ಭಂಡಾಸುರನೆಂಬ ಭಂಡತನ ಈ ಸಲಿಲತೆಯ ಲಲಿತೆಗೆ ಹೇಗೆ ವೈರಿಯಾದಾನು ಎಂಬುದನ್ನು ಅದು ತಿಳಿಸುತ್ತಾ ಹೋಗುತ್ತದೆ.

ಒಟ್ಟಾರೆ ಲಲಿತೆಯನ್ನು ದ ಪವರ್ ಆಫ್ ಸಬ್‌ಕಾನ್ಷಸ್ ಮೈಂಡ್‌ನೊಂದಿಗೆ ಸಮೀಕರಿಸಿ ನೋಡುವುದು ಪುರಾಣದ ರೂಪಕಗಳನ್ನು ಮತ್ತೊಂದು ಬಗೆಯಲ್ಲಿ ಅರಿತುಕೊಳ್ಳಲು ಮಾಡುವ ಪ್ರಯತ್ನವಾಗಿ ಕಾಣುವುದು. ಲಲಿತಾ, ಭವಾನಿ ಭಾವನಾಗಮ್ಯ: ಹೇಗೆಂದು ಮುಂದೆ ನೋಡೋಣ.

ಲಂಕೇಶ್

ನಿಮ್ಮ ಈ ಪ್ರೀತಿಯ
ಪತ್ರಿಕೆಯನ್ನು ನಿಮ್ಮ
ಮನೆ ಬಾಗಿಲಿಗೇ
ತರಿಸಿಕೊಳ್ಳಿ...

ವಾರ್ಷಿಕ ಚಂದಾ ವಿವರ

ಚಂದಾ ವಿವರಗಳು ಹೀಗಿವೆ:

ಒಂದು ವರ್ಷಕ್ಕೆ	: 700 ರೂ.
ಎರಡು ವರ್ಷಕ್ಕೆ	: 1400 ರೂ.
ಮೂರು ವರ್ಷಕ್ಕೆ	: 2000 ರೂ.

ಡಿಡಿ/ಚೆಕ್‌ಗಳನ್ನು 'ಲಂಕೇಶ್' ಹೆಸರಿನಲ್ಲಿ ನಿಮ್ಮ ವಿಳಾಸದೊಂದಿಗೆ ನಮ್ಮ ಕಚೇರಿಗೆ ಕಳುಹಿಸಿ.
ನಂ.9, ಐ.ಎ.ಟಿ. ರಸ್ತೆ, ಬಸವನಗುಡಿ, ಬೆಂಗಳೂರು-560 004.
ಹೆಚ್ಚಿನ ಮಾಹಿತಿಗಾಗಿ: 9880302817 /080-26676427

ಕಪ್ಪುಹಣ ಇಟ್ಟಿರುವ 18 ಜನರ ಪೈಕಿ 16 ಜನ ಗುಜರಾತಿಗಳು!

ವಿದೇಶಗಳಲ್ಲಿ ಕೂಡಿಡಲಾಗಿರುವ ಕಪ್ಪುಹಣದ ಬಗ್ಗೆ ಗಂಟೆಗಟ್ಟಲೆ ಕೊರೆಯುವ ಮೋದಿ ಯಾಕೋ ಸ್ವದೇಶದಲ್ಲಿರುವ ಕಾಳಧನದ ಬಗ್ಗೆ ಉಸಿರೆತ್ತುತ್ತಿಲ್ಲವಲ್ಲ, ಹಾಗಿಲ್ಲ! ಆನಧಿಕೃತವಾಗಿ ಎಷ್ಟೂ ಕುಡಿಯಬಹುದು!! ಮದ್ಯಪಾನದ ಪರವಾನಗಿಯನ್ನು ಕಿಸೆಯಲ್ಲಿಟ್ಟುಕೊಂಡು ಪಾನನಿಷೇಧ ಹಿಂತೆಗೆದುಕೊಳ್ಳುವುದನ್ನು ವಿರೋಧಿಸುವ



'ಮಾದರಿ' ರಾಜ್ಯ ಗುಜರಾತಿನಲ್ಲಿಯೇ ಎಷ್ಟೊಂದು ಕಪ್ಪುಹಣ ಉತ್ಪತ್ತಿಯಾಗುತ್ತಿದೆ ಎಂಬುದರ ಅಂದಾಜು ತಿಳಿಯಲು ಒಂದೆರಡು ಉದಾಹರಣೆಗಳು ಸಾಕು.

ಎಲ್ಲರಿಗೂ ಗೊತ್ತಿರುವ ಹಾಗೆ ಗುಜರಾತಿನಲ್ಲಿ ಮದ್ಯಪಾನ ನಿಷೇಧ ಶಾಸನ ಜಾರಿಯಲ್ಲಿದೆ. ಆದರೆ ಗಲ್ಲಿಗಲ್ಲಿಗಳಲ್ಲಿಯೂ ಮದ್ಯದ ಹೊಳೆಯೇ ಹರಿಯುತ್ತದೆ. ಇದರರ್ಥ ಗುಜರಾತಿನಲ್ಲಿ ಅಧಿಕೃತವಾಗಿ ಕುಡಿಯುವ ಮಂದಿಯೂ ಅಲ್ಲಿದ್ದಾರೆಂದು ಪತ್ರಕರ್ತ ಪ್ರಶಾಂತ್ ದಯಾಲ್ ಎಂಬಾತನ ವರದಿ ತಿಳಿಸುತ್ತದೆ. ಆರುಣ್ ಜೇಟ್ಲಿ ಪ್ರಕಾರ ಗುಜರಾತಿನ ಬೀದಿಗಳಲ್ಲಿ ಕುಡುಕರ ಹಾವಳಿಯೇ ಇಲ್ಲವಂತೆ. ಆದರೆ ಗುಜರಾತಿನಲ್ಲಿ ಪ್ರಚಂಡ ಕುಡುಕರಿದ್ದಾರೆನ್ನುವುದಕ್ಕೆ ಏಪ್ರಿಲ್ 26ರಂದು ಚುನಾವಣಾ ಆಯೋಗ ಮುಟ್ಟುಗೋಲು ಹಾಕಿದ ಸಹಸ್ರಾರು ಬಾಟಲ್‌ಗಳೆ ಸಾಕ್ಷಿ.

ಪ್ರಸಕ್ತ ಚುನಾವಣೆಗಳ ಕಾಲದಲ್ಲಿ ದೇಶದಲ್ಲೆಲ್ಲೂ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಸಾರಾಯಿ ಪತ್ತೆಯಾಗಿರುವ ದಾಖಲೆಗಳಿಲ್ಲ. ಗುಜರಾತಿನಲ್ಲಿ ಸಾರಾಯಿ ಮಾರಾಟ ಒಂದು ಸುವ್ಯವಸ್ಥಿತ ಕಾಳದಂಧೆ. ಗುಜರಾತಿನಲ್ಲಿ ಪಾನನಿಷೇಧ ಇರಬೇಕೆಂದು ಒತ್ತಾಯ ಮಾಡುತ್ತಿರುವವರು ಇದೇ ಕಾಳದಂಧೆಕೋರರು! ಅಕ್ರಮ ಮಾರಾಟ ಅಂದರೆ ಭ್ರಷ್ಟಾಚಾರ ಇರಲೇಬೇಕಲ್ಲವೆ? ಹಾಗಾದರೆ ಗುಜರಾತಿನಲ್ಲಿ ಎಷ್ಟೊಂದು ಕಪ್ಪು ಹಣ ಉತ್ಪಾದನೆಯಾಗುತ್ತಿರಬಹುದು ನೀವೇ ಊಹಿಸಿ.

ಗುಜರಾತಿನಲ್ಲಿ ಬಹುತೇಕವಾಗಿ ನಗದು ಹಣದ ರೂಪದಲ್ಲಿ ನಡೆಯುವ ಸಣ್ಣಪುಟ್ಟ ವ್ಯಾಪಾರ, ಮಹಿವಾಟುಗಳು ಕಪ್ಪುಹಣದ ಇನ್ನೊಂದು ದೊಡ್ಡ ಮೂಲ. ಎಲ್ಲ ವಹಿವಾಟುಗಳಿಗೂ ಸರಿಯಾದ ರಶೀದಿ ಬೇಕೆಂದು ಒತ್ತಾಯಿಸುವವರು ಹೆಚ್ಚಾಗಿ ಕಚೇರಿಗಳಲ್ಲಿ ದುಡಿಯುವ ಮಧ್ಯಮವರ್ಗದ ಜನ. ಆದರೆ ಗುಜರಾತಿನ ಪೇಟೆಗಳಲ್ಲಿ ಇಂಥವರ ಸಂಖ್ಯೆ ತೀರಾ ಕಮ್ಮಿ. ಏಕೆಂದರೆ ತಿಂಗಳ ಸಂಬಳಕ್ಕಾಗಿ ನೌಕರಿ ಮಾಡುವವರನ್ನು ಗುಜರಾತಿಗಳು ತಿರಸ್ಕಾರದ ಭಾವನೆಯಿಂದ ನೋಡುತ್ತಾರೆ. ಹಾಗಾಗಿಯೆ ಗುಜರಾತಿನಲ್ಲಿ ಮಧ್ಯಮವರ್ಗ ಜನ ಹೆಚ್ಚಾಗಿ ವ್ಯಾಪಾರಕ್ಕೆ ಇಳಿಯುತ್ತಾರೆ. ರಾಜಕುಮಾರ್ ಸಿಲ್ಕ್ ಮಿಲ್ಸ್‌ನವರ 1980ರ ದಶಕದ ಜಾಹೀರಾತೊಂದು ಎಲ್ಲವನ್ನೂ ಹೇಳುತ್ತದೆ: 'ನೌಕರಿ ಬಿಟ್ಟುಬಿಡಿ. ವ್ಯಾಪಾರ ಮಾಡಿ.' ಗುಜರಾತಿನಲ್ಲಿ ಈ ಸಣ್ಣಪುಟ್ಟ ವ್ಯಾಪಾರಗಳ ಕ್ಷೇತ್ರದಲ್ಲಿ ಎಷ್ಟು ಕಪ್ಪುಹಣ ಉತ್ಪಾದನೆಯಾಗುತ್ತದೆಂದು ಯಾರಾದರೂ ಲೆಕ್ಕ ಇಟ್ಟಿದ್ದಾರೆಯೇ?

ಗುಜರಾತಿನಲ್ಲಿ ರಿಯಲ್ ಎಸ್ಟೇಟ್ ದಂಧೆಯಲ್ಲಿಯೂ ಸಾವಿರಾರು ಕೋಟಿ ಕಪ್ಪುಹಣ ಉತ್ಪಾದನೆಯಾಗುತ್ತದೆಂದು ಅಂದಾಜಿಸಲಾಗಿದೆ. ಹಾಗೆ ನೋಡಿದರೆ ರಿಯಲ್ ಎಸ್ಟೇಟ್ ದಂಧೆಯಲ್ಲಿ ಕಪ್ಪುಹಣ ಒಂದು ಅಖಿಲ ಭಾರತ ವಿದ್ಯಮಾನ. ಇಲ್ಲಿ ನಡೆಯುವ ಕಪ್ಪು ಬಿಳುಪಿನ ವ್ಯವಹಾರದ ಬಗ್ಗೆ ತಿಳಿಯದವರಾರು! ಎಲ್ಲೆಡೆಗಳಲ್ಲಿ ಫ್ಲಾಟ್ ಬೆಲೆಯಲ್ಲಿ



ಕಪ್ಪಿನಂಶ ಎಷ್ಟು, ಬಿಳುಪಿನಂಶ ಎಷ್ಟೆಂದ ನಿಗದಿಯಾಗಿರುತ್ತದೆ. ಈ ಕಪ್ಪಿನಂಶದಲ್ಲಿ ಗುಜರಾತ್ ರಾ ಇವತ್ತು ದೇಶದಲ್ಲೇ ನಂಬರ್ ಪಸ್! ಅಲ್ಲಿ ಕಪ್ಪಿನಂ ಶೇಕಡಾ 50ರಷ್ಟಿದೆ!! ಗುಜರಾತಿಗೆ ಹೋಲಿಸಿದ ಮುಂಬಯಿ, ದೆಹಲಿ ಮೊದಲಾದೆಡೆಗಳಲ್ಲಿ ಕಪ್ಪಿನಂ ಕಡಿಮೆಯಾಗಿದೆ.

ವಿದೇಶಗಳಲ್ಲಿ ಬಚ್ಚಿಡಲಾಗಿರುವ ಕಪ್ಪುಹಣವನ್ನು ತರಿ ಬಡವರ ಉದ್ಧಾರಕ್ಕಾಗಿ ಬಳಸುವೆನೆಂದು ಭಾಷಣ ಬಿಗಿಯು ಮೋದಿ ಮೊದಲು ಸ್ವರಾಜ್ಯ ಗುಜರಾತ್ ಮೇ ಕೇಂದ್ರೀಕರಿಸಿದರೆ ಕಾಶಿರಾಶಿ ಕಪ್ಪುಹ ಸಂಗ್ರಹಿಸಬಹುದಲ್ಲವೇ? ಮತ್ತೊಂದು ವಿಷಯ Liechtenstein Bank ನಲ್ಲಿ ಕಪ್ಪುಹಣ ಇಟ್ಟಿರು 18 ಜನರ ಪೈಕಿ 16 ಜನ ಗುಜರಾತಿಗಳು!

ಅಮಾಯಕನ ಸಾವು ಸಂಭ್ರಮಿಸುವ ಮಂದಿ ಶಾಸನಸಭೆಯಲ್ಲಿ

"ಇಂತಹ (ಈ ಮಾದರಿಯ) ನೂರಾರು ಶೂಟೌಟ್‌ಗಳು ಈ ದೇಶಕ್ಕೆ ಅನಿವಾರ್ಯ"

ಬಡಪಾಯಿ ಯುವಕ ಕಬೀರ್ ಎಂಬಾತನ ಮೇಲೆ ಗುಂಡು ಹಾರಿಸಿ ಹತ್ಯೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕರಾವಳಿ ಭಾಗದ ಕ್ಟಾ ಆರೆಸ್ಸೆಸ್‌ವಾದಿ ಬಿಜೆಪಿ ಶಾಸಕ ಸುನಿಲ್ ಕುಮಾರ್ ಎಂಬ ನಕಲಿ ದೇಶಭಕ್ತನ ಬಾಯಿಯಿಂದ ಹೊರಬಿದ್ದ ಆಣಿಮುತ್ತು.

ಅಮಾಯಕ ವ್ಯಕ್ತಿಯ ಹತ್ಯೆಯ ಕುರಿತು ಶಾಸನಸಭೆಯ ಸದಸ್ಯರಾದವರು ಇಂತಹ ಅಭಿಪ್ರಾಯ ವ್ಯಕ್ತಪಡಿಸುವುದು ಅವರ ನೈತಿಕ ದಿವಾಳಿತನಕ್ಕೆ ಹಿಡಿದ ಕನ್ನಡಿಯಾಗಿದೆ. ದೇಶಭಕ್ತರೆಂಬ ಢೋಂಗಿಗಳು ತಮ್ಮೊಂದಿಗೆ ಜೀವಿಸುತ್ತಿರುವ ಒಬ್ಬ ಮನುಷ್ಯನ ಸಾವನ್ನು ಸಂಭ್ರಮಿಸಿದ ಪರಿ ಇದು. ಬಡಪಾಯಿ ಹುಡುಗನೇನೋ ಗುಂಡಿಗೆ ಬಲಿಯಾದ. ಆದರೆ ಬಿಜೆಪಿಯ ಕಾರ್ಕಳ ಶಾಸಕ ಸುನಿಲ್ ಕುಮಾರ್ ಇಂತಹ ನೀಚ ಹೇಳಿಕೆ ನೀಡುವ ಮೂಲಕ ತನ್ನನ್ನು ತಾನು ತೆರೆದು ತೋರಿಸಿದ್ದಾರೆ. ಒಬ್ಬ ವ್ಯಕ್ತಿಯ ಸಾವನ್ನು ಈ ರೀತಿಯಲ್ಲಿ ಹುಂಡಹೋಕರಿಗಳು ಮಾತ್ರವೇ ಸಂಭ್ರಮಿಸಲು ಸಾಧ್ಯ.

ಗೋಹತ್ಯೆ ತಡೆಗೆ ಶೂಟ್‌ಔಟ್ ಒಂದೇ ಪರಿಹಾರ ಎಂದು ಬಡಬಡಿಸಿರುವುದನ್ನು ನೋಡಿದರೆ ಅವರೆಲ್ಲ ಇನ್ನೂ



ಮನುವಿನ ಕಾಲದಲ್ಲೇ ಇದ್ದಾರೆ ಎಂದು ಗೊತ್ತಾಗುತ್ತದೆ. ಮನುವಿನ ವಾರಸುದಾರರಾದ ಇವರು ಗಾಂಧಿ ಹತ್ಯೆ ಮಾಡಿದ ವ್ಯಕ್ತಿಗೆ ಜೈ ಎಂದವರು. ಆರೆಸ್ಸೆಸ್ ಕಾರ್ಯಕರ್ತರೋ ಇನ್ನಾರೋ ಈ ರೀತಿ ಮಾತನಾಡುವುದು ಎಲ್ಲರಿಗೂ ಗೊತ್ತಿದೆ. ಆದರೆ ಜನಗಳಿಂದ ಆಯ್ಕೆಯಾಗಿ, ಜನರ ಕಲ್ಯಾಣಕ್ಕಾಗಿ ಶಾಸನ ರೂಪಿಸುವಂತಹ ಜವಾಬ್ದಾರಿ ಸ್ಥಾನದಲ್ಲಿರುವ ಸಾರ್ವಜನಿಕ ಜನಪ್ರತಿನಿಧಿಯೊಬ್ಬ ಜಾತ್ಯತೀತ ತತ್ವದ ನೆಲೆಯಾದ ಹಾಗೂ ಸರ್ವಧರ್ಮಗಳ ನೆಲೆಬೀಡಾದ ನಮ್ಮ ದೇಶದ ಜಾತ್ಯತೀತ, ಸಮಾಜವಾದಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಹಾಗೂ ದೇಶದ ಸಂವಿಧಾನಕ್ಕೆ ಬದ್ಧ ಹಾಗೂ ನಿಷ್ಠವಾಗಿ ನಡೆಯುವುದಾಗಿ ಪ್ರಮಾಣವಚನ ಸ್ವೀಕರಿಸಿ ಇಂತಹ ನಕಲಿ ಎನ್‌ಕೌಂಟರ್‌ಗಳನ್ನು ಸಮರ್ಥಿಸಿಕೊಳ್ಳುವುದು ನಿಜಕ್ಕೂ ಈ ದೇಶದ ದುರಂತವಲ್ಲದೇ ಇನ್ನೇನು.

ಇದು ಸುನಿಲ್ ಕುಮಾರನ ಆರೆಸ್ಸೆಸ್ ಸಂಸ್ಕಾರ. ಗಾಂಧಿ ಹತ್ಯೆ ಮಾಡಿದ್ದು ಬಾಬರಿ ಮಸೀದಿ ಕೆಡವಿದ್ದು ಗುಜರಾತಿನಲ್ಲಿ ಗರ್ಭಿಣಿ ಹೊಟ್ಟೆಗೆ ತ್ರಿಶೂಲ ತಿವಿದು ಗರ್ಭ ಸೀಳಿದ್ದು ಈ ಆರೆಸ್ಸೆಸ್ ಶಾಲೆಗಳ ಸಂಸ್ಕಾರದ ಪಡೆದ ವ್ಯಕ್ತಿಗಳೇ ಎಂಬುದು ಈ ದೇಶದ ಜನಕ್ಕೆ ಗೊತ್ತಿಲ್ಲದ್ದೇನಲ್ಲ. ಮೋದಿ, ತೊಗಾಡಿಯಾ, ಮುತಾಲಿಕ, ಸಿಂಘಾಲ್, ಕರ್ನಲ್ ಪುರೋಹಿತ, ಉಮಾಭಾರತಿ ಇಂತಹ ಶಾಲೆಗಳ ಸಂಘದ ಸ್ನಾತಕೋತ್ತರ ಪದವೀಧರರೇ. ಈ ಸಾವು ಸಂಭ್ರಮಿಸಿದ ಕರಾವಳಿ ಶಾಸಕ ಸಹ ಇದಕ್ಕೆ ಹೊರತೇನಲ್ಲ.

ಶೂಟೌಟ್ ಪ್ರಕರಣದಲ್ಲಿ ಬಲಿಯಾದ ಅಮಾಯಕ ಕಬೀರ್ ಕುಟುಂಬದ್ದು ದನದ ವ್ಯಾಪಾರ. ಅದು ಅವರ ಹೊಟ್ಟೆಪಾಡಿನ ದಂಧೆ. ದನದ ವ್ಯಾಪಾರ ಮಾಡಬಾರದೆಂದು ಎಲ್ಲಿಯೂ ಹೇಳಿಲ್ಲ. ಅದಕ್ಕೆ ಯಾರೂ ನಿರ್ಬಂಧ ಹೇರಿಲ್ಲ. ಆದರೆ ಇದಕ್ಕೆ ಕೆಲವರು ತಮ್ಮದೇ ಆದ ಕಾನೂನು ಹೇರಿ ಅದನ್ನು ನಿಲ್ಲಿಸಲು ಪ್ರಯತ್ನಿಸುವುದು ಇತ್ತೀಚಿನದ್ದೇನಲ್ಲ. ಇದೊಂದು ರೀತಿಯಲ್ಲಿ 'ಆ'ನೈತಿಕ ಪೊಲೀಸ್‌ಗಿರಿಕೆ. ಮನೆಮನೆಗಳಲ್ಲಿ ಕುಳಿತು ಯಾವುದೋ ಪುಸ್ತಕ ನೋಡಿ ಆಮಾಯಕರಿಗೆ ಆ ಪೂಜೆ ಈ ಪೂಜೆ ಎಂದು ನಿಂಬೆಹಣ್ಣು ಮಂತ್ರಿಸಿಕೊಡುವುದು ಅಪರಾಧವಾಗದಿದ್ದರೆ, ದನದ

ಚರ್ಮೋದ್ಯಮ ಇಂದು ನಿನ್ನೆಯ ಕಸುಬೇನಲ್ಲ. ಅದರಿಂದಲೇ ಬಹುತೇಕ ವಿಹಿಂಪ ನೇತಾರರೆಲ್ಲ ಕೋಟ ಕೋಟ ಸಂಪಾದಿಸಿದಿರುವುದೂ ಸುಳ್ಳಲ್ಲ. ಅವರೆಲ್ಲ "ಸಂಘಕ್ಕೆ" ದೇಣಿಗೆ ನೀಡುವುದು ಬಹುಕಾಲದಿಂದಲೂ ನಡೆದುಕೊಂಡು ಬಂದ "ರೂಢಿ".

ಭಾರತದ ಸಂವಿಧಾನದ ಚೌಕಟ್ಟಿನಲ್ಲಿ ನಡೆಯುವ ಚುನಾವಣೆಗಳಲ್ಲಿ ಗೆದ್ದು ಬಂದು ಆ ಸಂವಿಧಾನವನ್ನು ಅಳಿಸಿ ಕೇಸರಿ ಅಕ್ಷರಗಳಲ್ಲಿ ಅದನ್ನು ಮತ್ತೆ ಬರೆದು ಅದಕ್ಕೆ ಕೇಸರಿ ಕವಚ ಹಾಕುವ ಕುತಂತ್ರ ಸದ್ದಿಲ್ಲದೆ ದೇಶದಲ್ಲಿ ನಡೆಯುತ್ತಿದೆ. ಹಾಗೆಯೇ ದೇಶದ ಸಂವಿಧಾನಕ್ಕೆ ಅನುಗುಣವಾಗಿ ಪ್ರಮಾಣವಚನ ಸ್ವೀಕರಿಸಿ ಅದಕ್ಕೆ ವಿರುದ್ಧವಾಗಿ ವರ್ತಿಸುವ ನಮ್ಮ ಶಾಸಕರು ಮತ್ತು ಸಂಸದರು ಹೆಚ್ಚುತ್ತಿರುವುದರ ವಿರುದ್ಧ ನಮ್ಮ ಜನಸಮುದಾಯ ಜಾಗೃತರಾಗುವುದು ಇಂದಿನ ಅಗತ್ಯವಾಗಿದೆ. ಈ ರೀತಿಯ ಕಟ್ಟರ್ ಕೋಮುವಾದಿಗಳಿಂದ ನಮ್ಮ ದೇಶವನ್ನು, ನಮ್ಮ ಸಂಸದೀಯ ಪ್ರಜಾತಂತ್ರ ವ್ಯವಸ್ಥೆಯನ್ನು ಕಾಪಾಡಬೇಕಾಗಿದೆ.

ಅಮಾಯಕ ವ್ಯಕ್ತಿಯೊಬ್ಬನ ಹತ್ಯೆಯಾದಾಗ ರಾಜ್ಯದಲ್ಲಿ ಅಧಿಕೃತ ವಿರೋಧ ಪಕ್ಷವಾದ ಭಾರತೀಯ ಜನತಾ ಪಕ್ಷ ಘಟನೆಯನ್ನು ತೀವ್ರವಾಗಿ ಖಂಡಿಸಿ ರಾಜ್ಯ ಸರ್ಕಾರವನ್ನು ತುದಿಗಾಲಲ್ಲಿ ನಿಲ್ಲಿಸಬೇಕಾಗಿತ್ತು ಆದರೆ ಇಲ್ಲಿ ನಡೆದದ್ದು ತ್ವಿರುದ್ಧ ಶೂಟೌಟ್‌ನಲ್ಲಿ ಸತ್ತನ ಹಿಂದೂಪಾದೇನು, ಮುಸ್ಲಿಮ ರಾದೇನು ಎಲ್ಲರ ಜೀವವೂ ಒಂದೇ. ಎಲ್ಲರ ಜೀವಕ್ಕೂ ಒಂದೇ ಬೆಲೆ. ಬಲಿಯಾದವ ಹಿಂದೂಪಾದರೆ ಖಂಡಿಸುವ ಮುಸ್ಲಿಮಾಗಿದ್ದರೆ ಸಮರ್ಥಿಸಿಕೊಳ್ಳುವ ಇಂತಹ ವ್ಯಕ್ತಿಗಳಿಂದ ಇನ್ನಾವ ಪುರುಷಾರ್ಥವನ್ನು ನಿರೀಕ್ಷಿಸಲು ಸಾಧ್ಯ?

ನಮ್ಮ ದೇಶದಲ್ಲಿ ದನ ಮಾರಾಟವಷ್ಟೆ ನಡೆಯುತ್ತಿಲ್ಲ. ಭ್ರೂಣ ಹತ್ಯೆಗಳು, ಅತ್ಯಾಚಾರ, ಅನಾಚಾರಗಳು, ಹಗಲುರಾತ್ರಿಯೆನ್ನದೆ ನಡೆಯುತ್ತಿದ್ದರೂ ಇದನ್ನು ತಡೆಯಲು ಶೂಟೌಟ್ ಮಾಡಲು ಈ ಸಂಘವಾದಿಗಳು ಏಕೆ ಒತ್ತಾಯಿಸುವುದಿಲ್ಲ. ದಲಿತರು ಮೇಲ್ಜಾತಿ ಮಹಿಳೆಯನ್ನು ಮದುವೆಯಾದರೆ ಅವನನ್ನು ಕೊಚ್ಚಿ ತುಂಡು ಮಾಡಿದ್ದು ಇದೇ ಜಾತಿವಾದಿ ಸಂಸತಿಯ ಮಂದಿಯೇ. ಆದರೆ ದಲಿತರನ್ನು ಕೊಚ್ಚಿ ಹಾಕಿದವರ ವಿರುದ್ಧ ಶೂಟೌಟ್‌ಗೆ ಒತ್ತಾಯಿಸಿದರೇ ಇವರು? ಇಲ್ಲ, ಏಕೆಂದರೆ ಇವರ ದೃಷ್ಟಿಯಲ್ಲಿ ದಲಿತ ಯುವಕ ಮೇಲ್ಜಾತಿ ಮಹಿಳೆ ಮದುವೆಯಾದದ್ದು ಅಪರಾಧ. ಇವರ ಕಣ್ಣು ಮದುಳು, ರಕ್ತ ಎಲ್ಲಕ್ಕೂ ಹಳದಿ ರೋಗ ಬಡಿದಿರುವಾಗ ಇವರು ಇನ್ನೇನು ಯೋಚಿಸಿಯಾರು, ಇನ್ನೇನು ಮಾಡಿಯಾರು.

ಬಿಜೆಪಿ ಸಂಸದನೊಬ್ಬ ವಿದೇಶಕ್ಕೆ ಮಾನವ ಸಾಗಾ ಮಾಡಿದ್ದು ಇವರ ದೃಷ್ಟಿಯಲ್ಲಿ ಅಪರಾಧವಲ್ಲ, ಅಕ್ರಮವಾ ಪರಸ್ತ್ರೀಯರ ಮಂಚ ಹತ್ತುವುದು, ಸಿಕ್ಕಸಿಕ್ಕವರಿಗೆ ಮುತ್ತ ಕೊಡುವುದು, ಪವಿತ್ರ ಶಾಸನಸಭೆಯಲ್ಲಿ ಅಶ್ಲೀಲ ಚಿತ್ರ ನೋಡುವುದರಲ್ಲಿ ಇವರಿಗೆ ತಪ್ಪೇನು ಕಾಣಿಸುವುದಿಲ್ಲ.

ಆಟಲ್ ಬಿಹಾರಿ ವಾಜಪೇಯಿ ಪ್ರಧಾನಿಯಾಗಿದ್ದಾ ನಮ್ಮ ದೇಶದಿಂದ ಟನ್‌ಗಟ್ಟಲೇ ಗೋಮಾಂಸ ರಫ್ತಾಗು ದ್ದು ಇವರಿಗೆ ಗೊತ್ತಿಲ್ಲವೇ? ಆಗ ಇದನ್ನು ತಡೆಯಲ ಆಟಲ್ ಬಿಹಾರಿಯಂತಹ ವಿಚಾರವಾದಿ ಮುಂದಾಗಲಿ ಅಮಾಯಕನ ಸಾವನ್ನು ಸಂಭ್ರಮಿಸುವ ಈ ಜನಕ್ಕೆ ಇದ ಗೊತ್ತಿಲ್ಲವೇ? ಗೋಹತ್ಯೆ ಮಾಡಿದವರನ್ನು ಶೂಟೌಟ್ ಮಾಡಬೇಕೆಂದರೆ ಇಂತಹ ಗುಂಡನ್ನು ಯಾರಿಗೆ ಮೊದಲ ಹೊಡೆಯಬೇಕು ಎನ್ನುವುದನ್ನು ಅಮಾಯಕನ ಸಾ ಸಂಭ್ರಮಿಸುವ ವ್ಯಕ್ತಿಗಳೇ ಹೇಳಲಿ.

ದೇಶಭಕ್ತರೆಂದು ತೋರಿಸಿಕೊಳ್ಳುತ್ತಾ ಭಾರತಮಾತೆಯ ಚಿತ್ರದ ಧ್ವಜ ಹಿಡಿದು ಕೇಕೆ ಹಾಕುವ ಈ ಮಂದಿ ನಾವು ಎತ್ತ ಸಾಗುತ್ತಿದ್ದೇವೆಂಬುದು ಗೊತ್ತಿದೆಯೇ? ಇಂತ ವ್ಯಕ್ತಿಗಳು ಶಾಸನಸಭೆಯಲ್ಲಿರಲು ಅರ್ಹರೇ?

ಈ ಎಲ್ಲ ವಿಷಯಗಳ ಬಗ್ಗೆ ನಮ್ಮ ಜಾತ್ಯತೀ ಗಣರಾಜ್ಯದ ದೇಶವಾಸಿಗಳು ಚಿಂತಿಸಬೇಕಾಗಿದೆ.

- ಬೆನಕನಹಳ್ಳಿ ಶೇಖರ್‌ಗೌಡ, ಬೆಂಗಳೂರು

2002ರ ಗುಜರಾತ್ ಗಲಭೆಯ ಸಂದರ್ಭದ ಲಂಕೇಶ್ ಪತ್ರಿಕೆಯ ಟೈಟಲ್ ಇನ್ನೂ ನೆನಪಿದೆ. ಆ 'ಮತ್ತೆ ಗಾಂಧಿ ಕಗ್ಗೊಲೆ' ಎಂದು ಟೈಟಲ್ ನೀಡಲಾಗಿತ್ತ ಆದರೂ ನಮ್ಮ ಜನಕ್ಕೆ ಮೋದಿ ಬೇಕಂತೆ. ನಿಜಕ್ಕೂ ಗೌ ಲಂಕೇಶ್ ತಂಡ ನಮ್ಮ ಸಾಕ್ಷಿ ಪ್ರಜ್ಞೆ ಇದ್ದಂತೆ. ಥ್ಯಾಂಕ

- ಓದುಗ, ಎಸ್‌ಎಂಎಸ್ ಮೂಲ

ಪತ್ರಿಕೆ ಕಾಂಗ್ರೆಸ್ ಏಜಂಟ್ ಅಲ್ಲ, ಅದು ಜಾತ್ಯತೀ ಮತ್ತು ಸಮಾಜವಾದಿ ನಿಲುವುಗಳನ್ನು ತೊಂದಿರುವ ಪತ್ರಿ

- ಓದುಗ, ಎಸ್‌ಎಂಎಸ್ ಮೂಲ

ಮಂತ್ರಿ ಅಂಬರೀಷರನ್ನು ಕಲಿಯುಗದ ಕರ್ಣ ಎಂ ಮಾಧ್ಯಮದವರು ಬಣ್ಣಿಸಿದಾಗ ಖುಷಿ ಆಗಿತ್ತು, ಅವ ಮಹಾನ್ ಜೂಜುಕೋರ, ಕುಡುಕ ಆನ್ನೋದನ್ನು ಮರೆತ ಆದರೆ ತನಗೆ ರಾಜಕೀಯ ಸ್ಥಾನಮಾನ ಕೊಟ್ಟ ಪ ಕೈಕೊಟ್ಟು ಮಂಡ್ಯದ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಕೆ ಮಾಡಿದ್ದನ್ನು ಕೇಳಿದಾಗ - ಒಡೆಯನಿಗೆ ಕೊನೆಯವರೆಗ

'ಮೆಜೆಸ್ಟಿಕ್'- ಹೀರೋ ಆಗಿ ದರ್ಶನ್ ಮತ್ತು ಕ್ಯಾಮೆರಾಮ್ಯಾನ್ ಆಗಿ ನನಗೆ ಮೊದಲ ಚಿತ್ರ

ಸಂದರ್ಶನ



'ಕರಿಯ', 'ಎಕ್ಸ್ಕ್ಯೂಸ್ ಮಿ', 'ಪ್ರೀತಿ ಏಕೆ ಭೂಮಿ ಮೇಲಿದೆ', 'ಜೋಗಿ', 'ಸತ್ಯ ಇನ್ ಲವ್', 'ಉಯ್ಯಾಲೆ', 'ಭಾಗ್ಯದ ಬಳೆಗಾರ', 'ಬದ್ರಿ' ಸೇರಿದಂತೆ ಸುಮಾರು ಐವತ್ತಕ್ಕೂ ಹೆಚ್ಚು ಸಿನಿಮಾಗಳಿಗೆ ಛಾಯಾಗ್ರಾಹಕರಾಗಿ ಕೆಲಸ ಮಾಡಿರುವ ಛಾಯಾಗ್ರಾಹಕ ಎಂ.ಆರ್.ಸೀನು ಇಲ್ಲಿ ತಮ್ಮ ಅಂತರಂಗವನ್ನು ತೆರೆದಿಟ್ಟಿದ್ದಾರೆ.

ಇದೀ ಚಿತ್ರದ ಕ್ಯಾಮೆರಾ ನಿಭಾಯಿಸಲು ನಿರ್ದೇಶಕ ಪಿ.ಎನ್.ಸತ್ಯ ಹಾಗೂ ನಿರ್ಮಾಪಕ ರಾಮಮೂರ್ತಿಯವರೂ ಒಪ್ಪಿಗೆ ನೀಡಿದ್ದರಿಂದ ನಾನು 'ಮೆಜೆಸ್ಟಿಕ್' ಚಿತ್ರದ ಮೂಲಕ ಸ್ವತಂತ್ರ ಕ್ಯಾಮೆರಾಮ್ಯಾನ್ ಆದೆ. ಹಾಗೆ ನೋಡಿದರೆ ದರ್ಶನ್ ಮತ್ತು ನಾನು ಮೈಸೂರಿನಲ್ಲಿ ಒಟ್ಟಿಗೇ ಓದಿದ್ದು. ನನ್ನ ಕ್ಲಾಸ್‌ಮೇಟ್ ಒಬ್ಬ ಹೀರೋ ಆದ ಚಿತ್ರಕ್ಕೆ ಕ್ಯಾಮೆರಾ ಹಿಡಿದಿದ್ದು ನನಗೆ ಹೆಮ್ಮೆ ಎನಿಸಿತ್ತು. ಅದಕ್ಕೂ ಮೊದಲು ದರ್ಶನ್ ಅಸಿಸ್ಟೆಂಟ್ ಕ್ಯಾಮೆರಾಮ್ಯಾನ್ ಆಗಿ ಬಿ.ಸಿ. ಗೌರಿಶಂಕರ್ ಜೊತೆ ಕೆಲಸ ಮಾಡಿದ್ರಲ್ಲಾ... ಆಗ ಒಟ್ಟಿಗೇ ಕೆಲಸ ಮಾಡಿದ್ದಿ.

* ಈವರೆಗೆ ಯಾವ್ಯಾವ ಸಿನಿಮಾಗಳಿಗೆ ಛಾಯಾಗ್ರಾಹಕರಾಗಿ ಕೆಲಸ ಮಾಡಿದ್ದೀರಿ?

'ಕರಿಯ', 'ಎಕ್ಸ್ಕ್ಯೂಸ್ ಮಿ', 'ಪ್ರೀತಿ ಏಕೆ ಭೂಮಿ ಮೇಲಿದೆ', 'ಜೋಗಿ', 'ಸತ್ಯ ಇನ್ ಲವ್', 'ಉಯ್ಯಾಲೆ', 'ಭಾಗ್ಯದ ಬಳೆಗಾರ', 'ಮಸ್ತ್ ಮಜಾ ಮಾಡಿ', 'ಸ್ನೇಹಿತರು', 'ಮನಸಿನ ಮಾತು', 'ಜಾಜಿ ಮಲ್ಲಿಗೆ', 'ಬದ್ರಿ', 'ದಿಲ್' ಸೇರಿದಂತೆ ಸುಮಾರು ಐವತ್ತಕ್ಕೂ ಹೆಚ್ಚು ಸಿನಿಮಾಗಳಿಗೆ ಛಾಯಾಗ್ರಾಹಕನಾಗಿ ಕೆಲಸ ಮಾಡಿದ್ದೀನಿ.

* ನೀವು ಇಷ್ಟಪಡುವ ಕ್ಯಾಮೆರಾಮ್ಯಾನ್‌ಗಳು ಯಾರ್ಯಾರು? ಯಾಕೆ?



ಮಧುಸೂದನ್, ಪಿ.ಸಿ.ಶ್ರೀರಾಮ್, ವಿ.ಕೆ.ಮೂರ್ತಿ, ಬಿ.ಸಿ.ಗೌರಿಶಂಕರ್ ನಾನು ಇಷ್ಟದ ಕ್ಯಾಮೆರಾಮ್ಯಾನ್‌ಗಳಲ್ಲಿ ಪ್ರಮುಖರು. 'ರಣಧೀರ', 'ಶಂಕರ್ ಗುರು', 'ಮುತ್ತಣ್ಣ' ಚಿತ್ರಗಳಲ್ಲಿನ ಮಧುಸೂದನ್ ಅವರ ವರ್ಕ್ ನನಗೆ ತೀರಾ ಪ್ರಭಾವ ಬೀರಿರುವಂಥದ್ದು. ಕಥೆಯಲ್ಲಿ ಡಬಲ್ ರೋಲ್‌ಗಳಿದ್ದಾಗ ಮಾಸ್ಕಿಂಗ್ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಮಧುಸೂದನ್ ಅವರ ಕೆಲಸ ಅದ್ಭುತವಾದದ್ದು. ಹಾಗೇನೆ, ಪಿ.ಸಿ.ಶ್ರೀರಾಮ್ ಲೈಟಿಂಗ್ ವಿಷಯದಲ್ಲಿ ಎತ್ತಿದ ಕೈ. ಇನ್ನು ವಿ.ಕೆ.ಮೂರ್ತಿ ಅವರ ಬಗ್ಗೆ ಮಾತಾಡುವಂತಿಲ್ಲ. ಅವರು ಆಲ್‌ರೌಂಡರ್. ಬಿ.ಸಿ.ಗೌರಿಶಂಕರ್ ವಿಷಯಕ್ಕೆ ಬಂದರೆ ಫ್ರೇಮಿಂಗ್‌ನಲ್ಲಿ ಇಷ್ಟವಾಗುತ್ತಾರೆ. ಆಗಲೇ ಹೇಳಿದೆನಲ್ಲ ಅವರ ಜೊತೆ 'ಓಂ' ಮತ್ತು 'ಜನುಮದ ಜೋಡಿ' ಚಿತ್ರಗಳಿಗೆ ಕೆಲಸ ಮಾಡಿದೆ ಅಂತ. ಈ ಎರಡೂ ಚಿತ್ರಗಳು ಬೇರೆ ಬೇರೆ ಬಗೆಯ ಕಥೆ ಇರುವಂಥವು. ಈ ಎರಡೂ ಚಿತ್ರಗಳು ಒಬ್ಬ ಕ್ಯಾಮೆರಾಮ್ಯಾನ್‌ನಿಂದ ಬೇರೆ ಬೇರೆ ಬಗೆಯ ಕೆಲಸವನ್ನು ಬೇಡುತ್ತವೆ. ಆ ಮಟ್ಟಿಗೆ ಎರಡು ಬೇರೆ ಬೇರೆ ತೆರನಾದ ಚಿತ್ರಗಳಿಗೆ ಗೌರಿಶಂಕರ್ ಅದ್ಭುತವಾಗಿ ಕೆಲಸ ಮಾಡಿದ್ದಾರೆ. ಈ ಎರಡು ಚಿತ್ರಗಳಲ್ಲಿ ನಾನು ಬಹಳಷ್ಟು ಕಲಿತೆ ಎನ್ನಬಹುದು. ಗೌರಿಶಂಕರ್ ಅವರು 'ಓಂ' ಚಿತ್ರದಲ್ಲಿ ಮಾಡಿದ ಕೆಲಸವನ್ನು ಸ್ಫೂರ್ತಿಯಾಗಿಟ್ಟುಕೊಂಡು 'ಕರಿಯ' ಸಿನಿಮಾಗೆ ಕ್ಯಾಮೆರಾ ವರ್ಕ್ ಮಾಡಿದೆ. ಅದೇ ರೀತಿ, ಅವರ 'ಜನುಮದ ಜೋಡಿ' ಚಿತ್ರದ ವರ್ಕಿಂಗ್ ಸ್ಟೈಲ್ ಅನ್ನು ಸ್ಫೂರ್ತಿಯಾಗಿ ಸ್ವೀಕರಿಸಿ 'ಎಕ್ಸ್ಕ್ಯೂಸ್ ಮಿ' ಚಿತ್ರಕ್ಕೆ ಕ್ಯಾಮೆರಾ ವರ್ಕ್ ಮಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

* ನಿಮ್ಮ ಮುಂದಿನ ಯೋಜನೆಗಳೇನು?

ಕ್ಯಾಮೆರಾಮ್ಯಾನ್ ಆಗಿ ಕೆಲಸ ಮಾಡಲು ಒಂದೆರಡು ಚಿತ್ರಗಳು ಮಾತುಕತೆಯ ಹಂತದಲ್ಲಿವೆ. ಉಳಿದಂತೆ ನನ್ನದೇ ಒಂದು ಪ್ರೊಡಕ್ಷನ್ ಕಂಪನಿಯನ್ನು ಆರಂಭಿಸುವ ಪ್ಲಾನ್ ಇದೆ. ಆ ಕಂಪನಿ ಮುಖಾಂತರ ಹೊಸ ಹೊಸ ಪ್ರತಿಭಾನ್ವಿತ ತಂತ್ರಜ್ಞರನ್ನು ಚಿತ್ರರಂಗಕ್ಕೆ ಪರಿಚಯಿಸುವ ಧ್ಯೇಯ ನನ್ನದು. ಆ ಮೂಲಕ ಕನ್ನಡ ಚಿತ್ರರಂಗಕ್ಕೆ ಒಂದಿಷ್ಟು ಉತ್ತಮ ಚಿತ್ರಗಳನ್ನು ಕೊಡಬೇಕೆಂಬ ಖುಷಿತ.

ಸಂದರ್ಶಕ: ಹೃದಯಶಿವ

ಆದರ ಹೆಸರು 'ಖೂನ್ ಭರೀ ಮಾಂಗ್' ಅಂತ. ಆ ಚಿತ್ರದಲ್ಲಿ ರೇಖಾ, ಕಬೀರ್ ಖಾನ್ ನಟಿಸಿದ್ದರು. ರಾಕೇಶ್ ರೋಶನ್ ಅದರ ನಿರ್ದೇಶಕ. ಆ ಚಿತ್ರದ 'ಹಸ್ತೇ ಹಸ್ತೇ' ಗೀತೆ ಇನ್ನೂ ಆಗಾಗ ನನ್ನ ನೆನಪಿನ ಲಹರಿಗೆ ದಕ್ಕುತ್ತದೆ. ಸೂಪರ್ ಸಾಂಗ್ ಅದು.

* ಸಿನಿಮಾರಂಗಕ್ಕೆ ಬರಬೇಕು ಅಂತ ಯಾವಾಗ ಅನ್ನಿಸಿದ್ದು?

ಕಮ್ಮ ಕದ್ದು ಸಿನಿಮಾಗಳನ್ನು ನೋಡ್ತಿದ್ದಲ್ಲಾ ಆವಾಗಲೇ ನಾನು ಚಿತ್ರರಂಗಕ್ಕೆ ಸೇರಬೇಕು, ಚಿತ್ರರಂಗದಲ್ಲಿ ಏನಾದರು ಸಾಧಿಸಬೇಕು ಅನ್ನಿಸಿತ್ತು. ಏನು ಅಂತ ನಿಖರವಾಗಿ ಗೊತ್ತಿರಲಿಲ್ಲ. ಒಂದಿನ ಏನಾಯಿತೆಂದರೆ, ನಮ್ಮ ಮಾವ ಒಬ್ಬರಿದ್ದರು, ಅವರ ಹೆಸರು ದೇವರಾಜು ಅಂತ. ಅವರು ಡಾ.ರಾಜ್‌ಕುಮಾರ್ ಅವರ ವಜ್ರೇಶ್ವರಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಆಗಾಗ ಮೈಸೂರಿಗೆ ಶೂಟಿಂಗ್ ಪರ್ಮಿಸ್ ಬರ್ತಾ ಇದ್ರು.. ಅವರ ಜೊತೆ ನಾನೂ ಕೂಡ ಶೂಟಿಂಗ್ ನೋಡಲು ಹೋಗ್ತಿದ್ದೆ. ಆಗವರು ಮಾತಿನ ಮಧ್ಯೆ ಹೀಗೇ ಬೆಂಗಳೂರಿನ ಹೈಲ್ಯಾಂಡ್ಸ್ ಹೋಟೆಲ್ಲಿನಲ್ಲಿ ಉಳಿದುಕೊಂಡಿರುವುದಾಗಿ ಹೇಳಿದ್ದರು. ಆ ಮಾತನ್ನು ಮನಸಿನಲ್ಲೇ ಇಟ್ಟುಕೊಂಡಿದ್ದೆ. ಒಂದಿನ ಮನೆಯಲ್ಲಿ ಹೇಳದೆಕೇಳದೆ ಉಟ್ಟಬಟ್ಟೆಯಲ್ಲೇ ಬೆಂಗಳೂರಿನ ರೈಲು ಹತ್ತಿಬಿಟ್ಟೆ. ಸೀದಾ ಮೆಜೆಸ್ಟಿಕ್‌ಗೆ ಬಂದಿಳಿದವನೇ ಒಂದು ರೌಂಡ್ ಹೊಡೆದೆ. ಆಮೇಲೆ 'ಹೈಲ್ಯಾಂಡ್ಸ್ ಹೋಟೆಲ್' ಎಲ್ಲಿದೆ ಅಂತ ವಿಚಾರಿಸಿ ಅಲ್ಲಿಗೆ ಹೋದೆ. ಅಲ್ಲಿ ನಮ್ಮ ಮಾವನನ್ನು ಭೇಟಿ ಮಾಡಿ 'ಮನೆಯಲ್ಲಿ ಹೇಳದೆ ಕೇಳದೆ ಸೀದಾ ಬಂದಿದ್ದೀನಿ ಮಾವಾ... ಸಿನಿಮಾರಂಗದಲ್ಲಿ ಏನಾದರು ಕೆಲಸ ಕೊಡಿಸು... ನಾನು ನಿನ್ನ ಜೊತೇಲೆ ಇದ್ದುಬಿಡ್ತೀನಿ' ಅಂದೆ. ಮೊದಲಿಗೆ ಒಂದಿಷ್ಟು ಬೈದ ಮಾವ ಕಡೆಗೆ ಬೇರೆ ದಾರಿಯಿಲ್ಲದೆ, ನನ್ನ ಒತ್ತಾಯವನ್ನು ನಿರಾಕರಿಸಲಾಗದೆ ವಜ್ರೇಶ್ವರಿ ಕಂಪನಿಯ ಯೂನಿಟ್‌ನಲ್ಲಿ ಲೈಟ್ ಬಾಯ್ ಕೆಲಸಕ್ಕೆ ಸೇರಿಸಿದರು. ನಾನು ಲೈಟ್ ಬಾಯ್ ಆಗಿ ಕೆಲಸ ಮಾಡಿದ ಮೊದಲ ಚಿತ್ರವೆಂದರೆ 'ರಾಘವೇಂದ್ರ ರಾಜ್‌ಕುಮಾರ್' ಅಭಿನಯದ 'ಅನುಕೂಲಕ್ಕೊಬ್ಬ ಗಂಡ'. ಆನಂತರ 'ಕಲ್ಯಾಣ ಮಂಟಪ', 'ಮಿಡಿದ ಶ್ರುತಿ', 'ಭರ್ಜರಿ ಗಂಡು', 'ಮಾವನಿಗೆ ತಕ್ಕ ಅಳಿಯ' ಒಳಗೊಂಡಂತೆ ಹಲವಾರು ಚಿತ್ರಗಳಿಗೆ ಲೈಟ್ ಬಾಯ್ ಆಗಿ ಕೆಲಸ ಮಾಡಿದೆ.

* ಛಾಯಾಗ್ರಾಹಣ ವಿಭಾಗಕ್ಕೆ ಹೇಗೆ ಬಂದ್ರಿ? ಅದಕ್ಕೆ ಸ್ಫೂರ್ತಿ ಏನು?

ನಾನು ಲೈಟ್ ಬಾಯ್ ಆಗಿ ಕೆಲಸ ಮಾಡುತ್ತಿದ್ದಾಗಲೇ ಅಸೋಸಿಯೇಟ್ ಕ್ಯಾಮೆರಾಮ್ಯಾನ್ ಆಗಿ ಕೆಲಸ ಮಾಡಲು ಶುರುಮಾಡಿದೆ. ಅಣಜಿ ನಾಗರಾಜ್ ಅವರ ಜೊತೆ ಕೆಲಸ ಮಾಡಿದ ಚಿತ್ರಗಳೆಂದರೆ 'ಹಲೋ ಯಮ', 'ಹುಚ್ಚ', 'ವಂದೇ ಮಾತರಂ', 'ಸಚ್ಚ', 'ಅಯ್ಯ', 'ಮಂಡ್ಯ', 'ಕಲಾಸಿಪಾಳ್ಯ' ಇತ್ಯಾದಿ... ಈ ನಡುವೆ ಇತರ ಕ್ಯಾಮೆರಾಮ್ಯಾನ್‌ಗಳ ಜೊತೆ 'ಆಕಸ್ಮಿಕ', 'ಮುತ್ತಣ್ಣ' (ಮಧುಸೂದನ್ ಜೊತೆ), 'ನಾವಿಬ್ಬರು ನಮಗಿಬ್ಬರು', 'ಪ್ರತಿಘ್ವನಿ' ಚಿತ್ರಗಳಿಗೆ ವರ್ಕ್ ಮಾಡಿದೆ. ಹಾಗೇನೆ ಎಚ್.ಸಿ.ವೇಣು ಅವರ ಜೊತೆ 'ಏ' ಚಿತ್ರಕ್ಕೆ ಕೆಲಸ ಮಾಡಿದೆ.

* ಸ್ವತಂತ್ರ ಕ್ಯಾಮೆರಾಮ್ಯಾನ್ ಆಗಿ ನಿಮ್ಮ ಮೊದಲ ಸಿನಿಮಾ ಯಾವುದು? ಆ ಅವಕಾಶ ಹೇಗೆ ಒದಗಿಬಂತು?

ಸ್ವತಂತ್ರ ಕ್ಯಾಮೆರಾಮ್ಯಾನ್ ಆಗಿ ನನ್ನ ಮೊದಲ ಚಿತ್ರ 'ಮೆಜೆಸ್ಟಿಕ್'. ಹಾಗೆ ನೋಡಿದರೆ 'ಮೆಜೆಸ್ಟಿಕ್' ಚಿತ್ರಕ್ಕೆ ಅಣಜಿ ನಾಗರಾಜ್ ಅವರೇ ಕ್ಯಾಮರಾ ವರ್ಕ್ ಮಾಡಬೇಕಿತ್ತು. ಮೊದಲ ಮೂರು ದಿನ ಅವರೇ ಕ್ಯಾಮೆರಾ ನಿರ್ವಹಿಸಿದರು. ಆನಂತರ ನನಗೆ ಮಾಡುವಂತೆ ಹೇಳಿದರು.

ನಿಷ್ಪನಾಗಿದ್ದ ಕರ್ಣನ ಹೆಸರು ಅಂಬರೀಷ್‌ಗೆ ಸೂಕ್ತ ಅಲ್ಲ ಅನ್ನಿಸಿತು.

- ಗುಲಾಬ್ ನದಾಫ್, ಬಾಗಲಕೋಟೆ

ದಾಳಿ ಖಂಡನೀಯ

ಜ್ಯೋತಿಷ್ಯ ಮತ್ತು ಜಾತೀಯತೆ ನಾಶವಾಗಲಿ, ಸುರೇಶ್ ಭಟ್ ಬಾಕ್ರಬೈಲು ಮತ್ತು ಯೋಗೇಶ್ ಮಾಸ್ಟರ್ ಅವರುಗಳಿಗೆ ಬೆಂಬಲ ಸಿಗಲಿ. ಅಭಿವ್ಯಕ್ತಿ ಮತ್ತು ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗದಿರಲಿ.

- ಎಸ್.ವೈ.ಬಿರಾದರ, ಯಾದಗಿರಿ

ಮೋದಿ ಹೆಂಡತಿ, ಕುಟುಂಬ, ಬದುಕು, ಅಧಿಕಾರ, ಜವಾಬ್ದಾರಿ, ದೇಶ, ಇತ್ಯಾದಿ, ಎಲ್ಲವನ್ನೂ ಏನು ಅಂದುಕೊಂಡಿದ್ದಾನೆ?

ಹೆಂಡತಿಯನ್ನು ಬಚ್ಚಿಡುವ ಈ ಮತಿವಿಕಲತೆಯ ಬಗ್ಗೆ ಕನಸು ಕಟ್ಟಿಕೊಳ್ಳುತ್ತಿರುವ ಮನಸ್ಸುಗಳಿಗೆ ಏನು ಹೇಳಬೇಕು? ಪ್ರತಾಪ್ ಸಿಂಹ ಒಂದು ಕಾದಂಬರಿ ಬರೆಯೋಕೆ ವಿಕೃತ ಮೋದಿ ವಸ್ತುವಾಗಬಹುದು, ಅಷ್ಟೇ.

- ರವಿಕುಮಾರ್, ಹಾಸನ

ಪುರೋಹಿತಶಾಹಿ ಬ್ರಾಹ್ಮಣರಿಗೆ ಧಿಕ್ಕಾರ!

ಪಂಕ್ತಿ ಭೇದ ಮಾಡುವ ಉಡುಪಿಯ ಲಫಂಗ ಬ್ರಾಹ್ಮಣರನ್ನು ಬಹಿಷ್ಕರಿಸಿ. ಹಿಂದೂ ನಾವೆಲ್ಲ ಒಂದು ಎಂದು ಬೊಗಳೆ ಬಡುವ ಸೋಕಾಲ್ಡ್ ಹಿಂದೂ ಧರ್ಮದ ರಾಕ್ಷಸರು ಹೊಟ್ಟೆಗೆ ಏನು ತಿನ್ನುತ್ತಾರೆ? ಈ ದೇಶದ ವೈದಿಕ ವಿರೋಧಿ ಜನರೆಲ್ಲ ಸೇರಿ ಬ್ರಾಹ್ಮಣನನ್ನೇ ಬಹಿಷ್ಕರಿಸಬೇಕು. ಬೊಮ್ಮನ್‌ಗಳ ಜೊತೆ ಯಾವುದೇ ವ್ಯಾಪಾರ, ವ್ಯವಹಾರ ಇಟ್ಟುಕೊಳ್ಳಬಾರದು. ಅಂತಹ ಬ್ರಾಹ್ಮಣರಿಗೆ ಯಾವುದೇ ಸಹಾಯ ಮಾಡಬಾರದು.

ಇನ್ನು ಸರ್ಕಾರ ತಕ್ಷಣವೇ ಉಡುಪಿಯ ಕೃಷ್ಣ ದೇವಸ್ಥಾನವನ್ನು ಮಠಪಡಿಸಿಕೊಂಡು, ಮನುವಾದಿ ಅಷ್ಟ ಮಠಾಧೀಶರನ್ನು ಜೈಲಿಗೆ ಹಾಕಲಿ. ಮಡಿ, ಮೈಲಿಗೆ, ಮಡೆ ಸ್ನಾನ ಮಾಡಿಸುವ ಇಂಥಾ ಪುಂಡಾಟಿಕೆಯ ಸ್ವಾಮಿಗಳಿಗೆ ಧಿಕ್ಕಾರ. ಉಡುಪಿಯಲ್ಲಿ ಡಾ. ವಸಿಷ್ಠ ಶಿಷ್ಯಮಹಿಳೆಯ ಅವಮಾನ ಇದೀ ಮಾನವ ಸಂಕುಲದ ಮೇಲೆ ಎಸಗಿದ ಅತ್ಯಾಚಾರ. ಮನುಕುಲ ವಿರೋಧಿ ಧರ್ಮದ ಸ್ವಾಮಿಗಳನ್ನು, ಮುಲ್ಲಾಗಳನ್ನು, ಪಾದ್ರಿ ಪಾಸ್ಟರ್‌ಗಳನ್ನು ಧಿಕ್ಕರಿಸಿ, ನಮ್ಮ ದೇಶದ ಸಂವಿಧಾನದ ಅನುಸಾರ ಬದುಕು ನಡೆಸುವ ಆಶಯ ನಮ್ಮೆಲ್ಲರದ್ದಾಗಲಿ.

- ಬಸವರಾಜ್, ಎಸ್ಎಂಎಸ್ ಮೂಲಕ

ವಿ.ಸೂ : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪತಿಕ್ರಿಯೆಗಳನ್ನು 9980331427 ನಂಬರ್‌ಗೂ ತಕ್ಷಣಕ್ಕೆ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 21-05-2014 RNI No. KARKAN2005/14648

ತಿಂಗಳಾಂತ್ಯಕ್ಕೆ ದೃಶ್ಯಂ ತೆರೆಗೆ

ಎಲ್ಲ ಅಂದುಕೊಂಡಂತೆ ಆದರೆ ಮೇ 30ರಂದು ಪಿ.ವಾಸು-ವಿ.ರವಿಚಂದ್ರನ್ ಕಾಂಬಿನೇಷನ್ನಿನ ಸಿನಿಮಾ 'ದೃಶ್ಯಂ' ತೆರೆಗೆ ಬರಲಿದೆ. ಆ ದಿನ ರವಿಚಂದ್ರನ್ ಅವರ ಜನ್ಮದಿನವಾದ ಕಾರಣ ಆ ದಿನವೇ 'ದೃಶ್ಯಂ' ತೆರೆ ಕಂಡರೆ ಚಿಂದಿ ಅನ್ನೋದು ಚಿತ್ರತಂಡದ ಅಂಬೋಣ. ಕಳೆದ ಫೆಬ್ರವರಿ ತಿಂಗಳಲ್ಲಿ ಶೂಟಿಂಗ್ ಶುರು ಮಾಡಿಕೊಂಡ ಈ ಚಿತ್ರಕ್ಕಾಗಿ ಮೈಸೂರು, ಮಡಿಕೇರಿ, ಸಕಲೇಶಪುರ ಒಳಗೊಂಡಂತೆ ಅನೇಕ ಕಡೆಗಳಲ್ಲಿ ದೃಶ್ಯಗಳನ್ನು ಸೆರೆಹಿಡಿಯಲಾಗಿದೆ. ಈಗಷ್ಟೇ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಸಾಂಗವಾಗಿ ಸಾಗುತ್ತಿದ್ದು ನಿರೀಕ್ಷಿತ ದಿನಾಂಕದಂದು 'ದೃಶ್ಯಂ' ರವಿಚಂದ್ರನ್ ಫ್ಯಾನ್ಸ್‌ಗಳ ಮುಂದೆ ಬರಲಿದೆಯಂತೆ.

ಕಳೆದ ವರ್ಷ ಕೇರಳದಲ್ಲಿ ಭರ್ಜರಿಯಾಗಿ ಓಡಿದ 'ದೃಶ್ಯಂ'ಗೆ ಮೋಹನ್‌ಲಾಲ್ ಅಭಿನಯ ಕಳೆ ತಂದಿತ್ತು. ನಿರ್ದೇಶಕ ಪಿ.ವಾಸು ಇದೇ ಮೋಹನ್‌ಲಾಲ್ ಅಭಿನಯದ 'ಮಣಿಚಿತ್ರತಾಳ್' ಎಂಬ ಮಲಯಾಳಂ ಚಿತ್ರವನ್ನು ಕನ್ನಡಕ್ಕೆ ವಿಷ್ಣುವರ್ಧನ್ ಹಾಕಿಕೊಂಡು 'ಆಪ್ತಮಿತ್ರ' ಎಂಬ ಹೆಸರಿನಡಿ ತಂದು ಯಶಸ್ವಿಯಾಗಿದ್ದರು. ಇದೇ 'ಆಪ್ತಮಿತ್ರ' ಚಿತ್ರವು ತಮಿಳಿನಲ್ಲಿ ರಜನಿಕಾಂತ್ ಅಭಿನಯದಲ್ಲಿ 'ಚಂದ್ರಮುಖಿ' ಎಂಬ ಹೆಸರಿನಡಿ ನಿರ್ಮಾಣವಾಗಿ ಅದ್ಭುತ ಯಶಸ್ಸು ಕಂಡದ್ದೂ ನಿಮಗೆ ಗೊತ್ತಿರುವಂಥದ್ದೇ.

ಪಿ.ವಾಸು ರವಿಚಂದ್ರನ್ ಜೋಡಿ 'ದೃಶ್ಯಂ' ಮೂಲಕ ಮೋಡಿ ಮಾಡಬಲ್ಲದೇ ಎಂಬುದನ್ನು ಕಾದುನೋಡಬೇಕು.

ಮಾಣಿಕ್ಯ: ಫಸ್ಟ್ ವೀಕ್ ಪೇರ್ ಅಮೌಂಟ್ ಏಳು ಕೋಟಿ

ರಾಜ್ಯಾದ್ಯಂತ ಬರೋಬ್ಬರಿ ಇನ್ನೂರ ಆರು ಥಿಯೇಟರುಗಳಲ್ಲಿ ಬಿಡುಗಡೆಯಾದ 'ಮಾಣಿಕ್ಯ' ಚಿತ್ರದ ಮೊದಲ ವಾರದ ಪೇರ್ ಅಮೌಂಟು ಏಳು ಕೋಟಿ ಎಂದರೆ ನಿಮಗೆ ಆಚ್ಚರಿ ಎನಿಸಬಹುದು. ಚಿತ್ರವು ಹೀಗೇ ತನ್ನ ಕ್ರೇಜ್ ಕಾಪಾಡಿಕೊಂಡರೆ ಎರಡನೇ ವಾರದ ಪೇರ್ ಅಮೌಂಟ್ ಮೂರು ಕೋಟಿ ದಾಟುವುದರಲ್ಲಿ ಅನುಮಾನವಿಲ್ಲ. ಸ್ವತಃ ಎನ್.ಕುಮಾರ್ ಅವರೇ ರಾಜ್ಯಾದ್ಯಂತ ಬಿಡುಗಡೆ ಮಾಡಿರುವ ಈ ಚಿತ್ರಕ್ಕೆ ಒಳ್ಳೆಯ ಓಪನಿಂಗ್ ಸಿಕ್ಕಿರೋದು ಚಿತ್ರತಂಡಕ್ಕೆ ಖುಷಿ ಕೊಟ್ಟಿದೆಯಂತೆ.

ರವಿಚಂದ್ರನ್-ಸುದೀಪ್ ಕಾಂಬಿನೇಶನ್‌ನಲ್ಲಿ ಹೊರಬರುತ್ತಿರುವ 'ಮಾಣಿಕ್ಯ' ಸೌಂಡ್ ಮಾಡಲಿದೆ ಎಂದು ಮೊದಲೇ ಮನಗಂಡಿದ್ದ ಎನ್.ಕುಮಾರ್ ರಾಜ್ಯದ ಪ್ರಮುಖ ಟಾಕೀಸುಗಳಲ್ಲಿಯೇ ಚಿತ್ರವನ್ನು ಬಿಡುಗಡೆ ಮಾಡಿದ್ದರು. ಬೆಂಗಳೂರಿನ ವೀರೇಶ ಸೇರಿದಂತೆ, ದೊಡ್ಡಬಳ್ಳಾಪುರ, ಕೊಪ್ಪಳಗಳಲ್ಲಿ ಎರಡೆರಡು ಸ್ಕ್ರೀನ್‌ನಲ್ಲಿ ಬಿಡುಗಡೆ ಮಾಡಿದ್ದರು. ಉಳಿದಂತೆ ಬೆಂಗಳೂರಿನ 'ಸಂತೋಷ್' ಜೊತೆಗೆ 'ತ್ರಿವೇಣಿ'ಯಲ್ಲಿಯೂ ಬೆಳಿಗಿನ ಆಟದಲ್ಲಿ 'ಮಾಣಿಕ್ಯ' ಪ್ರದರ್ಶನ ಕಾಣುವಂತೆ ಮಾಡಿದ್ದಾರೆ.

ತೆಲುಗಿನ ಸೂಪರ್ ಹಿಟ್ ಚಿತ್ರ 'ಮಿರ್ಚಿ'ಯನ್ನು ಯಥಾವತ್ತು ಕನ್ನಡಕ್ಕೆ ಇಳಿಸುವಲ್ಲಿ ನಿರ್ದೇಶಕ ಸುದೀಪ್ ಭೇಷ್ ಎನಿಸಿಕೊಳ್ಳುತ್ತಾರೆ. ರವಿಚಂದ್ರನ್ ಪಾತ್ರಕ್ಕೆ ಏನು ಬೇಕೋ ಅಷ್ಟನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ. ಆಕ್ಷನ್ ಸೀನ್‌ಗಳು ಥಿಯೇಟರಿನಲ್ಲಿ ಪ್ರೇಕ್ಷಕನ ಮೈ ಜುಮ್ಮೆನ್ನಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿವೆ ಎಂದೇ ಹೇಳಬಹುದು.

ರವಿಶಂಕರ್ ಅಭಿನಯವಂತೂ ಅದ್ಭುತ. ಚಿತ್ರದ ಮೈನಸ್ ಪಾಯಿಂಟ್‌ಗಳೆಂದರೆ, ಇಬ್ಬರೂ ನಾಯಕಿಯರು. ತೆಲುಗಿನ 'ಮಿರ್ಚಿ'ಯಲ್ಲಿ ಅನುಷ್ಕಾ ನಿರ್ವಹಿಸಿದ ಪಾತ್ರವನ್ನು 'ಮಾಣಿಕ್ಯ'ದಲ್ಲಿ ನಿಭಾಯಿಸಿರುವ ವರಲಕ್ಷ್ಮಿ ಅಗತ್ಯಕ್ಕಿಂತ ದಪ್ಪವಿರುವುದರಿಂದಲೇ ಆಕೆ ಇರುವ ಪ್ರೇಮ್‌ಗಳು ಪ್ರೇಕ್ಷಕನ ಕಣ್ಣಿಗೆ 3ಡಿ ಸಿನಿಮಾ ನೋಡಿದಂತೆ ಅನ್ನಿಸಲು ಕಾರಣವಿರಬಹುದು. ತಮಿಳು ನಟ ಶರತ್ ಕುಮಾರ್ ಮಗಳು ಎಂಬ ಏಕೈಕ ಕಾರಣದಿಂದಷ್ಟೇ ಆಕೆಯನ್ನು ಇಷ್ಟಪಡುವವರು ಇಷ್ಟಪಡಬಹುದು. ಇನ್ನೊಬ್ಬ ನಾಯಕಿಯ ಬಗ್ಗೆ ಏನೂ ಮಾತಾಡದೇ ಇರುವುದು ಒಳಿತು. ಇವೆಲ್ಲವನ್ನೂ ಒತ್ತುಗಿಟ್ಟು 'ಮಾಣಿಕ್ಯ' ನೋಡುವಂಥ ಸಿನಿಮಾ.

ಯಾರ ಮುಖಕ್ಕೆ ಫೇರ್ ಅಂಡ್ ಲವ್ಲಿ

ಶಿವರಾಜಕುಮಾರ್ ಅಭಿನಯದ 'ಚಿಲುಮೆಯೇ ನಿನ್ನ ನೋಡಲು' ಎಂಬ ಕೆಟ್ಟ ಸಿನಿಮಾದಲ್ಲಿ ಜಗತ್ತಿನ ಒಳ್ಳೊಳ್ಳೆಯ ಸ್ಥಳಗಳನ್ನು ತೋರಿಸಿದ್ದ ಡಿ.ಪಿ.ರಘುರಾವ್ ಮೊದಲಿನಿಂದಲೂ ಶಿವರಾಜಕುಮಾರ್ ಹಿಂದೆ ಬಿಕೀಟು ಹಿಡಿದುಕೊಂಡು ಓಡಾದಿದ ವ್ಯಕ್ತಿ.

ಮೊದಲಿಗೆ ಪ್ರತಿ ಶುಕ್ರವಾರ 'ಈ ಟಿವಿ' ಕ್ಯಾಮೆರಾ ಹಿಡಿದುಕೊಂಡು ಟಾಕೀಸುಗಳ ಮುಂದೆ ನಿಂತು ಅವತ್ತಷ್ಟೇ ಬಿಡುಗಡೆಯಾಗಿದ್ದ ಸಿನಿಮಾದ ಮಾರ್ನಿಂಗ್ ಶೋ ನೋಡಿಕೊಂಡು ಹೊರಬರುತ್ತಿದ್ದ ಪ್ರೇಕ್ಷಕರನ್ನುದ್ದೇಶಿಸಿ "ಹೇಗಿದೆ ಸಿನಿಮಾ?" ಎಂದು ಕೇಳುತ್ತಾ. ಅವರೆಲ್ಲ ನಾಟಕೀಯತೆಯಿಂದ "ಸಿನಿಮಾ ಸೂಪರ್.. ಹಂಡ್ರೆಡ್ ಡೇಸ್ ಗ್ಯಾರಂಟಿ..." ಇತ್ಯಾದಿ ಬೊಗಳೆಗಳನ್ನು ಬಿಡುತ್ತಿದ್ದುದ್ದನ್ನು ಪುಸಾರ ಮಾಡಿ ಒಂದಿಷ್ಟು ಸಿನಿರಸಿಕರಿಗೆ ತನ್ನ ಮುಖ ಗೊತ್ತಾಗುವಂತೆ ಮಾಡಿಕೊಂಡಿದ್ದ ವ್ಯಕ್ತಿ ಈ ರಘುರಾಮ್. ಆನಂತರ 'ಜೋಗಿ' ಚಿತ್ರದಲ್ಲೊಂದು ಪಾತ್ರ ಗಿಟ್ಟಿಸಿಕೊಂಡು, ಮತ್ತೂ ಒಂದಷ್ಟು ಮುಖ ಪರಿಚಯ ಮಾಡಿಕೊಂಡು ಶಿವಣ್ಣನ ಹಿಂದೆ ಓಡಾಡುತ್ತ ಹೇಗೋ ಅವರ ಕಾಲ್‌ಶೀಟ್ ಪಡೆದು 'ಚಿಲುಮೆಯೇ ನಿನ್ನ ನೋಡಲು' ಎಂಬ ಅಟ್ಟರ್ ಫ್ಲಾಪ್ ಸಿನಿಮಾವನ್ನು ನಿರ್ದೇಶಿಸಿದ್ದರು. ಈತನನ್ನು ನಂಬಿ ಕಾಲ್‌ಶೀಟ್ ನೀಡಿದ್ದ ಶಿವಣ್ಣನ ಇಮೇಜು ಹಾಳುಮಾಡುವುದರ ಜೊತೆಗೆ ನಿರ್ಮಾಪಕ ಎನ್.ಎಂ.ಕುಮಾರ್ ಅವರನ್ನು ಏಕದಂ ಮುಳುಗಿಸಿಬಿಟ್ಟ ಸಂಪೂರ್ಣ ಕೆಡಿಟ್ಟು ಪಡೆದ ವ್ಯಕ್ತಿಯೇ ಈ ರಘುರಾಮ್.

ಇಂಥ ರಘುರಾಮ್ ಈಗ ಕನ್ನಡ ಸಾಹಿತಿಗಳ ಬಗ್ಗೆ ಗೌರವವಿಲ್ಲದ ಬಾಯಿಬಡುಕ 'ನೆನಪಿರಲಿ' (ಮರೆತುಹೋಗದಿರಲಿ) ಪ್ರೇಮ್‌ನನ್ನು ಹಾಕಿಕೊಂಡು 'ಫೇರ್ ಅಂಡ್ ಲವ್ಲಿ' ಎಂಬ ಸಿನಿಮಾ ಮಾಡಲು ಹೊರಟಿರುವುದು ನಿಜಕ್ಕೂ ಆತಂಕ ಉಂಟು ಮಾಡುವಂಥದ್ದು.

ಈ ಮನುಷ್ಯನಿಗೆ ಎಂಥಾ ಹುಚ್ಚುತನವೆಂದರೆ, ಕನ್ನಡದಲ್ಲಿ ಯಾರೂ ಗಾಯಕರೇ ಇಲ್ಲ ಎನ್ನುವಂತೆ ವೆಸ್ಟ್ ಇಂಡೀಸ್‌ನಲ್ಲಿ ತ ಹಾಡಿಗೆ ಯಾವುದೋ ಸಂಗೀತ ಕಾರ್ಯಕ್ರಮದಲ್ಲಿ ಆರಾಮಾಗಿರುವ ಸೋ ನಿಗಮ್ ಅವರಿಂದ 'ಸ್ಕೈಪ್' ಮೂಲಕ ತನ್ನ ಚಿತ್ರಕ್ಕೊಂದು ಹಾ ಹಾಡಿಸಿಕೊಂಡಿದ್ದಾರೆ.

ಇಷ್ಟಕ್ಕೂ ಈ ವ್ಯಕ್ತಿ ವರ್ಷದ ಹಿಂದೆಯಷ್ಟೇ ತನ್ನ ಫೇಸ್ ಬುಕ್ ವಾ ಮೇಲೆ 'ಕಥೆ ಹುಡುಕಲು ಬೆನ್ನೆಗೆ ಹೊರಟಿದ್ದೇನೆ' ಎಂಬ ಪ್ರಕಟಣೆ ಪ್ರಕಟಿಸಿ ಕನ್ನಡ ಕಥೆಗಾರ, ಕಾದಂಬರಿಕಾರರನ್ನು ಅವಮಾನಿಸಲೆಂದೇ ಇರಬೇಕ ಈಗ 'ಫೇರ್ ಆಂಡ್ ಲವ್ಲಿ' ಹೆಸರಲ್ಲಿ ಯಾರ ಮುಖ ಹಾಳಿ ಮಾಡುವ ಉದ್ದೇಶವೋ ಗೊತ್ತಿಲ್ಲ, ಯಾವುದಕ್ಕೂ ನಿರ್ಮಾಪ ರಾದ ಶಿಲ್ಪಾ ರಮೇಶ್ ಜಾಗ್ರತೆಯಿಂದ ಇದ್ದರೆ ಕ್ಷೇಮ.

ಊಟಿ: ಬರಿ ಪಿಕ್ನಿಕ್ ಸ್ಪಾಟ್ ಅಷ್ಟೇ ಅಲ್ಲ

ಅವಿನಾಶ್ ನರಸಿಂಹರಾಜು ಅಭಿನಯಿಸುತ್ತಿರುವ 'ಊಟ' ಚಿತ್ರವು ಇತ್ತೀಚೆಗಷ್ಟೇ ಮುಹೂರ್ತ ಮಾಡಿಕೊಂಡಿದೆ. ಮಲಯಾಳಂ ನಟ ಮೋಹನ್‌ಲಾಲ್ ಅತಿಥಿ ಪಾತ್ರವೊಂದರಲ್ಲಿ ನಟಿಸುತ್ತಿರುವ ಈ ಚಿತ್ರದ ಶೇ. 75ರಷ್ಟು ಭಾಗದ ಚಿತ್ರೀಕರಣ ಊಟಿಯಲ್ಲಿ ನಡೆಯಲಿದ್ದು, ಉಳಿದ ಭಾಗದ ಚಿತ್ರೀಕರಣವು ಚಾಮರಾಜನಗರ, ಮೈಸೂರುಗಳಲ್ಲಿ ನಡೆಯಲಿದೆಯಂತೆ. ಕೃಷ್ಣಮೂರ್ತಿ ಎಂಬುವವರ ಕಾದಂಬರಿ 'ಪ್ರೀತಿಯ ಅರಸಿ'ಯನ್ನು ಆಧರಿಸಿ ನಿರ್ಮಾಣವಾಗುತ್ತಿರುವ ಈ ಚಿತ್ರಕ್ಕೆ ಮಹೇಶ್ ಕುಮಾರ್ ಎಂಬುವವರು ನಿರ್ದೇಶಕರು. ಅವಿನಾಶ್ ನರಸಿಂಹರಾಜು ಈ ಚಿತ್ರದಲ್ಲಿ ಗಂಭೀರ ಸ್ವಭಾವದ ಲವರ್ ಬಾಯ್ ಪಾತ್ರವನ್ನು ನಿರ್ವಹಿಸಲಿದ್ದು ಕಥೆಯಲ್ಲಿ ಎದುರಾಗುವ ಸವಾಲುಗಳನ್ನು ಸ್ವೀಕರಿಸಿ ಹೇಗೆ ತನ್ನ ಪ್ರೇಯಸಿಯನ್ನು ರಕ್ಷಿಸುತ್ತಾರೆ ಎಂಬುದು ಇಲ್ಲಿಯ ಸೀಕ್ರೇಟಂತೆ.

ಜಗ್ಗಿ ಹಾಡು ಹಿಟ್

'ಜಗ್ಗಿ' ಎನ್ನುವ ಚಿತ್ರ ಸಿದ್ಧಗೊಳ್ಳುತ್ತಿದ್ದು ಮಾರುಕಟ್ಟೆಗೆ ಬಂದಿದೆ. ಎಲ್ವಿನ್ ಜೋಷುವಾ ಸಂಗೀತದ ಈ ಚಿತ್ರದ ಹಾಡುಗಳು ಹಿಟ್ ಆಗೇ ಆಗುತ್ತವೆ ಅನ್ನೋದು ಈ ಚಿತ್ರದ ನಿರ್ದೇಶಕ ರಾಜು ಆಸ್ತಿ ಪ್ರಸ್ತುತ ನಂಬಿಕೆ. ಹಾಗೆ 'ಜಗ್ಗಿ' ಎರಡು ಕೋಟಿ ಹಣ ಹೂಡಿರುವುದಾಗಿ ನಿರ್ಮಾಪಕ ಎಸ್ಸೆನ್ ಶ್ರೀನಿವಾಸ್ ಹೇಳಿಕೊಂಡರೆ, ಮ್ಯೂಸಿಕ್ ಡೈರೆಕ್ಟರ್ ಆಲ್ ರೌಂಡ್ ಅಂತ ಗಾಯಕ ಅವಿನಾಶ್ ಭಟ್ಟ ಬಾಯ್ತುಂಬ ಹೊಗಳಿರುತ್ತಾ ಸಿನಿಮಾ ನೋಡಿ ಆಮೇಲೆ ಮಾತಾಡಿ ಎಂಬ ಡೈಲಾಗ್ ನಾಯ ನಟ ಸುನಿಲ್ ರಾಜ್ ಅವರದ್ದಾದರೆ, ತನಗೆ ಸೆಟ್‌ನಲ್ಲಿ ತಿನ್ನ ಐದೈದು ಬಾರಿ ಆಹಾರ ಪೂರೈಸುತ್ತಿದ್ದರು ಎಂಬುದು ನಾ ಅಹನಾ ಅವರ ಕೃತಜ್ಞತೆಯ ಮಾತು. ಪೈರಸಿ ತಡೆಗಟ್ಟಲು ಟಾಪ್ ಕಾಪ್‌ಗಳು ಶ್ರಮ ಪಡುತ್ತಿದ್ದಾರೆ ಎನ್ನುವುದು ಬಿಡುಗಡೆ ಮಾಡಿದ ಮೇಲೆ ಕೆಎಫ್‌ಸಿಸಿ ಪ್ರೆಸಿಡೆಂಟ್ ಎಚ್. ಗಂಗರಾಜು ಅವರ ಹಿತನುಡಿಗಳು. 'ಜಗ್ಗಿ' ಜಗ್ಗದೆ ಥಿಯೇಟರಿನಲ್ಲಿ ಉಳಿದರೆ ಈ ಎಲ್ಲಾ ಮಾತುಗಳಿಗೂ ಅರ್ಥಬರುತ್ತದೆ ಅಲ್ಲವೇ?

ಲಂಕೇಶ್ ಮೀಡಿಯಾದ

ಗೈಡ್‌ಪ್ರಕಾಶನದ ಕೊಡುಗೆ

ಶಿಕ್ಷಕರ ಅರ್ಹತಾ ಪರೀಕ್ಷೆ

ಸಿಲಬಸ್‌ಗೆ ಅನುಗುಣವಾಗಿ ಸಿದ್ಧಪಡಿಸಲಾದ ಅಧ್ಯಯನ ಸಾಮಗ್ರಿ

ಉಪಯುಕ್ತವಾದ ಸಮಗ್ರ ಮಾಹಿತಿ



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com